ದೆಹಲಿ ಕರ್ನಾಟಕ ಸಂಘದ

# ಅಭಿಮತ

ಅಕ್ಟೋಬರ್-2016
ಬೆಲೆ ರೂ. 1

## ಕಾವೇರಿಗಾಗಿ ದೆಹಲಿಯಲ್ಲಿ ಹೋರಾಟ



## 27ರ ಅಭಿಮತ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 27 ಸಂಚಿಕೆ 1
ಅಕ್ಟೋಬರ್ 2016, ಬೆಲೆ ರೂ. 1



**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 9958807225
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟಿಲ್ 9650182413
ಬಾಬುರಾಜ್ ಪೂಜಾರಿ 9818807696
ಎಸ್. ಪರಮೇಶ್ 9015332380
ತ್ಯಾಗೇಶ್ ಮೂರ್ತಿ 9868393961

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಬಸವರಾಜ್ ಎಸ್. ಕಲ್ಲೂರು
ಎನ್.ಎ. ಮಾಧವ
ಡಾ. ಅಹಲ್ಯಾ ಚಿಂತಾಮಣಿ


## ನೇರ ಮಾತು

ನೆಲ, ಜಲ ಮತ್ತು ಭಾಷೆಯ ವಿಚಾರದಲ್ಲಿ ನಮ್ಮ ರಾಜ್ಯದ ಜನರು ಭಾವಾವೇಶಕ್ಕೆ ಒಳಗಾಗುವುದು ಸಾಮಾನ್ಯ. ಅಂತೆಯೇ ಇತ್ತೀಚೆಗೆ ಕಾವೇರಿ ನದಿಯಿಂದ ತಮಿಳುನಾಡಿಗೆ ನೀರು ಬಿಡಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿದಾಗ ಬೆಂಗಳೂರು ಹೊತ್ತಿ ಉರಿಯಿತು. ಕಾವೇರಿ ನದಿಯಲ್ಲಿ ನೀರಿಲ್ಲವೆಂದು ಕರ್ನಾಟಕ ಸರಕಾರ ಅವಲತ್ತು ಕೊಂಡರೂ ಸುಪ್ರೀಂಕೋರ್ಟ್ ಸುಮ್ಮನೆ ಬಿಡಲಾರೆ ಎಂದಿತು. ನೀರು ಬಿಡದಿದ್ದರೆ ರಾಜ್ಯ ಸರಕಾರ ನ್ಯಾಯಾಂಗ ನಿಂದನೆಯ ಆರೋಪಕ್ಕೆ ಒಳಗಾಗಿ ಸರಕಾರವೇ ಬಿದ್ದು ಹೋಗುವ ಪರಿಸ್ಥಿತಿಯಿತ್ತು. ಸರಕಾರವು ಕಾನೂನು ತಜ್ಞರಿಂದ ಬೇಕಾದಷ್ಟು ಸಲಹೆಗಳನ್ನು ಪಡೆದು ಈ ಗಂಡಾಂತರದಿಂದ ಪಾರಾಗುವ ವಿಚಾರ ಚರ್ಚಿಸಿತು. ರಾಜಕೀಯ ಪಕ್ಷಗಳು ಈ ಸೂಕ್ಷ್ಮ ಸಮಯದ ಕೆಟ್ಟ ಪರಿಣಾಮಗಳನ್ನು "ರಾಜಕೀಯವಾಗಿ" ಉಪಯೋಗಿಸಬೇಕು ಎಂದು ಆಲೋಚಿಸುತ್ತಿರುವಾಗಲೇ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ತಮ್ಮ ಮುತ್ಸದ್ದಿತನವನ್ನು ತೋರಿಸಿ ತಮ್ಮ ಮಾಜಿ ಶಿಷ್ಯ, ಹಾಲಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ನೆರವಿಗೆ ಬಂದರು. ವಿಧಾನಮಂಡಲದ ವಿಶೇಷ ಅಧಿವೇಶನದಲ್ಲಿ ಕಾವೇರಿ ನೀರನ್ನು ಕರ್ನಾಟಕದಲ್ಲಿ ಕುಡಿಯುವ ಉದ್ದೇಶವಲ್ಲದೇ ಇನ್ಯಾವುದೇ ಉದ್ದೇಶಕ್ಕೆ ಬಿಟ್ಟುಕೊಡಬಾರದೆಂದು ನಿರ್ಣಯಿಸಿ ಸುಪ್ರೀಂ ಕೋರ್ಟಿನ ಎದುರು ಮತ್ತೆ ತಮ್ಮ ಅಸಹಾಯಕತೆಯನ್ನು ಭಿನ್ನವಿಸಿಕೊಳ್ಳಲು ರಾಜ್ಯ ಸರಕಾರವು ನಿರ್ಧರಿಸಿತು.

ಕಾನೂನು ತಜ್ಞರು ಸರಕಾರಕ್ಕೆ ಸರಿಯಾದ ರೀತಿಯಲ್ಲಿ ನೆರವಾಗುತ್ತಿಲ್ಲ ಎಂಬ ಅಸಮಾಧಾನವು ಜನರಲ್ಲಿ ಮೂಡಿಬಂತು. ಜನರಿಗೆ ಕುಡಿಯುವ ನೀರಿಗೂ ತೊಂದರೆ ಬಂದಾಗ ರಾಜಕೀಯ ಪಕ್ಷಗಳು ತಾವು ತಮ್ಮ ಬೇಳೆ ಬೇಯಿಸಿಕೊಂಡರೆ ಜನರು ತಮ್ಮನ್ನು ಸುಮ್ಮನೆ ಬಿಡಲಾರರು ಎಂದು ಎಲ್ಲರೂ ಒಟ್ಟಾಗಿ ಕರ್ನಾಟಕದ ಜನರ ಜತೆಗಿದ್ದೇವೆ ಎಂಬ ಭರವಸೆಯನ್ನು ನೀಡಿವೆ. ಇಂತಹ ರಾಜಕೀಯ ಒಗ್ಗಟ್ಟು ನಮ್ಮಲ್ಲಿ ಮೊದಲಿನಿಂದಲೂ ಇದ್ದರೆ ನಾವು ಕಾವೇರಿ ವಿಚಾರದಲ್ಲಿ ಬಹಳಷ್ಟು ನಿರಾಳಾವಗಿ ಮುಂದುವರಿಯಬಹುದಿತ್ತು. ನೆರೆರಾಜ್ಯದ ರಾಜಕೀಯ ಪಕ್ಷಗಳು ಹಾವು–ಮುಂಗುಸಿಯಂತೆ ಒಬ್ಬರನ್ನೊಬ್ಬರು ದ್ವೇಷಿಸಿದರು. ತಮ್ಮ ರಾಜ್ಯದ ವಿಚಾರ ಬಂದಾಗ ಒಟ್ಟಾಗಿ ಪಾರ್ಲಿಮೆಂಟೇ ಆಗಲಿ ಸುಪ್ರೀಂಕೋರ್ಟೇ ಆಗಲಿ ಒಂದಾಗಿ ಕೆಲಸ ಮಾಡುವುದನ್ನು ನಾವೂ ಕೂಡಾ ಪಾಲಿಸಬೇಕು. ಜನರಿಗೆ ಸಮಸ್ಯೆಗಳು ಬಂದಾಗ ನಮ್ಮ ಮನೆಯೇ ಉರಿಯುತ್ತಿರುವಾಗ ಚಳಿಕಾಯಿಸಿಕೊಂಡು ಇರಬಾರದು. ಕೇಂದ್ರ ಸರಕಾರದ ಮಂತ್ರಿಗಳು ಮತ್ತು ರಾಜ್ಯದ ಸಂಸತ್ ಸದಸ್ಯರು ಒಟ್ಟಾಗಿ ಪ್ರಧಾನಿಯವರ ಬಳಿಗೆ ಹೋಗಿ ತಮ್ಮ ಅಹವಾಲನ್ನು ತಿಳಿಸಿ ರಾಜ್ಯದ ಸಮಸ್ಯೆ ಬಗ್ಗೆ ಗಮನ ಸೆಳೆಯುವಂತೆ ಮಾಡಿದ್ದು ಮಾತ್ರ ಸ್ತುತ್ಯಾರ್ಹವಾದ ಕೆಲಸವಾಗಿದೆ. ಕೊನೆಗೂ ಎಲ್ಲರೂ ಒಂದಾಗಿರುವುದು ನಮಗೆಲ್ಲಾ ಭರವಸೆಯನ್ನು ಮಾಡಿಸಿದೆ. ಮುಂದಿನ ದಿನಗಳಲ್ಲಿ ಕಾವೇರಿ ನದಿಯ ನೀರು ಹಂಚಿಕೆಯ ವಿಚಾರದಲ್ಲಿ ಕರ್ನಾಟಕಕ್ಕೆ ಯಾವುದೇ ಅನ್ಯಾಯವಾಗದಂತೆ ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘದ ಸದಸ್ಯರು ತಮ್ಮ ಆಕ್ರೋಶ ಮತ್ತು ನೋವನ್ನು ಮೌನವಾಗಿ ತೋಡಿಕೊಂಡಿದ್ದೇವೆ. ಕೃಷ್ಣಾ, ಮಹಾದಾಯಿ ವಿಚಾರದಲ್ಲೂ ನಮ್ಮ ರಾಜಕೀಯ ನಾಯಕರು ಒಟ್ಟಿಗಿದ್ದು ಪರಿಹಾರವನ್ನು ಕಂಡುಕೊಳ್ಳಬೇಕು. ಏನೇ ಇರಲಿ, ಕರ್ನಾಟಕಕ್ಕೆ, ಕನ್ನಡಕ್ಕೆ ಅನ್ಯಾಯ ಆದಾಗ ರಾಜಧಾನಿದಲ್ಲಿ ದೆಹಲಿ ಕರ್ನಾಟಕ ಸಂಘವು ಮುಂಚೂಣಿಯಲ್ಲಿ ನಿಲ್ಲುತ್ತದೆ ಎಂಬ ಭರವಸೆ ನೀಡುತ್ತಿದ್ದೇವೆ. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 16 ಅಕ್ಟೋಬರ್, 2016ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 16, ಅಕ್ಟೋಬರ್, 2016ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 30 ಅಕ್ಟೋಬರ್, 2016ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 25 ಸೆಪ್ಟೆಂಬರ್, 2016ರಂದು ಸಾಯಂಕಾಲ 4 ಗಂಟೆಯಿಂದ.

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**1 ನವೆಂಬರ್ 2016** ಮಂಗಳವಾರ
ಬೆಳಿಗ್ಗೆ : 8.00 ಗಂಟೆಗೆ

ಕರ್ನಾಟಕ ರಾಜ್ಯೋತ್ಸವ : ಧ್ವಜಾರೋಹಣ

## ವಿದ್ಯಾರ್ಥಿ ವೇತನ 2016–17

ದೆಹಲಿ ಕರ್ನಾಟಕ ಸಂಘದಿಂದ 2016–17ನೇ ಸಾಲಿಗಾಗಿ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ.

ಸಂಘದ ಸದಸ್ಯರು ಅರ್ಜಿಯನ್ನು ಸಂಘದ ಕಾರ್ಯಾಲಯದಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು 15 ನವೆಂಬರ್ 2016ರೊಳಗಾಗಿ ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕು.

ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

*ಪ್ರಧಾನ ಕಾರ್ಯದರ್ಶಿ*



DELHI KARNATAKA *SANGHA* Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

## ಮುನ್ನೋಟ

ದೆಹಲಿ ಕರ್ನಾಟಕ ಸಂಘ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕಾರ್ಯಕ್ರಮಗಳ ಆಯೋಜನೆಗಳಲ್ಲದೆ ಕನ್ನಡದ ನೆಲ-ಜಲ-ಭಾಷೆಗೆ ಅನ್ಯಾಯವಾದಾಗ ತನ್ನ ದನಿಯನ್ನು ಎತ್ತಿ ಹಿಡಿಯುತ್ತ ಬಂದಿದೆ. ಈಗ ಕಾವೇರಿ ನೀರಿನ ಹಂಚಿಕೆಯಲ್ಲಿ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯದ ಕುರಿತು ದೆಹಲಿ ಕರ್ನಾಟಕ ಸಂಘದಲ್ಲಿ ಸುಮಾರು 400 ರಿಂದ 500 ಜನ ಕನ್ನಡಿಗರು ಇದೇ ಅಕ್ಟೋಬರ್ 1ರಂದು ಮೇಣದ ಬತ್ತಿ ಬೆಳಗಿಸುವುದರ ಮೂಲಕ ಕರ್ನಾಟಕ ಸರಕಾರಕ್ಕೆ ಹಾಗೂ ಜನತೆಗೆ ತನ್ನ ಬೆಂಬಲವನ್ನು ವ್ಯಕ್ತಪಡಿಸಿತು. ಸಮಸ್ಯೆ ಬಗೆಹರಿಯದೇ ಇದ್ದಲ್ಲಿ ದೆಹಲಿಯ ಇಂಡಿಯಾ ಗೇಟ್ ಬಳಿ ದೊಡ್ಡ ಮಟ್ಟದ ಆಂದೋಲನವನ್ನು ಹಮ್ಮಿಕೊಳ್ಳುವ ನಿರ್ಣಯವನ್ನು ಈ ಸಂದರ್ಭದಲ್ಲಿ ತೆಗೆದುಕೊಳ್ಳಲಾಯಿತು.

ಗಣೇಶ ಸಾಂಸ್ಕೃತಿಕ ಉತ್ಸವ, ಸ್ಥಳೀಯರ ಕನ್ನಡ ರಸಮಂಜರಿ ಕಾರ್ಯಕ್ರಮ ಚೆನ್ನಾಗಿ ನಡೆದಿದೆ. ಕನ್ನಡ ರಸಮಂಜರಿ ಕಾರ್ಯಕ್ರಮದ ಆಯೋಜನೆಯಿಂದಾಗಿ ಹಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಇದನ್ನು ಗಮನದಲ್ಲಿಟ್ಟುಕೊಂಡು ನಾದಬ್ರಹ್ಮ ಹಂಸಲೇಖ ಮತ್ತು ಅವರ ತಂಡದಿಂದ ಸಂಗೀತ ತರಬೇತಿಯನ್ನು ನೀಡಲಾಗುತ್ತಿದೆ. ನವೆಂಬರ್ ತಿಂಗಳಲ್ಲಿ ನಡೆಯುವ ರಾಜ್ಯೋತ್ಸವದ ಅಂಗವಾಗಿ ನವೆಂಬರ್ 9 ರಿಂದ 12ರವರೆಗೆ ಈ ತರಬೇತಿ ನಡೆಯಲಿದೆ. ನವೆಂಬರ್ 13ರಂದು ತರಬೇತಿ ಪಡೆದವರಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ. ಜೊತೆಗೆ ನವೆಂಬರ್ ತಿಂಗಳಲ್ಲಿ ರಾಜ್ಯೋತ್ಸವ ಅಂಗವಾಗಿ ನೃತ್ಯ ತರಬೇತಿ, ವಿದ್ಯಾರ್ಥಿ ವೇತನ ವಿತರಣೆ, ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ತಮಗೆ ಎಸ್.ಎಂ.ಎಸ್. ಮೂಲಕ ತಿಳಿಸಲಾಗುವುದು.

ಕನ್ನಡ ಸಾಹಿತ್ಯ ಪರಿಷತ್ತು ಸಂಘದ ಸಹಕಾರದಿಂದ ಅಕ್ಟೋಬರ್ 8 ಮತ್ತು 9ರಂದು ಆಯೋಜಿಸಿದ್ದ ಹೊರನಾಡ ಕನ್ನಡಿಗರ ರಾಷ್ಟ್ರೀಯ ಸಮಾವೇಶ ದೇಶದ ಎಲ್ಲಾ ರಾಜ್ಯಗಳಿಂದ ಭಾಗವಹಿಸಿದ್ದ ಸುಮಾರು 250 ಸದಸ್ಯರು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಯಾಗಿದೆ. ಸೆಪ್ಟಂಬರ್ 25ರಂದು ಪಟ್ಲ ಫೌಂಡೇಷನ್ ಟ್ರಸ್ಟ್, ಮಂಗಳೂರಿನ ದೆಹಲಿಯ ಶಾಖೆ ಲೋಕಾರ್ಪಣೆಯಾಯಿತು. ಈ ಸಂದರ್ಭದಲ್ಲಿ ಆಯೋಜಸಿದ್ದ ಯಕ್ಷಗಾನ ನಾಟ್ಯ ವೈಭವ ದೆಹಲಿ ಕನ್ನಡಿಗರ ಮನಗೆದ್ದಿತು.

ಕನ್ನಡ ಸಂಘ ಸಂಸ್ಥೆಗಳು ಕನ್ನಡದ ಹಿರಿಮೆಯನ್ನು ದೇಶಾದ್ಯಂತ ಸಾರುವಂತಾಗಬೇಕು. ಮಂಗಳೂರಿನಲ್ಲಿ ಯಕ್ಷಗಾನ ಕಲಾವಿದರ ಕ್ಷೇಮಾಭಿವೃದ್ಧಿಗಾಗಿ ಸ್ಥಾಪಿತವಾದ ಈ ಸಂಸ್ಥೆಯ ಘಟಕವೊಂದು ದೆಹಲಿಯಲ್ಲಿ ಪ್ರಾರಂಭಗೊಂಡಿರುವುದು ಒಂದು ಒಳ್ಳೆಯ ಬೆಳವಣಿಗೆ. ಅದರಲ್ಲೂ ಡಾ. ಪುರುಷೋತ್ತಮ ಬಿಳಿಮಲೆಯವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವುದು ಸಂತೋಷದ ಸಂಗತಿ. ಈ ಫೌಂಡೇಷನ್‌ಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

ಡಿಸೆಂಬರ್ ತಿಂಗಳಲ್ಲಿ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಮತ್ತು ವಾರ್ಷಿಕ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗುವುದು.

ತಮಗೆಲ್ಲರಿಗೂ ಬೆಳಕಿನ ಹಬ್ಬ ದೀಪಾವಳಿಯ ಶುಭಾಶಯಗಳು ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***

## ಅಭಿಮತ ರಸಪ್ರಶ್ನೆ

1. ಈ ಬಾರಿಯ ಸಂಘದಲ್ಲಿ ಗಣೇಶನ ಮಂಟಪದ ಅಲಂಕಾರವನ್ನು ಮಾಡಿದವರು ಯಾರು?

2. ಯಕ್ಷಧ್ರುವ ಪಟ್ಲ ಫೌಂಡೇಷನ್‌ನ ಸ್ಥಾಪಕ ಅಧ್ಯಕ್ಷ ಯಾರು?

3. ಯಕ್ಷನಾಟ್ಯ ವೈಭವದಲ್ಲಿ ಕೃಷ್ಣ-ರಾಧೆಯರ ನೃತ್ಯ ಮಾಡಿದ ಕಲಾವಿದರು ಯಾರು?

4. ಸಂಘದಲ್ಲಿ ನಡೆದ ಕಾವೇರಿ ಸಮಸ್ಯೆಗೆ ಬೆಂಬಲ ನೀಡಿದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕರ್ನಾಟಕದ ಮಾಜಿಸಚಿವರು ಯಾರು?

5. ಗುರ್‌ಗಾಂವ್ ಕನ್ನಡ ಸಂಘದಲ್ಲಿ ನಡೆದ ವಿಚಾರಸಂಕಿರಣದ ಮುಖ್ಯ ಉಪನ್ಯಾಸಕರು ಯಾರು?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.10.2016ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಸೆಪ್ಟಂಬರ್ 2016ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ **ಸರಿಯಾದ ಉತ್ತರ** 1) ಶ್ರೀಮತಿ ಯಶಸ್ವಿನಿ ರಾವ್ 2) ಶ್ರೀ ಕೆ.ವೈ. ನಾರಾಯಣ ಸ್ವಾಮಿ 3) ವಿದ್ಯಾಶ್ರೀ ರಾಧಾಕೃಷ್ಣ ಗಾನ ನೃತ್ಯ ಅಕಾಡೆಮಿ ತಂಡ, ಬೆಂಗಳೂರು 4) ಪ್ರೊ. ಪುರುಷೋತ್ತಮ ಅಗರ್‌ವಾಲ್ 5) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಶ್ರೀ ಬಲವಂತ್ ರಾವ್ ಪಾಟೀಲ್

**ಸರಿಯಾದ ಉತ್ತರ ಕಳುಹಿಸಿದವರು.**

ಶ್ರೀಮತಿ ಪ್ರೇಮಲತಾ, ಶ್ರೀಮತಿ ಸೌಮ್ಯ ಕೊಟ್ರೇಶ್, ಶ್ರೀಮತಿ ಶಾಲಿನಿ ವಿ. ನಾಯಕ್, ಶ್ರೀ ರಾಜಶೇಖರ ಡಿ.ಎಸ್.

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 9560653021/ 9560563203, 011-26109615 / 26104818

ಅಭಿಮತ ಪ್ರಧಾನ ಸಂಪಾದಕರು
ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳಿ
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 27 ಸಂಚಿಕೆ 1
ಅಕ್ಟೋಬರ್ 2016

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

## ಸಂಪಾದಕರ ಟಿಪ್ಪಣಿಗಳು

# ಜನಸಾಮಾನ್ಯರ ಆಶೋತ್ತರಗಳಿಗೆ ಸ್ಪಂದಿಸಬೇಕಾದ ಮಾಧ್ಯಮ

**ಜನಸಾಮಾನ್ಯರ ಆಶೋತ್ತರಗಳಿಗೆ ಪ್ರತಿಸ್ಪಂದಿಸದ ಮಾಧ್ಯಮಗಳು ಅವುಗಳ ಬೆಲೆ ಕಳೆದುಕೊಳ್ಳುತ್ತವೆ. ಆದರೆ ಅಭಿಮತದ ಬೆಳವಣಿಗೆಯು ನಿರಂತರವಾಗಿರುವುದೆಂಬ ಆಶಯ ನಮ್ಮೆಲ್ಲರದು**

ಅಮೇರಿಕಾದ ಅಧ್ಯಕ್ಷೀಯ ಚುನಾವಣೆಯ ಬಿರುಸಿನ ಪ್ರಚಾರದ ನಡುವೆ ಯಾವ ಸ್ಪರ್ಧಿ ಗೆಲ್ಲಬಹುದೆಂಬ ಲೆಕ್ಕಾಚಾರವು ನಡೆಯುತ್ತಿದೆ. ಯಾವ ಅಭ್ಯರ್ಥಿಗೆ ವಿಜಯ ದೊರೆತರೂ ಈ ಚುನಾವಣೆಯು ಅಲ್ಲಿನ ಮಾಧ್ಯಮಗಳ ಮೇಲೆ ಬೀಳುವ ತೀವ್ರ ಪರಿಣಾಮಗಳ ಕುರಿತು ಹೊಸ ಚರ್ಚೆಗಳು ಆರಂಭವಾಗಿವೆ. ಒಂದೆಡೆ ವಿಕೀಲೀಕ್ಸ್ ಮೂಲಕ ಹೊರಬಂದ ಸುದ್ದಿಯ ಪ್ರಕಾರ ಅಲ್ಲಿನ ಕೆಲವೊಂದು ಪ್ರಮುಖ ಮಾಧ್ಯಮಗಳು ಹಿಲರಿ ಕ್ಲಿಂಟನ್‌ಗೆ ನೇರವಾದ ಬೆಂಬಲವನ್ನು ನೀಡುತ್ತಿವೆಯಂತೆ. ಆನ್‌ಲೈನ್ ಮೀಡಿಯಾಗಳಲ್ಲಿ ನಡೆಯುತ್ತಿರುವ ಇನ್ನೊಂದು ಚರ್ಚೆಯ ಪ್ರಕಾರ ಒಂದು ವೇಳೆ ಡೊನಾಲ್ಡ್ ಟ್ರಂಪ್ ಸೋತರೆ, ಆತ ಅಮೇರಿಕಾದಲ್ಲಿ ಬಲಿಷ್ಟವಾದ ಬಲಪಂಥೀಯ ಸುದ್ದಿಜಾಲವೊಂದನ್ನು ಆರಂಭಿಸುವ ಯೋಜನೆಯಲ್ಲಿದ್ದಾನಂತೆ. ಏನಿದ್ದರೂ ರಿಪಬ್ಲಿಕನ್ ಬೆಂಬಲಿಗರು ಟ್ರಂಪ್‌ನಿಂದ ದೂರಸರಿಯುವ ಸೂಚನೆಗಳು ಪ್ರಜಾತಂತ್ರದ ನಾಲ್ಕನೆ ಸ್ಥಂಭವಾದ ಮಾಧ್ಯಮಕ್ಕೆ ಮಾತ್ರ ದೊಡ್ಡ ಏಟು ಬಿದ್ದು ಮಾಧ್ಯಮ ಮತ್ತು ಜನಸಾಮಾನ್ಯರ ನಡುವಿನ ಸಂಬಂಧಗಳು ಮಾರಕವಾದ ರೀತಿಯಲ್ಲಿ ಮುರಿದು ಬೀಳಬಹುದು ಎಂಬಂತಾಗಿದೆ. ಪ್ರಜಾತಂತ್ರ ಮತ್ತು ಸ್ವತಂತ್ರ ಮಾಧ್ಯಮಗಳನ್ನು ಬೆಂಬಲಿಸುವವರು ಟ್ರಂಪ್ ಗೆಲ್ಲಲಿ ಎಂದು ಪ್ರಾರ್ಥಿಸಿದರೆ ಸೋಜಿಗವಲ್ಲ. ಯಾಕೆಂದರೆ ಆತ ಗೆದ್ದು ಮಾಡುವ ಕಾರ್ಯಗಳಿಗಿಂತ ಸೋತು ಮಾಡಬಹುದಾದ ಕಾರ್ಯಗಳು ಹೆಚ್ಚು ಅನಾಹುತಕಾರಿಯಾಗಬಲ್ಲುದು.

ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಗಾಂಧೀಜಿ ಸೇರಿದಂತೆ ಎಲ್ಲರೂ ದೇಶದ ಉದ್ದಗಲಗಳಲ್ಲಿ ಹರಡಿರುವ ಸ್ವಾತಂತ್ರ್ಯ ಹೋರಾಟಗಾರರನ್ನು ಸಂಪರ್ಕಿಸಲು ಪತ್ರಿಕೆಗಳನ್ನೇ ಅವಲಂಬಿಸಿದ್ದರು. ಸ್ವಾತಂತ್ರ್ಯದ ನಂತರ ಕೂಡಾ ಹೊಸ ರಾಷ್ಟ್ರದ ಅಭಿವೃದ್ಧಿಗೆ ಪೂರಕವಾಗಿ ಆದರೆ ಜನಸಾಮಾನ್ಯರ ಆಶೋತ್ತರಗಳಿಗೆ ಸ್ಪಂದಿಸುತ್ತಾ ಮಾಧ್ಯಮಗಳು ಕಾರ್ಯನಿರ್ವಹಿಸಿದವು. ಸಾವಿರದ ಒಂಭೈನೂರ ಎಪ್ಪತ್ತೇಳರ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಬಹುತೇಕ ಮಾಧ್ಯಮಗಳು ತೋರಿದ ನಿಲುವುಗಳು ಭಾರತದ ಪ್ರಜಾತಂತ್ರದ ಬೆನ್ನುಲುಬಾಗಿ ಪತ್ರಿಕೆಗಳು ನಿಂತಿವೆ ಎಂದು ಪ್ರಶಂಸೆಗೆ ಪಾತ್ರವಾಗಿವೆ. ಅಧಿಕಾರದಲ್ಲಿರುವ ಸರಕಾರಗಳು ಮಾಧ್ಯಮದ ಮೇಲೆ ಪರೋಕ್ಷವಾಗಿ ಹಲವು ಬಾರಿ ಒತ್ತಡಗಳನ್ನು ಹೇರಿದರೂ ಮಾಧ್ಯಮವನ್ನು ನಂಬಬಹುದೆಂದು ಜನಸಾಮಾನ್ಯರು ತಿಳಿದಿದ್ದರು. ಆದರೆ ಇಪ್ಪತ್ತೊಂದನೆಯ ಶತಮಾನದ ಎರಡನೆ ದಶಕದಲ್ಲಿ ಪ್ರಮುಖವಾದ ಹಾಗೂ ಪ್ರಭಾವಶಾಲಿಯಾದ ದೃಶ್ಯ ಮಾಧ್ಯಮವಾದ ಸುದ್ದಿ ಚಾನೆಲ್‌ಗಳ ತೀವ್ರ ಪೈಪೋಟಿಯು ಹೊಸತಾದ ಆವಾಂತರಗಳನ್ನು ಸೃಷ್ಟಿಸಿ ಅಧಿಕಾರಸ್ಥರು ತಮಗೆ ಬೇಕಾದಂತೆ ಉಪಯೋಗಿಸಲು ತನ್ನನ್ನು ತಾನೇ ಒಡ್ಡಿಕೊಂಡಿತು. ಅಲ್ಲದೇ ಮಾಧ್ಯಮವು ತನ್ನ ಸ್ವತಂತ್ರತೆಯನ್ನು ಬಿಟ್ಟುಕೊಟ್ಟು ವ್ಯಾಪಾರಿಗಳ ಮತ್ತು ಅಧಿಕಾರಸ್ಥರ ಪ್ರಚಾರಕರಂತೆ ವರ್ತಿಸತೊಡಗಿದವು. ಆದರೆ ಅದಕ್ಕೆ ಪ್ರತ್ಯುತ್ತರವಾಗಿಯೋ ಎಂಬಂತೆ ಸಾಮಾನ್ಯ ಜನರ ಆಶೋತ್ತರವಾಗಿ ಸಂಪೂರ್ಣ ನಿಯಂತ್ರಣವಿಲ್ಲದ ಸಾಮಾಜಿಕ ತಾಣಗಳು ಅಂತರ್ಜಾಲದಲ್ಲಿ ಇನ್ನಿಲ್ಲದಂತೆ ವಿಸ್ತಾರಗೊಂಡು ಹೊಸದೊಂದು ದನಿಯಾಗುತ್ತಿವೆ.

ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆ ಅಭಿಮತದ 27ನೇ ಸಂಪುಟದ ಮೊದಲ ಸಂಚಿಕೆಯಿದು. ಒಂದು ವರ್ಷದ ಹಿಂದೆಯಷ್ಟೇ ರಜತವರ್ಷವನ್ನು ವಿಶೇಷ ಸಂಚಿಕೆಯೊಂದಿಗೆ ಆಚರಿಸಿದ ಅಭಿಮತದ ಓದುಗರು ಈ ಸಂಚಿಕೆಯೊಂದಿಗೆ ಹಿಂದಿನ ಪರಂಪರೆಯನ್ನು ಉಳಿಸಿಕೊಂಡು ಮುಂದಿನ ಸವಾಲುಗಳನ್ನು ಎದುರಿಸಲು ತಮ್ಮ ಆಕಾಂಕ್ಷೆಗಳಿಗೆ ಅನುಗುಣವಾದ ಸಲಹೆಗಳನ್ನು ಸಂಪಾದಕ ಮಂಡಳಿಗೆ ನೀಡಬೇಕು. ಜನಸಾಮಾನ್ಯರ ಆಶೋತ್ತರಗಳಿಗೆ ಪ್ರತಿಸ್ಪಂದಿಸದ ಮಾಧ್ಯಮಗಳು ಅವುಗಳ ಬೆಲೆ ಕಳೆದುಕೊಳ್ಳುತ್ತವೆ. ಆದರೆ ಅಭಿಮತದ ಬೆಳವಣಿಗೆಯು ನಿರಂತರವಾಗಿರುವುದೆಂಬ ಆಶಯ ನಮ್ಮೆಲ್ಲರದು. ಪತ್ರಿಕೆಯು ಸಂಘದ ಕಾರ್ಯಕ್ರಮಗಳ ವಿವರಗಳನ್ನು ಸದಸ್ಯರಿಗೆ ತಲುಪಿಸುವ ಜತೆಗೆ ಸದಸ್ಯರ ಸೃಜನಶೀಲ ಮತ್ತು ವಿಚಾರ ಪ್ರಚೋದಕ ಬರಹಗಳಿಗೆ ಸದಾ ಮುಕ್ತವಾಗಿ ತೆರೆದುಕೊಂಡಿದೆ. ಸಂಘದ ಅಂತರ್ಜಾಲದಲ್ಲಿಯೂ ಅಭಿಮತದ ಸಂಚಿಕೆಯು ಲಭ್ಯವಿರುವುದರಿಂದ ಇದರ ಓದುಗರ ಬಳಗದಲ್ಲಿ ಸಂಘದ ಸದಸ್ಯರಲ್ಲದೇ ಇತರರೂ ಸೇರಿದ್ದಾರೆ. ಈ ನಿಟ್ಟಿನಲ್ಲಿ ಅಭಿಮತದ ಸಂಪಾದಕ ಮಂಡಳಿಯು ಅಭಿಮತದ ಬರಹಗಳ ಭಾಷೆ, ಶೈಲಿ, ವಿನ್ಯಾಸಗಳ ಕುರಿತು ಪ್ರತಿ ಸಂಚಿಕೆಯನ್ನು ಗಂಭೀರವಾಗಿ ಮತ್ತು ಜವಾಬ್ದಾರಿಯುತವಾಗಿ ಚಿಂತಿಸಿ ಪತ್ರಿಕೆಯನ್ನು ಪ್ರಕಟಿಸುತ್ತದೆ. ಆರಂಭದ ದಿನಗಳಿಂದ ಅಭಿಮತದ ಹುಟ್ಟು ಮತ್ತು ಬೆಳವಣಿಗೆಗೆ ಅಪಾರ ಕೊಡುಗೆಗಳನ್ನು ನೀಡಿದ ಅನೇಕರನ್ನು ನೆನಪಿಸಿಕೊಂಡು ಈ ಸಂಚಿಕೆಯನ್ನು ನಿಮ್ಮ ಮುಂದಿಡುತ್ತಿದ್ದೇವೆ. ಅ

ಬಾಲಕೃಷ್ಣ ನಾಯ್ಕ್ ಡಿ.

27ರ ಅಭಿಮತ

# ಸಂಘದ ನಿಲುವು



## ಕಾವೇರಿಗಾಗಿ ದೆಹಲಿಯಲ್ಲಿ ಹೋರಾಟಕ್ಕೆ ಬದ್ಧ

### ವಸಂತ ಶೆಟ್ಟಿ ಬೆಳ್ಳಾರೆ



ಕಾವೇರಿ ನದಿ ನೀರಿನ ವಿಷಯದಲ್ಲಿ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ದೆಹಲೆ ಕರ್ನಾಟಕ ಸಂಘವು ಕರ್ನಾಟಕ ಸರ್ಕಾರ ಮತ್ತು ಜನತೆಗೆ ತನ್ನ ಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿತು. ಇದೇ ಅಕ್ಟೋಬರ್ 1ರಂದು ದೆಹಲಿ ಕರ್ನಾಟಕ ಸಂಘದ ಅಂಗಳದಲ್ಲಿ, ಸಂಘದ ಪದಾಧಿಕಾರಿಗಳ ಜೊತೆ ಸೇರಿದ ನೂರಾರು ಕನ್ನಡಿಗರು ಸಾಂಕೇತಿಕವಾಗಿ ಮೇಣದ ಬತ್ತಿ ಉರಿಸುವ ಮೂಲಕ, ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯದ ಕುರಿತು ತಮ್ಮ ತೀವ್ರ ಅಸಮಾಧಾನವನ್ನು ಒಕ್ಕೊರಲಿನಿಂದ ವ್ಯಕ್ತಪಡಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಕರ್ನಾಟಕಕ್ಕೆ ಶೀಘ್ರದಲ್ಲೇ ನ್ಯಾಯ ದೊರಕದೇ ಇದ್ದರೆ ಉಗ್ರ ಹೋರಾಟವನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದರು. ಕರ್ನಾಟಕ ಸಂಘವು ಕನ್ನಡನಾಡಿನ ನುಡಿ, ಸಾಹಿತ್ಯ, ಸಂಸ್ಕೃತಿ, ಕಲೆ ಮುಂತಾದ ವಿಚಾರಗಳಿಗಾಗಿ ತನ್ನನ್ನು ತೊಡಗಿಸಿಕೊಂಡಿದೆಯಾದರೂ ರಾಜ್ಯದ ಸಮಸ್ತ ಜನರ ಹಿತದೃಷ್ಟಿಯಿಂದ ಕಾವೇರಿ ನೀರಿಗೆ ಸಂಬಂಧಿಸಿದಂತಹ ಸೂಕ್ಷ್ಮ ವಿಚಾರಕ್ಕೆ ಇಂದು ಸ್ಪಂದಿಸಲೇಬೇಕಾದ ಅನಿವಾರ್ಯತೆ ಮೂಡಿದೆ.

ಈ ಸಂದರ್ಭದಲ್ಲಿ ಮಾಜಿ ಸಚಿವ ಶ್ರೀ ಎಚ್.ಎಂ. ರೇವಣ್ಣ ಅವರು ಉಚ್ಚತಮ ನ್ಯಾಯಾಲಯದ ಆದೇಶವು ಕನ್ನಡಿಗರ ಹಿತಾಸಕ್ತಿಗೆ ವಿರುದ್ಧವಾಗಿರುವುದರಿಂದ ಕನ್ನಡಿಗರಲ್ಲಿ ಆತಂಕ ಸೃಷ್ಟಿಯಾಗಿದೆ. ಪ್ರಧಾನ ಮಂತ್ರಿಗಳು ಕೂಡಲೇ ಮಧ್ಯ ಪ್ರವೇಶಿಸಿ ಈ ಗಂಭೀರ ಸಮಸ್ಯೆಯನ್ನು ತಕ್ಷಣ ಪರಿಹರಿಸಬೇಕೆಂದು ಆಗ್ರಹಿಸಿದರು.

ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕ ಡಾ. ಪುರುಷೋತ್ತಮ ಬಿಳಿಮಲೆಯವರು ಮಾತನಾಡಿ ಕರ್ನಾಟಕವು ಹಿಂದಿನಿಂದಲೂ ರಾಷ್ಟ್ರೀಯ ಪಕ್ಷಗಳನ್ನು ಬೆಂಬಲಿಸುತ್ತಾ, ಪ್ರಾದೇಶಿಕ ಪಕ್ಷಗಳನ್ನು ನಿರಾಕರಿಸಿ ದೇಶದ ಬಗೆಗಿನ ತನ್ನ ಬದ್ಧತೆಯನ್ನು ಪ್ರಕಟಿಸುತ್ತಲೇ ಬಂದಿದೆ. ಆದರೆ ಇದೀಗ ಭಾರತದ ಉಚ್ಚ ನ್ಯಾಯಾಲಯ ಕರ್ನಾಟಕದ ಈ ಬದ್ಧತೆಯನ್ನೇ ಪ್ರಶ್ನಿಸಿಸುವ ಹಾಗೆ ಮಾತಾಡಿದ್ದು 6 ಕೋಟಿ ಕನ್ನಡಿಗರಿಗೆ ಮಾಡಿದ ಅವಮಾನವಾಗಿದೆ. ತಜ್ಞರ ತಂಡವನ್ನು ಕಳುಹಿಸಬೇಕೆಂಬ ಕನ್ನಡಿಗರ ಕೋರಿಕೆಯನ್ನು ಮನ್ನಿಸದೇ ಕಾವೇರಿ ಜಲ ನಿರ್ವಹಣಾ ಮಂಡಳಿಯನ್ನು ತರಾತುರಿಯಲ್ಲಿ ರಚಿಸಲು ಆದೇಶಿಸಿರುವುದು ಕರ್ನಾಟಕಕ್ಕೆ ಮಾಡಿದ ಇನ್ನೊಂದು ಅವಮಾನ. ಹೊರನಾಡ ಕನ್ನಡಿಗರಾದ ನಾವು ಈ ಬಿಕ್ಕಟ್ಟಿನ ಸಮಯದಲ್ಲಿ ಕರ್ನಾಟಕ ಸರಕಾರ ಮತ್ತು ಜನತೆಗೆ ನಮ್ಮ ಸಂಪೂರ್ಣ ಬೆಂಬಲವನ್ನು ಘೋಷಿಸುತ್ತಿದ್ದೇವೆ ಎಂದು ಹೇಳಿದರು.

ನೆರೆದಿದ್ದ ಸಮಸ್ತ ಕನ್ನಡಿಗರು 'ಕಾವೇರಿ ನೀರು ನಮ್ಮದು', 'ಕುಡಿಯುವ ನೀರು ನಮ್ಮ ಹಕ್ಕು' ಹಾಗೂ ಕಾವೇರಿ ಹೋರಾಟಕ್ಕೆ ಜಯವಾಗಲಿ ಎಂಬ ಘೋಷಣೆಗಳನ್ನು ಕೂಗಿದರು. ಅ

*ಸಖಾರಾಮ ಉಪ್ಪೂರು*

# ಸಂಘದಲ್ಲಿ ಗಣೇಶ ಸಾಂಸ್ಕೃತಿಕ ಉತ್ಸವ

## ಸುಧೀರ್ ಫಡ್ನೀಸ್ ಅವರಿಂದ ಗಣೇಶನಿಗೆ ಐದು ಹೆಡೆಗಳ ಆದಿಶೇಷನ ವಿಶೇಷ ಮಂಟಪ ರಚನೆ



ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ದೆಹಲಿ ಕರ್ನಾಟಕ ಸಂಘವು ಗಣೇಶ ಸಾಂಸ್ಕೃತಿ ಉತ್ಸವವನ್ನು ಅತ್ಯಂತ ಭಕ್ತಿ, ಶ್ರದ್ಧೆ ಮತ್ತು ಭವನಾತ್ಮಕವಾಗಿ ವಿಜೃಂಭಣೆಯಿಂದ ನಡೆಸಿತು. ಇದೇ ಸೆಪ್ಟೆಂಬರ್ 5ರಂದು ಬೆಳಿಗ್ಗೆ 9 ಗಂಟೆಗೆ ಸರಿಯಾಗಿ ಸ್ಥಳೀಯ ರಾಘವೇಂದ್ರ ಸ್ವಾಮಿ ಮಠದ ಆಚಾರ್ಯರ ಮೂಲಕ ವಿಧಿಯುಕ್ತವಾಗಿ ಸ್ಥಾಪನೆ, ಪೂಜೆ ಹಾಗೂ ಮಂಗಳಾರತಿಯ ಮೂಲಕ ಸಂಘದ ಎಲ್ಲ ಪದಾಧಿಕಾರಿಗಳು ಹಲವಾರು ಹಿರಿಯ ಸದಸ್ಯರುಗಳ ಸಮ್ಮುಖದಲ್ಲಿ ನೆರವೇರಿತು. ತದನಂತರ ಪ್ರತಿ ದಿನ ಬೆಳಿಗ್ಗೆ 9.00ಗಂಟೆಗೆ ಮತ್ತು ಸಂಜೆ 6.30ಕ್ಕೆ ಸರಿಯಾಗಿ ಮತ್ತೆ ನೈವೇದ್ಯ, ಪೂಜೆ, ಮಂಗಳಾರತಿ ದೆಹಲಿಯ ಹಲವಾರು ಭಕ್ತ ಜನಗಳ ಸಮ್ಮುಖದಲ್ಲಿ ಏಳು ದಿನಗಳ ಕಾಲ ನಿರಂತರವಾಗಿ ನಡೆಯಿತು. ಸೆಪ್ಟೆಂಬರ್ 7 ರಂದು ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್ ಸದಸ್ಯೆಯರು ಭಜನೆ ಹಾಗೂ ಭಕಿಗೀತೆಗಳನ್ನು ಗಣೇಶನನ್ನು ಪೂಜಿಸಿದರು. ಇಷ್ಟೇ ಅಲ್ಲದೆ ಪ್ರತಿದಿನ ಸಂಜೆ ಭಜನೆ, ಭಕ್ತಿಗೀತೆಗಳ ಹಾಡುಗಾರಿಕೆ, ನರ್ತನ ಹಾಗೂ ಪುಟಾಣಿ ಮಕ್ಕಳಿಂದ ದೇವರನಾಮಗಳ ಸ್ಮರಣೆ ನಡೆದವು.

ಸೆಪ್ಟೆಂಬರ್ 11ರ ಭಾನುವಾರ ವಿಸರ್ಜನೆಯ ದಿನದಂದು ಸಂಘದ ಎಲ್ಲ ಪದಾಧಿಕಾರಿಗಳು ದಂಪತಿ ಸಮೇತರಾಗಿ ಕುಳಿತು ಆಚಾರ್ಯರ ಸಮ್ಮುಖದಲ್ಲಿ ವಿಘ್ನರಾಜನಿಗೆ ಗಣಹೋಮವನ್ನು ಸಲ್ಲಿಸಿದರು. ಗಣಹೋಮ ಪೂಜೆಯ ನಂತರ ಸಭಾಂಗಣದಲ್ಲಿ ನಡೆದ ಗಣೇಶ ಭಕಿ ಲಹರಿ ಕಾರ್ಯಕ್ರಮದಲ್ಲಿ ಮಳವಳ್ಳಿ ಮಹದೇವ ಸ್ವಾಮಿ ಮತ್ತು ತಂಡದವರು ತಮ್ಮ ಕಂಚಿನ ಕಂಠದಿಂದ ಭಕಿಗೀತೆಗಳನ್ನು ಹಾಡಿ ನೆರೆದ ಭಕ್ತಾದಿಗಳನ್ನು ತನ್ಮಯಗೊಳಿಸಿದರು. ಜನಕಪುರಿ ಮಹಿಳಾ ಮಂಡಳಿಯವರಿಂದ–ಭಕ್ತಿಗೀತೆಗಳು ಹಾಗೂ ನೃತ್ಯ. ಶ್ರೀಮತಿ ನೇತ್ರಾಕುಮಾರ್ ಮತ್ತು ಮಕ್ಕಳಿಂದ–ಭಕಿಗೀತೆ ಮತ್ತು ಶ್ರೀ ಅಮರೇಶ್ ಮತ್ತು ತಂಡದಿಂದ–ತತ್ವಪದಗಳು ಕಾರ್ಯಕ್ರಮಗಳು ನಡೆದವು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಸುಮಿತಾ ಮುರಗೋಡ ಅವರು ನಡೆಸಿಕೊಟ್ಟರು.

ಸಂಜೆ ಮಹಾಮಂಗಳಾರತಿಯ ನಂತರ ಸರ್ವಾಲಂಕೃತನಾದ ವಿಘ್ನರಾಜ ಮೂರ್ತಿಯನ್ನು ನೆರೆದಿದ್ದ ನೂರಾರು ಭಕ್ತಜನರು ದೈವಘೋಷಣೆಗಳನ್ನು ಕೂಗುತ್ತ ಯಮುನೆ ನದಿ ತೀರಕ್ಕೆ ಕೊಂಡೊಯ್ದು ಮತ್ತೊಮ್ಮೆ ಅಲ್ಲಿ ಭಕ್ತಿಯಿಂದ ಪೂಜೆ ಸಲ್ಲಿಸಿ ವಿಧಿಯೋಕ್ತವಾಗಿ ವಿಸರ್ಜಿಸಲಾಯಿತು. ಗಣೇಶನನ್ನು ದೆಹಲಿ ಕರ್ನಾಟಕ ಸಂಘದಿಂದ ಯಮುನಾ ನದಿಗೆ ಕೊಂಡೊಯ್ಯುವಾಗ ದಾರಿಯುದ್ದಕ್ಕೂ ಮಕ್ಕಳು, ಮಹಿಳೆಯರು ಮತ್ತು ಪುರುಷರು ಭಕಿ ಆವೇಶಗಳಿಂದ ಹಾಡಿ ಕುಣಿದು ಜೈ ಜೈಕಾರವನ್ನು ಕೂಗುತ್ತಾ ಆನಂದಿಸಿದರು. ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ಪೂಜೆಯ ನಂತರ ಭಗವಂತನಿಗೆ ನೈವೇದ್ಯ ಮಾಡಿದ ಮೋದಕ, ಲಾಡು, ಪಂಚಕಜ್ಜಾಯ, ಕಡಲೆ, ಉಸುರಿ, ಕೇಸರಿಬಾತು, ಹಣ್ಣು–ಹಂಪಲುಗಳು ಹೀಗೆ ತರತರದ ಪ್ರಸಾದಗಳನ್ನು ನೆರೆದ ಸಮಸ್ತ ಭಕ್ತಾದಿಗಳಿಗೆ ವಿತರಿಸಲಾಯಿತು.

ಈ ಬಾರಿಯ ಗಣೇಶ ಉತ್ಸವದ ಮಂಟಪದ ಸುತ್ತಣ ಅಲಂಕಾರದ ಅಂಗವಾಗಿ ಭವ್ಯವಾದ ಐದು ಹೆಡೆಯ ಆದಿಶೇಷನನ್ನು ರಚಿಸಿ ಅದರ ಮೇಲೆ ಸುಂದರವಾದ ವಿಘ್ನ ವಿನಾಶಕನ ವಿಗ್ರಹವನ್ನು ಕುಳ್ಳಿರಿಸಿ ಶೃಂಗರಿಸುವ ಕಾರ್ಯವನ್ನು ಸ್ಥಳೀಯ ಹೆಸರಾಂತ ಕಲಾವಿದರಾದ ಶ್ರೀ ಸುಧೀರ್ ಫಡ್ನೀಸ್‌ರವರು ಬಹಳ ಶ್ರಮವಹಿಸಿ ನಡೆಸಿಕೊಟ್ಟರು. ಈ ಬಾರಿಯ ಅದ್ದೂರಿಯ ಏಳು ದಿನಗಳ ಗಣೇಶೋತ್ಸವ ಸಮಾರಂಭದಲ್ಲಿ ಇದೊಂದು ವಿಶೇಷ ಆಕರ್ಷಣೆಯಾಗಿತ್ತು. ಶ್ರೀ ಫಡ್ನೀಸ್‌ರವರು ಪ್ರತೀ ವರ್ಷವೂ ಒಂದಲ್ಲಾ ಒಂದು ರೀತಿಯ ವಿಶೇಷವಾದ ಆಕರ್ಷಕ ಅಲಂಕಾರವನ್ನು ತಮ್ಮ ಕಲೆಯ ಮೂಲಕ ಮಾಡುತ್ತಾ ಬಂದಿದ್ದಾರೆ. ಈ ಬಾರಿಯ ಅವರ ಈ ವಿಶೇಷ ಕೊಡುಗೆಗಾಗಿ ದೆಹಲಿ ಕರ್ನಾಟಕ ಸಂಘವು ಅವರನ್ನು ಶಾಲುಹೊದಿಸಿ, ಹೂಗುಚ್ಛ, ಹಣ್ಣಿನ ಬುಟ್ಟಿ ಹಾಗೂ ಸಂಘದ ಸ್ಮರಣಿಕೆ ನೀಡಿ ಗೌರವಿಸಿದೆ. ಅ

*ಅಭಿಮತ ವರದಿ*












# ಪಟ್ಲ ಫೌಂಡೇಷನ್ ದೆಹಲಿ ಘಟಕಕ್ಕೆ ಚಾಲನೆ

## ಏಕತಾನತೆಯಿಂದ ಕುಸಿತ ಕಂಡ ಯಕ್ಷಗಾನಕ್ಕೆ ಹೊಸರೂಪ ಕೊಟ್ಟ ಪಟ್ಲ ಸತೀಶ್ ಶೆಟ್ಟಿ

ಏಕತಾನತೆಯಿಂದ ಜನಪ್ರಿಯತೆ ಕಳೆದುಕೊಳ್ಳುತ್ತಿದ್ದ ಯಕ್ಷಗಾನಕ್ಕೆ ಮರುಜೀವ ನೀಡಿದ್ದು ತೆಂಕು ತಿಟ್ಟಿನ ಪ್ರಸಿದ್ಧ ಭಾಗವತ ಪಟ್ಲ ಸತೀಶ್ ಶೆಟ್ಟಿ. ಯಕ್ಷಗಾನದ ಹಾಡುಗಾರಿಕೆಗೆ ವಿಸ್ತಾರ ತಂದುಕೊಟ್ಟಿದ್ದರಿಂದ ಈಗ ರಂಗ ನಟರು ಕೂಡ ಅಗತ್ಯಕ್ಕೆ ತಕ್ಕಂತೆ ತಮ್ಮ ಕುಣಿತವನ್ನೂ ವಿಸ್ತಾರಗೊಳಿಸುತ್ತಿದ್ದಾರೆ ಎಂದು ಜಾನಪದ ವಿದ್ವಾಂಸ, ಜೆಎನ್‌ಯು ಕನ್ನಡ ಪೀಠದ ಮುಖ್ಯಸ್ಥರಾದ ಡಾ. ಪುರುಷೋತ್ತಮ ಬಿಳಿಮಲೆ ಹೇಳಿದರು.

ನವದೆಹಲಿಯ ಕರ್ನಾಟಕ ಸಂಘದಲ್ಲಿ ನಡೆದ ಯಕ್ಷಧ್ರುವ ಪಟ್ಲ ಫೌಂಡೇಷನ್‌ನ ದೆಹಲಿ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಪ್ರಾಸ್ತಾವಿಕ ಭಾಷಣ ಮಾಡಿದ ಅವರು, 50ರ ದಶಕದಲ್ಲಿ ಯಕ್ಷಗಾನಕ್ಕೆ ಭದ್ರತೆ, ಮನ್ನಣೆ ಇರಲಿಲ್ಲ. 60ರ ದಶಕದಲ್ಲಿ ವಿದ್ವಾಂಸರ ಪ್ರವೇಶದಿಂದಾಗಿ ಯಕ್ಷಗಾನ ಔನ್ನತ್ಯಕ್ಕೆ ಸಾಗಿತು. ಆದರೆ 70ರ ದಶಕದಲ್ಲಿ ಯಕ್ಷಗಾನ ಜನಪ್ರಿಯತೆ ಕಳೆದುಕೊಂಡಾಗ, ತುಳು ಯಕ್ಷಗಾನಗಳು ಇದಕ್ಕೆ ಮರುಜೀವ ತುಂಬಿದವು. 80–90ರ ದಶಕದ ನಂತರ ಏಕತಾನತೆಯಿಂದಾಗಿ ಕುಸಿತ ಕಂಡ ಯಕ್ಷಗಾನಕ್ಕೆ ಈಗ ಪಟ್ಲ ಹೊಸ ರೂಪ ನೀಡಿದ್ದಾರೆ. ಆಧುನಿಕ ತಂತ್ರಜ್ಞಾನಗಳ ಸೂಕ್ತ ಬಳಕೆಯೂ ಅವರಿಂದ ಸಾಧ್ಯವಾಯಿತು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾಜಿ ಸಚಿವ, ಮಾನ್ಯ ರಾಜ್ಯಸಭಾ ಸದಸ್ಯರಾದ ಆಸ್ಕರ್ ಫರ್ನಾಂಡಿಸ್, "ಸ್ವಾತಂತ್ರ್ಯಪೂರ್ವದಲ್ಲಿ ನನ್ನ ತಂದೆಯೊಂದಿಗೆ ಉಡುಪಿಯಿಂದ ಕುಂದಾಪುರಕ್ಕೆ ಏಳೆಂಟು ಕಿ.ಮೀ. ದೂರ ನಡೆದು, ನದಿ ದಾಟಿ ಯಕ್ಷಗಾನ ನೋಡಲು ಹೋಗುತ್ತಿದ್ದೆ. ಎಳವೆಯಲ್ಲಿಯೇ ತಂದೆ ಪುರಾಣ ಕಥೆಗಳನ್ನು ಹೇಳುತ್ತಿದ್ದರಿಂದ ಯಕ್ಷಗಾನದ ಮೇಲೆ ವಿಶೇಷ ಆಸಕ್ತಿ ಹುಟ್ಟಿಕೊಂಡಿತು. ಪಟ್ಲರಿಗೆ ಅಪಾರ ಅಭಿಮಾನಿ ಬಳಗವೇ ಇದೆ. ಅವರ ಪಟ್ಲ ಫೌಂಡೇಷನ್ ಘಟಕ ದೆಹಲಿಯಲ್ಲಿ ತೆರೆದಿರುವುದು ಖುಷಿ ತಂದಿದೆ" ಎಂದು ತನ್ನ ಅನುಭವಗಳನ್ನು ಹಂಚಿಕೊಂಡರು.

**ದೆಹಲಿಗೆ ಬಂದು 47 ವರ್ಷಗಳಾಗಿದ್ದರೂ, ಯಕ್ಷಗಾನದ ಮೇಲಿನ ಪ್ರೀತಿ ಮಾಸಿಲ್ಲ. ಚೆಂಡೆ ಶಬ್ದ ಕೇಳಿದಾಗ ಮೈ ನವಿರೇಳುತ್ತದೆ. ಚಿಕ್ಕಂದಿನಲ್ಲಿ ಚೆಂಡೆ ಬಾರಿಸಬೇಕೆಂದು ಭಾರೀ ಹಂಬಲವಿತ್ತು.**

ಮುಖ್ಯ ಅತಿಥಿಯಾಗಿ ಆಗಮಿಸಿದ ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್‌ನ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ರಾಜ್‌ಕಿರಣ್ ರೈ ಜಿ. ಅವರು ಮಾತನಾಡಿ ಬಾಲ್ಯದಲ್ಲಿ ಬಹಳಷ್ಟು ಯಕ್ಷಗಾನಗಳನ್ನೂ ನೋಡಿ ಅದರ ಮೇಲೆ ವಿಶೇಷ ಪ್ರೀತಿ ಹೊಂದಿದ್ದರೂ ಉದ್ಯೋಗ ನಿಮಿತ್ತ ವಿವಿಧೆಡೆ ಸಂಚರಿಸಬೇಕಾಗಿ ಬಂದ ಕಾರಣ ಯಕ್ಷಗಾನವನ್ನು ನಿರಂತರವಾಗಿ ನೋಡಿ ಅದರ ಬದಲಾವಣೆಗಳನ್ನು ಅನುಭವಿಸಲು ಸಾಧ್ಯವಾಗದೇ ಇದ್ದರೂ ಇಂದು ದೆಹಲಿಗೆ ಬಂದು ಯಕ್ಷ ನಾಟ್ಯ ವೈಭವವನ್ನು ಪ್ರದರ್ಶಿಸುತ್ತಿರುವ ತಂಡಕ್ಕೆ ನನ್ನ ವಿಶೇಷ ಶುಭ ಹಾರೈಕೆಗಳು ಇದರಿಂದ ದೆಹಲಿಯಂತಹ ದೂರದ ಊರಿನಲ್ಲಿ ಕುಳಿತ ನಮಗೂ ಯಕ್ಷಗಾನ ನೋಡುವಂತಾಗಿದೆ ಎಂದು ಸಂತಸಪಟ್ಟರು.

ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯವಾದಿ, ಮಾಜಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎನ್. ಭಟ್ ಅವರು ಅಧ್ಯಕ್ಷತೆ ವಹಿಸಿದ್ದರು. ಪಟ್ಲ ಫೌಂಡೇಷನ್ ಸಾಧನೆ ಮೆಚ್ಚಿಕೊಂಡು 1 ಲಕ್ಷ ರೂ ದೇಣಿಗೆ ನೀಡುವುದಾಗಿ ಅವರು ಘೋಷಿಸಿದರು.

ದೆಹಲಿಗೆ ಬಂದು 47 ವರ್ಷಗಳಾಗಿದ್ದರೂ, ಯಕ್ಷಗಾನದ ಮೇಲಿನ ಪ್ರೀತಿ ಮಾಸಿಲ್ಲ. ಚೆಂಡೆ ಶಬ್ದ ಕೇಳಿದಾಗ ಮೈ ನವಿರೇಳುತ್ತದೆ. ಚಿಕ್ಕಂದಿನಲ್ಲಿ ಚೆಂಡೆ ಬಾರಿಸಬೇಕೆಂದು ಭಾರೀ ಹಂಬಲವಿತ್ತು. ಚೆಂಡೆ ಬಾರಿಸಿ ಕಾರ್ಯಕ್ರಮವನ್ನು ಆಸ್ಕರ್ ಅವರು ಉದ್ಘಾಟಿಸಿದಾಗ ನನಗೂ ಚೆಂಡೆ ಬಾರಿಸಲು ಅವಕಾಶ ಕೊಟ್ಟಾರಾ ಎಂದುಕೊಂಡಿದ್ದೆ. ಕಾರ್ಯಕ್ರಮದ ನಿರೂಪಕರು ನನ್ನನ್ನೂ ಚಂಡೆ ಬಾರಿಸುವಂತೆ ಕೇಳಿಕೊಂಡದ್ದರಿಂದ ಖುಷಿಯಿಂದಲೇ ಬಾರಿಸಿದೆ ಎಂದು ಕೆ.ಎನ್. ಭಟ್ ಸಂತಸ ಹಂಚಿಕೊಂಡರು.

ಇದೇ ವೇಳೆ ಫೌಂಡೇಷನ್ ಸ್ಥಾಪಕಾಧ್ಯಕ್ಷ ಪಟ್ಲ ಸತೀಶ್ ಶೆಟ್ಟಿ ಮತ್ತು ಭಾಗವತ ಸುರೇಶ್ ಶೆಟ್ಟಿ ಅವರಿಗೆ ಪಟ್ಲ ಫೌಂಡೇಷನ್ ದೆಹಲಿ ಘಟಕದ ವತಿಯಿಂದ ಸನ್ಮಾನಿಸಲಾಯಿತು.

ಪಟ್ಲ ಫೌಂಡೇಷನ್‌ನ ಕೇಂದ್ರ ಸಮಿತಿ ಉಪಾಧ್ಯಕ್ಷ ಅಶೋಕ್ ಶೆಟ್ಟಿ ಪೆರ್ಮುದೆ, ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ ಭಂಡಾರಿ ಸಭೆಯಲ್ಲಿ ಉಪಸ್ಥಿತರಿದ್ದರು. ದೆಹಲಿ ಘಟಕದ ಗೌರವ ಸಲಹೆಗಾರ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಸ್ವಾಗತಿಸಿದರು. ದೆಹಲಿ ಘಟಕದ ಸಂಚಾಲಕ ಕಾರ್ತಿಕ್ ರೈ ವಂದಿಸಿದರು. ಪ್ರಧಾನ ಕಾರ್ಯದರ್ಶಿ ಪೃಥ್ವಿ ಕಾರಿಂಜೆ ಕಾರ್ಯಕ್ರಮ ನಿರ್ವಹಿಸಿದರು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ್ ಸಹಕರಿಸಿದರು.

### ಯಕ್ಷಗಾನ ನಾಟ್ಯ ವೈಭವ

ದೆಹಲಿಯಲ್ಲಿ ಮೊದಲ ಬಾರಿಗೆ ತೆಂಕು ಮತ್ತು ಬಡಗುತಿಟ್ಟಿನ ಕಲಾವಿದರ ಕೂಡುವಿಕೆಯಿಂದ ಹೊರಬಂದ ಯಕ್ಷಗಾನ ನಾಟ್ಯ ವೈಭವ ದೆಹಲಿ ಕನ್ನಡಿಗರು ಹಾಗೂ ಕನ್ನಡೇತರರ ಮನಸೆಳೆಯುವಲ್ಲಿ ಯಶಸ್ವಿಯಾಯಿತು. ನಿರೀಕ್ಷೆಗೂ ಮೀರಿದ ಸಂಖ್ಯೆಯ ಯಕ್ಷಾಭಿಮಾನಿಗಳಿಂದ ಕಿಕ್ಕಿರಿದಿದ್ದ ಕರ್ನಾಟಕ ಸಂಘ ಅಪೂರ್ವ ಕಾರ್ಯಕ್ರಮವೊಂದಕ್ಕೆ ಸಾಕ್ಷಿಯಾಯಿತು. ರಕ್ಷಿತ್ ಶೆಟ್ಟಿ ಪಡ್ರೆ ಮತ್ತು ವಿಶ್ವನಾಥ ಹೆಣ್ಣಬೈಲ್ ಅವರ ಕೃಷ್ಣ–ಅಸೀಕೆ ಪ್ರೇಮ ಸಲ್ಲಾಪ, ದಿಶಾ ಶೆಟ್ಟಿ–ವರ್ಷಾ ಶೆಟ್ಟಿ ಅವರ ರಾಧಾ ವಿಲಾಸ, ಲೋಕೇಶ್ ಮುಚ್ಚೂರು ಮತ್ತು ಸಂದೇಶ್ ಮಂದಾರ ನಡೆಸಿಕೊಟ್ಟ ಕೃಷ್ಣ ವಿಜಯ, ಶಕಟಾಸುರನಾಗಿ ಹರಿನಾರಾಯಣ ಎಡನೀರು, ಧೇನುಕಾಸುರನಾಗಿ ರಾಹುಲ್ ಶೆಟ್ಟಿ ಕುಡ್ಲ, ವಿಶ್ವನಾಥ ಹೆಣ್ಣಬೈಲ್ ಅವರ ವೀರರಸ, ಮಾನಿಷಾದ ಪ್ರಸಂಗದ ರೂಕ್ಷ ಮತ್ತು ಸೈರಿಣಿಯ ಪ್ರೇಮ ಪ್ರಸಂಗಗಳ ಪ್ರಸ್ತುತಿ ನೋಡುಗರನ್ನು ಸೆರೆ ಹಿಡಿದುಕೊಂಡಿದ್ದವು. ಹಿಮ್ಮೇಳದಲ್ಲಿ ಪಟ್ಲ ಸತೀಶ್ ಶೆಟ್ಟಿ, ಸುರೇಶ ಶೆಟ್ಟಿ, ಸುಬ್ರಹ್ಮಣ್ಯ ಭಟ್ ದೇಲಂತಮಜಲು, ವಿನಯ ಆಚಾರ್ಯ ಕಡಬ, ಶಶಿಕುಮಾರ್ ಆಚಾರ್ಯ, ರಜನೀಶ್ ಭಟ್ ಸಹಕರಿಸಿದರು. ಅ

*ಪೃಥ್ವಿ ಕಾರಿಂಜೆ*

# ಯಕ್ಷಗಾನ ನಾಟ್ಯ ವೈಭವ

## ತೆಂಕು ಬಡಗುತಿಟ್ಟಿನ ಕಲಾವಿದರ ಕೂಡುವಿಕೆಯಲ್ಲಿ ಮನಸೂರೆಗೊಂಡ ಕಲೆ

ಮಂಗಳೂರಿನ ಪಟ್ಲ ಫೌಂಡೇಶನ್ನಿನ ದೆಹಲಿ ಘಟಕದ ಉದ್ಘಾಟನೆಯು ಕಳೆದ ಸೆಪ್ಟಂಬರ್ 25ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆದಿದ್ದು, ಆ ದಿವಸ ನಡೆದ ಯಕ್ಷಗಾನವು ಶ್ರೀ ಪಟ್ಲ ಸತೀಶ ಶೆಟ್ಟರು ಭಾಗವತಿಕೆಯಲ್ಲಿ ಹಿಡಿದ ಹೊಸ ಹಾದಿ ಮತ್ತು ಅದರ ಶಕ್ತಿಯನ್ನು ಪೂರ್ಣವಾಗಿ ಅನಾವರಣ ಮಾಡಿತು. ಎರಡು ವರ್ಷದ ಹಿಂದೆ ನಡೆದ ದೇವೀ ಮಹಾತ್ಮೆ ಯಕ್ಷಗಾನಕ್ಕೆ ಅವರು ಭಾಗವತರಾಗಿ ಬಂದಿದ್ದರೂ ಆ ದಿವಸ ಆಕಸ್ಮಿಕವಾಗಿ ಅವರ ಸ್ವರ ಬಿದ್ದು ಹೋದದ್ದರಿಂದ ಅವರ ಪ್ರತಿಭೆಯ ಪೂರ್ಣ ಪರಿಚಯ ದೆಹಲಿ ಕನ್ನಡಿಗರಿಗೆ ಆಗಿರಲಿಲ್ಲ. ಆ ಕೊರತೆಯನ್ನು ಈ ಸಲ ನಾವೆಲ್ಲ ನೀಗಿ ಕೊಂಡೆವು.

ಪಟ್ಲದವರ ಭಾಗವತಿಕೆ ಹೊಸ ಬಗೆಯದು. ಪರಂಪರೆಯನ್ನು ವಿಸ್ತರಿಸಿ, ಅದಕ್ಕೆ ಹೊಸ ಆಯಾಮ ನೀಡಿದ ಅವರು ಆ ಮೂಲಕ ಕಳೆಗುಂದುತ್ತಿದ್ದ ಯಕ್ಷಗಾನಕ್ಕೆ ಮರು ಜೀವ ನೀಡಿದರು. ಇವತ್ತು ಪಟ್ಲರು ಮತ್ತು ಅವರಂತೆ ಹಾಡುವ ನೂರಾರು ತರುಣ ಭಾಗವತರು ಯಕ್ಷಗಾನ ಕ್ಷೇತ್ರವನ್ನು ಜೀವಂತವಾಗಿರಿಸಿದ್ದಾರೆ. ಇವತ್ತು ಭಾಗವತರುಗಳೇ ಸೇರಿ ಹಾಡುವ 'ಗಾನ ವೈಭವ' ಕಾರ್ಯಕ್ರಮಗಳು ಕರಾವಳಿಯಾದ್ಯಂತ ನಡೆಯುತ್ತಿವೆ. ಇದೊಂದು ಅಸಾಮಾನ್ಯ ಘಟನೆ. ಇದಕ್ಕಾಗಿ ಯಕ್ಷಗಾನ ಕ್ಷೇತ್ರ ಅವರಿಗೆ ಸದಾ ಋಣಿಯಾಗಿರುತ್ತದೆ.

ಪರಂಪರೆಯೊಳಗೆ ಹೊಸದೊಂದು ಉದ್ಭವವಾಗುತ್ತಿರುವಾಗ ಅದರ ಕುರಿತು ಮೆಚ್ಚುಗೆಯ ಮತ್ತು ವಿಮರ್ಶೆಯ ಮಾತುಗಳು ಸಹಜವಾಗಿ ಕೇಳಿಬರುತ್ತವೆ. ಪಟ್ಲರ ಬಗ್ಗೆಯೂ ಅಂತ ಮಾತುಗಳು ಕೇಳಿ ಬರದೇ ಇಲ್ಲ. ಅವರು ಹಾಡನ್ನು ತುಂಬ ವಿಸ್ತರಿಸಿ ಹೇಳುವಾಗ ರಂಗದ ಮೇಲಿನ ಕಲಾವಿದರು ಏನು ಮಾಡಬೇಕು? ಎಂದು ಕೆಲವರು ಕೇಳಿದ್ದುಂಟು. ವಾಸ್ತವವಾಗಿ ಇದು ನಟರ ಸಮಸ್ಯೆಯೇ ವಿನಾ ಭಾಗವತರ ಸಮಸ್ಯೆಯಲ್ಲ. ಯಕ್ಷಗಾನ ನಟರು ಬಹುಬೇಗ ಈ ಸಮಸ್ಯೆಗೆ ಉತ್ತರ ಕಂಡುಕೊಂಡು, ಅವರು ನಾಟ್ಯವನ್ನೂ ವಿಸ್ತರಿಸಿಕೊಂಡರು. ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವರ್ಷಾ ಮತ್ತು ದಿಶಾ ಪಟ್ಲರ ಹಾಡಿಗೆ ಕುಣಿದ ರೀತಿಯೇ ಇದಕ್ಕೆ ಒಳ್ಳೆಯ ಉದಾಹರಣೆ. ಹೀಗೆ ಹಾಡುಗಾರಿಕೆ ಮತ್ತು ಕುಣಿತದಲ್ಲಿ ಬದಲಾವಣೆ ಸಂಭವಿಸಿದ್ದನ್ನು ಕಂಡಾಗ ಯಕ್ಷಗಾನದಲ್ಲಿ ನವೀನ ಪರಂಪರೆಯೊಂದು ಹುಟ್ಟಿಕೊಂಡಿದೆ ಎಂದು ನಮಗೆಲ್ಲ ಅನ್ನಿಸುವುದು ಸಹಜವೇ ಸರಿ.

ಹಾಗೆ ನೋಡಿದರೆ ಯಕ್ಷಗಾನದಲ್ಲಿ ಪರಂಪರೆ ಎಂದರೆ ಏನು? ನವೀನತೆ ಎಂದರೆ ಏನು ಎಂಬುದನ್ನು ಸರಿಯಾಗಿ ವಿವರಿಸಲು ನಮಗೆ ಗೊತ್ತಿಲ್ಲ. ಯಕ್ಷಗಾನದಲ್ಲಿ ಪರಂಪರೆಯ ಹೆಸರಿನಲ್ಲಿ ನಿರಂತರವಾಗಿ ಮುಂದುವರೆದುಕೊಂಡು ಬರುತ್ತಿರುವ 'ಸ್ಥಿರ' ಅಥವಾ 'ಸ್ಥಾವರ' ಅಂಶಗಳು ಯಾವುವು? ಮತ್ತು ದಿನನಿತ್ಯದ ಪ್ರಯೋಗದಲ್ಲಿ ನವೀನಗೊಳ್ಳುತ್ತಿರುವ 'ಚರ' ಅಥವಾ 'ಜಂಗಮ' ಅಂಶಗಳು ಯಾವುವು? ಎಂಬುದರ ಬಗೆಗೆ ನಮ್ಮಲ್ಲಿ ಖಚಿತವಾದ ತೀರ್ಮಾನಗಳಿಲ್ಲ. ಯಕ್ಷಗಾನದ ಬಗ್ಗೆ ಬಹಳ ಚರ್ಚೆಗಳು ನಡೆದ ಅನಂತರವೂ ಅದರ 'ಪರಂಪರೆ'ಯ ಬಗ್ಗೆ ಅಖೈರಾದ ಮಾತುಗಳನ್ನು ಹೇಳಲಾಗಿಲ್ಲ. ನಾನು 1960ರ ದಶಕದಲ್ಲಿ ನೋಡಿದ ಅನೇಕ ಯಕ್ಷಗಾನ ಪ್ರದರ್ಶನಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಅಂಶಗಳನ್ನು ಆಗ 'ಇದು ಆಧುನಿಕವಾದದ್ದು, ಪರಂಪರೆಯಲ್ಲಿ ಇದಿರಲಿಲ್ಲ' ಎನ್ನಲಾಗುತ್ತಿತ್ತು. ಆದರೆ ಈಗ ಸುಮಾರು 50 ವರ್ಷಗಳ ಅನಂತರ ಅವುಗಳನ್ನು ಪರಂಪರೆಯ ಭಾಗವನ್ನಾಗಿ ನೋಡಲಾಗುತ್ತಿದೆ. ಹಾಗಾದರೆ ಪರಂಪರೆಯೆಂದು ಯಾವುದನ್ನು ನಾವು ಹೇಳುವುದು? ಎಲ್ಲಿಂದ ಹೇಳುವುದು? ಯಾರದನ್ನು ಹೇಳುವುದು? ಸೂರಿಕುಮೇರು ಗೋವಿಂದ ಭಟ್ಟರು ಪರಂಪರೆ ಎಂದು ಒಂದನ್ನು ತೋರಿಸಿದರೆ, ಪಡ್ರೆ ಚಂದು ಅವರು ಇನ್ನೊಂದನ್ನು ತೋರಿಸುತ್ತಾರೆ. ಪುತ್ತೂರು ಶ್ರೀಧರ ಭಂಡಾರಿಯವರದು ಬೇರೆಯದೇ ಶೈಲಿ. ಹಾಗೇ ಹಾಡುಗಾರಿಕೆಯಲ್ಲೂ ಅದೇ ವೈವಿಧ್ಯ. ಬಲಿಪ ನಾರಾಯಣ ಭಾಗವತರದು ಒಂದು ಶೈಲಿಯಾದರೆ, ಪದ್ಯಾಣ ಗಣಪತಿ ಭಟ್ ಅವರದು ಇನ್ನೊಂದು. ಕಡತೋಕ ಮಂಜುನಾಥ ಭಾಗವತರದು ಅವರದ್ದೇ ಶೈಲಿಯಾದರೆ ದಾಮೋದರ ಮಂಡೆಚ್ಚರದು ಅವರದ್ದೇ ಆದ ವಿಶಿಷ್ಟ ಹಾಡುಗಾರಿಕೆ, ಅಗರಿಯವರದೇ ಬೇರೆ. ಎಲ್ಲರೂ ತಮ್ಮ ತಮ್ಮ ವ್ಯಕ್ತಿ ವಿಶಿಷ್ಟ ಪ್ರತಿಭೆಗಳಿಂದ ಅವರದ್ದೇ ಆದ ಶೈಲಿಯೊಂದನ್ನು ರೂಪಿಸಿಕೊಂಡಿದ್ದಾರೆ. ಈಗ ಅದಕ್ಕೆ ತನ್ನತನವನ್ನು ಸೇರಿಸಿದವರು ಶ್ರೀ ಪಟ್ಲ ಸತೀಶ ಶೆಟ್ಟರು ( ಬಡಗಿನಲ್ಲಿ ಶ್ರೀ ಜಾನ್ಸಲೆ ಅವರು ಇದನ್ನು ಸಮರ್ಥವಾಗಿ ಮಾಡಿದ್ದಾರೆ). ಯಕ್ಷಗಾನವು ಒಂದು ಜೀವಂತ ಕಲೆಯಾದ್ದರಿಂದ ಬದಲಾವಣೆಗಳು ಕ್ಷಿಪ್ರವಾಗಿ ಸಂಭವಿಸುತ್ತಲಿವೆ. ಈ ಅರ್ಥದಲ್ಲಿ ಬದಲಾವಣೆಯೇ ಅದರ ಜೀವಂತಿಕೆಗೂ ಕಾರಣವಾಗಿದೆ.

ನೃತ್ಯ ವೈಭವವನ್ನು ನಾವೆಲ್ಲ ನೋಡಿ ಆನಂದಿಸಿದ್ದೇವೆ. ದಿಶಾ ಮತ್ತು ವರ್ಷಾ ಅವರು ಕೃಷ್ಣನ ತುಂಟಾಟವನ್ನು ಸಮರ್ಥವಾಗಿ ಅಷ್ಟೇ ಉತ್ಸಾಹದಿಂದ ಅಭಿವ್ಯಕ್ತಿಸಿದ್ದಾರೆ. ಪರಂಪರೆಯ ವೇಷವನ್ನಿರಿಸಿಕೊಂಡೂ ಅವರಿಗೆ ಹೊಸ ಅಭಿವ್ಯಕ್ತಿ ಸಾಧ್ಯವಾಗಿದೆ. ಅಲ್ಲಿ ಇಲ್ಲಿ ಬಡಗಿನ ಕೆಲವು ಕ್ರಮಗಳೂ ಆಭಾಸವಾಗದಂತೆ ಸೇರಿಕೊಂಡಿದ್ದು ನೋಡುಗರ ಕಣ್ಮನವನ್ನು ತಣಿಸಿತು. ಬಡಗಿನ ಕಲಾವಿದರಾದ ಶ್ರೀ ವಿಶ್ವನಾಥ ಹೆನ್ನಬೈಲ್ ಮತ್ತು ಸಂದೇಶ ಮಂದಾರ ಅವರು ಯಕ್ಷಗಾನದ ಕೆಲವು ಸೂಕ್ಷ್ಮಗಳನ್ನು



ಬಿಟ್ಟುಕೊಡದೆ ಕುಣಿದದ್ದು ನನಗಂತೂ ತುಂಬಾ ಸಂತೋಷ ನೀಡಿತು. ತೆಂಕು ಬಡಗುಗಳಲ್ಲಿ ಸಮನಾದ ಹಿಡಿತ ಸಾಧಿಸಿದ ಶ್ರೀ ರಕ್ಷಿತ್ ಶೆಟ್ಟಿ ಒಬ್ಬ ಅಸಾಮಾನ್ಯ ಕಲಾವಿದ. ಲೋಕೇಶ್ ಅವರ ಧೀಂಗಣದಲ್ಲಿ ಒಂದು ಬಗೆಯ ಶಿಸ್ತು ಮತ್ತು ವೇಗ ಇದ್ದುದರಿಂದ ಆಪ್ತವಾಯಿತು. ರಾಹುಲ್ ಶೆಟ್ಟಿ ಅವರ ಇದಿರು ಬಣ್ಣದ ಗತ್ತು ಈಚಿನ ದಿನಗಳಲ್ಲಿ ನೋಡಲು ಸಿಗದಂಥದ್ದು. ಹರಿನಾರಾಯಣ ಎಡನೀರು ಅವರ ಬಣ್ಣದ ವೇಷದ ನಯನ ಮನೋಹರವಾಗಿದ್ದು ಪರಂಪರೆಯ ಬಣ್ಣದ ವೇಷದ ಸೊಗಸನ್ನು ಕ್ಷಣಾರ್ಧದಲ್ಲಿ ತೆರೆದಿಟ್ಟಿತು. ಈ ಎಲ್ಲಾ ವೇಷಗಳಿಗೆ ಹಿನ್ನೆಲೆಯಲ್ಲಿ ಪಟ್ಲರ ಜೊತೆಗೆ ಭಾಗವತರಾಗಿ ಶ್ರೀ ಸುರೇಶ ಶೆಟ್ಟಿ, ಚೆಂಡೆವಾದಕರಾಗಿ ದೇಲಂತಮಜಲು ಸುಬ್ರಹ್ಮಣ್ಯ ಭಟ್ಟ, ಹಾಗೂ ವಿನಯ ಆಚಾರ್ಯ, ಶಶಿ ಕುಮಾರ್ ಆಚಾರ್ಯ ಮತ್ತು ರಜನೀಶ್ ಭಟ್ ಅವರು ತಮ್ಮ ಚಾಕಚಕ್ಯತೆಯನ್ನು ಮೆರೆದರು.

ಇಡೀ ಪ್ರದರ್ಶನವು, ಒಂದೆರಡು ಸಂದರ್ಭ ಬಿಟ್ಟರೆ, ಒಂದು ಪರಿಣಾಮಕಾರೀ ರೂಪಕದಂತೆ ಕಂಡಿತು. ಶಿವರಾಮ ಕಾರಂತರು ವಿದೇಶೀ ಪ್ರೇಕ್ಷಕರನ್ನು ಗಮನದಲ್ಲಿರಿಸಿಕೊಂಡು, ಬಡಗುತಿಟ್ಟಿನ ಯಕ್ಷಗಾನವನ್ನು ಬ್ಯಾಲೆ ರೂಪಕ್ಕೆ ತಿರುಗಿಸಿದ್ದುಂಟು. ಆ ಸಂದರ್ಭದಲ್ಲಿ ಅವರು ಪರಂಪರೆಯ ಮಿತಿಗಳು ಎಂಬ ಲೇಖನ ಬರೆದು, ಮುಂದೆ ತನಗೆ ಬೇಕಾದಂತ ಕೆಲವು ಮಾರ್ಪಾಡುಗಳನ್ನು ಹಾಡು, ಕುಣಿತ ಮತ್ತು ವೇಷಭೂಷಣಗಳಲ್ಲಿ ಮಾಡಿಕೊಂಡರು. ಮಾತನ್ನು ಪೂರ್ತಿಯಾಗಿ ತೆಗೆದುಬಿಟ್ಟರು. ರಂಗ ಚಲನೆ ಮತ್ತು ಸಮತೋಲನದ ವಿಷಯದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಸಾಧನೆಯನ್ನೂ ಮಾಡಿದರು. ಅದೊಂದು ಪ್ರಯೋಗ ಹಾಗೆಯೇ ಪಟ್ಲರದೂ ಇನ್ನೊಂದು ಪ್ರಯೋಗ. ನಾಟ್ಯ ವೈಭವದಲ್ಲಿ ಕೂಡಾ ಬಹುತೇಕವಾಗಿ ಮಾತನ್ನು ತೆಗೆದು ಹಾಕಲಾಗಿದೆ. ಪರಂಪರೆಯ ಉಳಿದ ಅಂಶಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ.

ಇಂಥ ವಿಸ್ತರಣೆಗಳನ್ನು ಯಕ್ಷಗಾನದ ಮೂಲಕ ಕತೆ ಹೇಳುವಾಗ ಹಾಗೆಯೇ ಉಳಿಸಿಕೊಳ್ಳುವುದು ಕಷ್ಟ. ಏಕೆಂದರೆ ಯಕ್ಷಗಾನದ ಜೀವಾಳವಾದ ಕತೆ ಹೇಳುವುದು ಮತ್ತು ಸಂವಾದದ ಮೂಲಕ ಕತೆಯನ್ನು ಬೆಳೆಸಲು ಇಲ್ಲಿ ಅಂಥ ಅವಕಾಶವಿಲ್ಲ. ಈ ಅರ್ಥದಲ್ಲಿ ಶೇಣಿ, ಸಾಮಗ, ಕುಂಬಳೆಯವರಂಥ ಕಲಾವಿದರನ್ನು ಇಲ್ಲಿ ಕಾಣಲು ಸಾಧ್ಯವಿಲ್ಲ.

ಕಾಣಲೇ ಬೇಕೆಂಬ ಹಠದಲ್ಲಿ ಇದನ್ನು ನಾನು ಬರೆಯುತ್ತಿಲ್ಲ. ಪ್ರತಿಯೊಂದು ಪ್ರಯೋಗಗಳಿಗೂ ಅದರದ್ದೇ ಆದ ಶಕ್ತಿ ಮತ್ತು ದೌರ್ಬಲ್ಯಗಳಿರುತ್ತವೆ ಎಂಬುದನ್ನು ಗಮನಕ್ಕೆ ತರಲಷ್ಟೇ ಬರೆದೆ.

ಏನೇ ಇದ್ದರೂ ಕಳೆಗುಂದುತ್ತಿದ್ದ ಯಕ್ಷಗಾನಕ್ಕೆ ಮರುಜೀವ ತುಂಬಿದ, ಯಕ್ಷಗಾನ ಗಂಡು ಕಲೆಯೆಂಬ ಮಾತನ್ನು ತಿರಸ್ಕರಿಸಿದ, ತೆಂಕು ಬಡಗು ಪ್ರಬೇಧಗಳನ್ನು ಒಂದಾಗಿಸಿದ, 'ಯಕ್ಷಗಾನ ನಾಟ್ಯ ವೈಭವ'ದ ಎಲ್ಲ ಕಲಾವಿದರಿಗೂ ನನ್ನ ಹೃದಯಪೂರ್ವಕ ಅಭಿನಂದೆಗಳು. ನೀವೆಲ್ಲ ಈ ಮಹಾನ್ ಕಲೆಯ ಉಳಿವಿಗೆ ಕಾರಣಕರ್ತರಾಗಿದ್ದೀರಿ. ದೊಡ್ಡ ಸಂಖ್ಯೆಯಲ್ಲಿ ನೆರೆದ ಪ್ರೇಕ್ಷಕರು ಕೂಡಾ ಈ ಕಲೆಯ ಉಳಿವಿನಲ್ಲಿ ಪ್ರೇಕ್ಷಕರದೂ ಮುಖ್ಯ ಪಾತ್ರವಿದೆ ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಿದರು. ಅ

*ಡಾ. ಪುರುಷೋತ್ತಮ ಬಿಳಿಮಲೆ*

# ತೆಂಕು-ಬಡಗು ಶೈಲಿ ಯಕ್ಷಗಾನದ ಸಮ್ಮಿಳನ

ಯಕ್ಷಧ್ರುವ ಪಟ್ಲ ಫೌಂಡೇಷನ್‌ನ ದೆಹಲಿ ಘಟಕದ ಉದ್ಘಾಟನಾ ಸಮಾರಂಭದಂದು ನಡೆದ 'ಯಕ್ಷ ನಾಟ್ಯ ವೈಭವ' ತೆಂಕು-ಬಡಗು ಶೈಲಿಯ ಯಕ್ಷಗಾನದ ಒಂದು ಅತ್ಯಮೋಘ ಸಮ್ಮಿಳನವಾಗಿತ್ತು. ಚೆಂಡೆ-ಮದ್ದಳೆ-ತಾಳ ಹಾಗೂ ವೇಷಭೂಷಣಗಳ ಮೆರುಗು, ಅದ್ಭುತವಾದ ಗಾಯನ-ಹಾಡುಗಾರಿಕೆ ಎಲ್ಲವೂ ನೆರೆದ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದ್ದವು.

ಶ್ರೀ ಸತೀಶ ಶೆಟ್ಟಿ ಪಟ್ಲ ಹಾಗೂ ಶ್ರೀ ಸುರೇಶ ಶೆಟ್ಟಿಯವರ ತೆಂಕು-ಬಡಗಿನ ಭಾಗವತಿಕೆ ಎಲ್ಲೋ ಯಕ್ಷಲೋಕಕ್ಕೆ ಕೊಂಡೊಯ್ದಿದಿತ್ತು. ಕೃಷ್ಣ-ಸತ್ಯಭಾಮೆಯರ ನಾಟ್ಯದಲ್ಲಿ ಬಡಗಿನ ಬೆಡಗಿನ ಸೌಂಧರ್ಯ ಮೆರೆದರೆ, ಕೃಷ್ಣ-ರಾಧೆಯರ ರಾಸಲೀಲೆಯಲ್ಲಿ ತೆಂಕಿನ ಸೊಗಡು ಅಡರುತ್ತಿತ್ತು. ನಾಟ್ಯದುದ್ದಕ್ಕೂ ನಟರು ಅಭಿನಯಿಸಿದ ಹಾವ-ಭಾವಗಳು, ನರ್ತನ, ವೈಯಾರ ವಿವಿಧ ಭಂಗಿಗಳು ಯಕ್ಷಗಾನ ಪ್ರಿಯರಿಗೆ ರಸದೌತಣವಾಗಿತ್ತು. ಮಧ್ಯದಲ್ಲಿ ಮೂಡಿ ಬಂದ ಹಾಸ್ಯರಸದಿಂದ ಕೂಡಿದ ಶ್ರೀಕೃಷ್ಣ-ವಿಜಯರ ಸಂಭಾಷಣೆ ಹಾಗೂ ರಾಕ್ಷಸರ ಬಣ್ಣದ ವೇಷಗಳು, ಅಬ್ಬರ, ಕುಣಿತ, ಗಿರಗಿಟಿ ನೆರೆದವರೆಲ್ಲರನ್ನೂ ಅತ್ತಿತ್ತ ಅಲುಗಾಡದಂತೆ ಹಿಡಿದಿಟ್ಟಿತ್ತು. ಈ ಸನ್ನಿವೇಶದಲ್ಲಿ ಬಂದ ಎರಡು ರಾಕ್ಷಸ ವೇಷಗಳಲ್ಲಿ ಒಂದು ಬಡಗು ತಿಟ್ಟಿನದಾಗಿದ್ದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತೋ ಏನೋ ಅನ್ನಿಸಿತ್ತು. ಚೆಂಡೆ-ತಾಳ-ಜಾಗಂಟೆ, ವೇಷ-ಭೂಷಣಗಳೂ ಸ್ವಲ್ಪ ಬೇರೆ-ಬೇರೆಯಾಗಿ ಕಂಡಿತೇ ಹೊರತು ಉಳಿದಂತೆ ಹಾಡುಗಾರಿಕೆ, ನಟನೆ, ಮದ್ದಳೆ, ನರ್ತನ-ಕುಣಿತಗಳು ತೆಂಕು-ಬಡಗನ್ನು ಮರೆಸಿ ಯಕ್ಷಲೋಕದೆತ್ತರಕ್ಕೇರಿಸಿತ್ತು. ಇದೊಂದು ನೋಡುವವರ ಕಣ್ಮನಗಳಿಗೆ ಅದ್ಭುತ ಅನುಭವವಾಗಿತ್ತು. ಬಡಗುತಿಟ್ಟಿನ ಯಕ್ಷಗಾನದಲ್ಲಿ ಹಿಂದೊಮ್ಮೆ ದಿ. ಕಾಳಿಂಗ ನಾವಡರು ಪ್ರಯತ್ನಿಸಿ ಹೊಸತನ ತಂದಂತೆ ಇದೀಗ ಶ್ರೀ ಪಟ್ಲ ಸತೀಶ್ ಶೆಟ್ಟರು ರೋಮಾಂಚನಕಾರಿಯಾದ ಮಹತ್ವದ ಹೊಸತನವನ್ನು ತುಂಬಿದ್ದಾರೆ. ಅವರ ಕಂಠಶ್ರೀ ಒಂದು ದೈವ ದೇಣಿಗೆಯಾಗಿದ್ದು ಯಕ್ಷಗಾನಕ್ಕೆ ಹೊಸ ಜೀವ ತುಂಬುವಲ್ಲಿ ಬಹುದೊಡ್ಡ ಕೊಡುಗೆಯಾಗಿದೆ. ಅ

*ಸಖಾರಾಮ ಉಪ್ಪೂರು*




# ದೆಹಲಿಯಲ್ಲಿ ಮೂಡಿ ಬಂದ ರವಿ-ಹಂಸರಾಗ

## ಸ್ವರಾಂಜಲಿ ಪ್ರಸ್ತುತಪಡಿಸಿದ ಸಂಗೀತ ಕಾರ್ಯಕ್ರಮ

ದೆಹಲಿಯ ಕನ್ನಡಿಗರು ಪ್ರೀತಿಯಿಂದ ಬೆಳೆಸಿರುವ 'ಸ್ವರಾಂಜಲಿ' ತಂಡದ ವತಿಯಿಂದ ನಾದಬ್ರಹ್ಮ ಹಂಸಲೇಖ ಹಾಗೂ ಕ್ರೇಜಿಸ್ಟಾರ್ ರವಿಚಂದ್ರನ್ ಒಳಗೊಂಡಂತಹ ಮಧುರವಾದ, ಇಂಪಾದ ಚಲನಚಿತ್ರಗೀತೆಗಳನ್ನು ಆಯ್ದುಕೊಂಡು ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಬಹಳ ಸುಂದರವಾಗಿ ಸಜ್ಜಾಗಿಸಿ-ಸಭಾಂಗಣದಲ್ಲಿ ಕಿಕ್ಕಿರಿದು ಪ್ರೀತಿಯಿಂದ ಬಂದ ದೆಹಲಿ ಕನ್ನಡಿಗರಿಗೆ ಹಾಡುಗಳ ರಸದೌತಣವನ್ನು ಇದೇ ಸೆಪ್ಟೆಂಬರ್ 10ರಂದು ನೀಡಲಾಯಿತು. ಇದು ಸ್ವರಾಂಜಲಿಯ ಎರಡನೇ ಪ್ರಯೋಗವಾಗಿತ್ತು. ಸ್ವರಾಂಜಲಿ ತಂಡದಲ್ಲಿ ಹಿರಿಯರಾದ ಅಶೋಕ್ ಕುಂಬಾರ್ ಅವರ ಮಾರ್ಗದರ್ಶನದೊಂದಿಗೆ, ಪೂಜಾ ರಾವ್, ಎ.ಟಿ. ಶ್ರೀನಿವಾಸ್, ಮಂಜುಳಾ ನಾಗರಾಜ್, ಶುಭಾ ದೇವಿಪ್ರಸಾದ್, ವಿಶಾಲ್ ಹೂಗಾರ್, ಅರವಿಂದ ಬಿಜ್ಜೆ ಇವರೆಲ್ಲರ ಮಧುರ ಕಂಠವಿತ್ತು ಹಾಗೂ ಕಾರ್ಯಕ್ರಮಕ್ಕೆ ಮೆರುಗು ನೀಡಿದ ಮಕ್ಕಳ ನೃತ್ಯ ಮನಮೋಹಕವಾಗಿತ್ತು.

ಸ್ವಾತಿ ಎ.ಟಿ. ಶ್ರೀನಿವಾಸ್, ತೃಪ್ತಿ ಕುಮಾರಸ್ವಾಮಿ ಹಾಗೂ ಗಾನವಿ ಗಿರೀಶ್ ನೃತ್ಯದಲ್ಲಿ ಪಾಲ್ಗೊಂಡಿದ್ದರು. ಈ ಸುಂದರ ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಹಿರಿಯರಾದ ಶಿವಾನಂದ ಇಂಗಳೇಶ್ವರ ಹಾಗೂ ದಿನಕರ ಬಳಗದ ಎಲ್ಲಾ ಸದಸ್ಯರನ್ನು ಸ್ವರಾಂಜಲಿ ತಂಡವು ಸ್ಮರಿಸಿತು. ಕಾರ್ಯಕ್ರಮದ ನಿರೂಪಣೆಯನ್ನು ಪ್ರಕಾಶ್ ಶೆಟ್ಟಿ ಉಳೆಪಾಡಿ ಅವರು ಸುಗಮವಾಗಿ ನಡೆಸಿಕೊಟ್ಟರು. ಅ

*ಗಿರೀಶ್ ಎಸ್.*

# ಕಾವೇರಿ ಜಲವಿವಾದ

## ಸಮಕಾಲೀನ ಸತ್ಯಾಂಶಗಳ ಆಧಾರದ ಮೇಲೆ ನ್ಯಾಯಸಮ್ಮತ ತೀರ್ಮಾನಕ್ಕೆ ನಾಂದಿ ಹಾಡಬೇಕಾಗಿದೆ

ಕಾವೇರಿ ಜಲ ವಿವಾದ ಈಗ ಮತ್ತೊಮ್ಮೆ ಮುಗಿಲೆತ್ತರಕ್ಕೆ ಬೆಳೆದಿದೆ. ಶತಮಾನಗಳ ಚರಿತ್ರೆ ಹೊಂದಿರುವ ಈ ವಿವಾದ ಮತ್ತೆ ಮತ್ತೆ ಕರ್ನಾಟಕ ಹಾಗೂ ತಮಿಳುನಾಡಿನ ಜನತೆಯ ಶಾಂತಿಯನ್ನು ಕೆಡಿಸುತ್ತಲೇ ಬಂದಿದೆ. ದೇಶ ಸ್ವಾತಂತ್ರ್ಯವಾಗಿ 70ವರ್ಷಗಳೇ ಕಳೆದರೂ ಈ ಗಂಭೀರ ಸಮಸ್ಯೆಗೆ ಇಂದಿಗೂ ಒಂದು ಮೂಲಭೂತವಾದ ಪರಿಹಾರವನ್ನು ಕಂಡುಕೊಳ್ಳಲಾಗದಿರುವುದು ಒಂದು ಬಹುದೊಡ್ಡ ವಿಪರ್ಯಾಸ. ಭಾರತ ವಿಶ್ವದ ಬಹುದೊಡ್ಡ ಪ್ರಜಾಪ್ರಭುತ್ವ. ನಮ್ಮ ಸಂವಿಧಾನ ಕೂಡಾ ಅತ್ಯಂತ ದೊಡ್ಡದು ಮತ್ತು ಮಹತ್ವಪೂರ್ಣವಾದುದು. ಇಲ್ಲಿ ಎಲ್ಲವೂ ಮಾತುಕತೆಗಳ ಮೂಲಕ ಪರಿಹಾರವಾಗುತ್ತದೆ ಎನ್ನುವ ಅಭಿಪ್ರಾಯ ಇದ್ದರೂ ಕೂಡ ಮೂಲಭೂತ ಸಮಸ್ಯೆಗಳಾದ ನೀರು ಹಂಚಿಕೆ, ಗಡಿವಿವಾದ ಹಾಗೂ ಭಾಷಾವಾರು ಪ್ರಾಂತ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳು ಇಂದಿಗೂ ಆಗಿಂದಾಗ್ಗೆ ತಲೆ ಎತ್ತಿ ರಾಜ್ಯ-ರಾಜ್ಯಗಳ ನಡುವೆ ಅತ್ಯಂತ ಗಂಭೀರ ಪರಿಸ್ಥಿತಿಯನ್ನು ಉಂಟು ಮಾಡುತ್ತಿವೆ.

ನೀರು, ಭಾಷೆ, ಗಡಿ ಇವುಗಳು ಅತ್ಯಂತ ಸೂಕ್ಷ್ಮವಾದ ವಿಚಾರಗಳಾಗಿದ್ದು, ಜನಸಾಮಾನ್ಯರನ್ನು ಬಹಳ ಬೇಗ ಪ್ರಚೋದನೆಗೊಳಪಡಿಸುತ್ತವೆ. ದೇಶದ ಯಾವುದೇ ಭಾಗದಲ್ಲಿ ಈ ವಿಷಯಗಳ ಕುರಿತಾಗಿ ವಿವಾದ ಉಂಟಾದಾಗ ಸಾಮಾನ್ಯವಾಗಿ ಆಯಾ ರಾಜ್ಯಗಳ ರಾಜಕೀಯ ನಾಯಕತ್ವ ಒಂದು ನಿರ್ಧಾರ ತೆಗೆದುಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ದುರಾದೃಷ್ಟವೆಂದರೆ ನಮ್ಮ ಸಂವಿಧಾನದ ಪ್ರಕಾರ ಕೇಂದ್ರ ಹಾಗೂ ರಾಜ್ಯಗಳ ನಡುವಿನ ಸಂಬಂಧ ಬಹಳ ಸ್ಪಷ್ಟವಾಗಿ ವಿವರಿಸಲ್ಪಟ್ಟಿದ್ದರೂ ಇಂತಹ ಸೂಕ್ಷ್ಮ ವಿಚಾರಗಳು ಬಂದಾಗ, ಅದರಲ್ಲೂ ವಿಶೇಷವಾಗಿ ರಾಜ್ಯ ಮತ್ತು ಕೇಂದ್ರದಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳು ಅಧಿಕಾರದಲ್ಲಿದ್ದಾಗ, ಇಂತಹ ಸಮಸ್ಯೆಗಳಿಗೆ ಯಾವುದೇ ಸರಿಯಾದ ತೀರ್ಮಾನ ದೊರೆಯದೆ ಜನ ಸಾಮಾನ್ಯರು ಅತ್ಯಂತ ಹೆಚ್ಚಿನ ನೋವು ಅನುಭವಿಸಬೇಕಾಗುತ್ತದೆ.

ಕಾವೇರಿ ನದಿ ಕರ್ನಾಟಕದ ಮೂಲದಿಂದ ಉಗಮಿಸುವುದಾದರೂ ಅದು ಹರಿದು ಹೋದ ದಾರಿಯಲ್ಲಿ ನೆರೆ ರಾಜ್ಯವಾದ ತಮಿಳುನಾಡಿನ ಬಹಳಷ್ಟು ಪ್ರದೇಶದಲ್ಲಿ ವಾಸವಾಗಿರುವ ಜನರಿಗೆ ವ್ಯವಸಾಯ ಹಾಗೂ ಕುಡಿಯುವ ನೀರಿನ ಮೂಲವಾಗಿಯೂ ಇದೆ. ಅಷ್ಟೇ ಅಲ್ಲದೆ ಇತರ ಪ್ರದೇಶಗಳಾದ ಪುದುಚೇರಿ ಮತ್ತು ಕೇರಳಕ್ಕೂ ಕಾವೇರಿ ನೀರಿನಲ್ಲಿ ಪಾಲಿದೆ. ದೇಶ ಸ್ವಾತಂತ್ರ್ಯ ಪಡೆಯುವ ಮೊದಲು ಕರ್ನಾಟಕವಾಗಲಿ, ತಮಿಳುನಾಡಾಗಲಿ, ಕೇರಳ, ಪುದುಚೇರಿಗಳಾಗಲಿ ಇಂದಿನ ನಿರ್ದಿಷ್ಟವಾದ ಭೌಗೋಳಿಕ ಗಡಿಯೊಳಗೆ ಇರಲಿಲ್ಲ. ಸ್ವಾತಂತ್ರ್ಯದ ನಂತರ ಭಾಷಾವಾರು ರಾಜ್ಯಗಳ ಸ್ಥಾಪನೆಯಾದಾಗ ಕಾವೇರಿ ಈ ರಾಜ್ಯಗಳ ನಡುವೆ ಹರಿದು ಹಂಚಿ ಹೋದಳು. ಉದಾಹರಣೆಗೆ ದೇಶದ ಬಹುದೊಡ್ಡ ನದಿಯಾದ ಗಂಗಾ ನದಿ ಸುಮಾರು ಆರೇಳು ರಾಜ್ಯಗಳಲ್ಲಿ ಹರಿದು ತನ್ನ ಹಾದಿಯ ಇಕ್ಕೆಲಗಳಲ್ಲಿ ಬರುವ ನೆಲ ಮತ್ತು ಜನರಿಗೆ ನೀರುಣಿಸುತ್ತಿದ್ದಾಳೆ. ಅಷ್ಟೇ ಅಲ್ಲದೆ ಇಡೀ ದೇಶದ ಹಿಂದು ಜನಾಂಗಕ್ಕೆ ಗಂಗೆ ಪಾವನೆಯಾಗಿದ್ದಾಳೆ. ಇಲ್ಲಿ ದೇಶದ ಎಲ್ಲ ರಾಜ್ಯಗಳ ಜನರೂ ಬಂದು ತಮ್ಮ ಶ್ರದ್ಧೆಗನುಸಾರವಾಗಿ ಭಕ್ತಿಯಿಂದ ಪೂಜಿಸಿ ತಮ್ಮ ಪಿತೃಗಳಿಗೆ ಸಂತರ್ಪಣೆ ನೀಡುವ ಪದ್ಧತಿ ಇಂದಿಗೂ ರೂಢಿಯಲ್ಲಿದೆ. ಕಾವೇರಿಯನ್ನು ದಕ್ಷಿಣದ ಗಂಗೆ ಎಂದೂ ಕೂಡಾ ಕರೆಯುತ್ತೇವೆ. ಕರ್ನಾಟಕ ಮತ್ತು ತಮಿಳುನಾಡಿನ ಜನರಿಗೆ ಕಾವೇರಿ ಒಂದು ಜೀವನಾಡಿ. ಹೀಗಿರುವಾಗ ಈ ನದಿಯ ನೀರಿನ ಹಂಚಿಕೆಯ ವಿಚಾರದಲ್ಲಿ ತೆಗೆದುಕೊಳ್ಳುವ ಯಾವುದೇ ಒಂದು ತೀರ್ಮಾನ ಈ ಎರಡು ರಾಜ್ಯಗಳ ಜನಸಾಮಾನ್ಯರ ಅದರಲ್ಲೂ ಮುಖ್ಯವಾಗಿ ರೈತಾಪಿ ಜನರ ಹಿತಾಸಕ್ತಿಗಳನ್ನು ಕಾಪಾಡುವಂಥದ್ದಾಗಿರಬೇಕು.

ಎರಡೂ ರಾಜ್ಯದ ಯಾವುದೇ ಪಕ್ಷಕ್ಕೆ ಸೇರಿದ ರಾಜಕೀಯ ಮುಖಂಡರುಗಳೇ ಆಗಲಿ, ಬುದ್ಧಿಜೀವಿಗಳೇ ಆಗಲಿ ಅಥವಾ ನಮ್ಮ ನ್ಯಾಯಾಂಗ, ಶಾಸಕಾಂಗಗಳೇ ಆಗಲಿ ಎರಡು ರಾಜ್ಯಗಳ ಜನಸಾಮಾನ್ಯರ ಹಿತಾಸಕ್ತಿಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ತಮ್ಮ ತಮ್ಮ ಮೂಗಿನ ನೇರಕ್ಕೆ ಅಥವಾ ರಾಜಕೀಯ ಒತ್ತಡಕ್ಕೆ ಒಳಗಾಗಿ ತೀರ್ಮಾನ ಮಾಡಿದಾಗ ಎರಡೂ ರಾಜ್ಯಗಳ ಲಕ್ಷಾಂತರ ಮಂದಿ ರೈತರು ಮತ್ತು ಸಾಮಾನ್ಯ ಜನರು ಕಷ್ಟಕ್ಕೊಳಗಾಗಬೇಕಾಗುತ್ತದೆ. ಈಗ ಬಂದೊದಗಿರುವುದು ಅಂತದೇ ಒಂದು ಸ್ಥಿತಿ. ಕೇಂದ್ರದಲ್ಲಿ ಭಾರತೀಯ ಜನತಾ ಪಕ್ಷದ ರಾಜ್ಯಭಾರ, ಕರ್ನಾಟಕದಲ್ಲಿ ಕಾಂಗ್ರೆಸ್‌ನ ಆಡಳಿತ, ತಮಿಳುನಾಡಿನಲ್ಲಿ ಎ.ಐ.ಎ.ಡಿ.ಎಂ.ಕೆ. ಸರ್ಕಾರ ಹೀಗೆ ಮೂರು ವಿಭಿನ್ನ ಪಕ್ಷಗಳು ತಮ್ಮದೇ ಆದ ಹಿತಾಸಕ್ತಿಗಳನ್ನು ಹೊಂದಿದ್ದು ಒಂದು ನಿಷ್ಪಕ್ಷಪಾತವಾದ ತೀರ್ಮಾನ ಕೈಗೊಳ್ಳುವ ಸ್ಥಿತಿಯಲ್ಲಿಲ್ಲ. ದೆಹಲಿಯಲ್ಲಿರುವ ಸರ್ವೋಚ್ಚ ನ್ಯಾಯಾಲಯ ಎರಡೂ ರಾಜ್ಯಗಳ ಅಹವಾಲುಗಳನ್ನು ಆಲಿಸಿ ತೆಗೆದುಕೊಳ್ಳುವ ತೀರ್ಮಾನ ಕೂಡಾ ಈ ರಾಜಕೀಯ ಪಕ್ಷಗಳ ಸ್ವಾರ್ಥದಿಂದಾಗಿ ಎಲ್ಲರಿಗೂ ಒಪ್ಪಿಗೆಯಾಗುವಂತಿಲ್ಲ. ಜೊತೆಗೆ ಎರಡೂ ರಾಜ್ಯಗಳಲ್ಲಿನ ಮುಖ್ಯ ವಿರೋಧ ಪಕ್ಷಗಳು ಹಾಗೂ ನೂರಾರು ಸಣ್ಣಪುಟ್ಟ ರೈತ ಸಂಘಟನೆಗಳು, ರಾಜ್ಯ ಹಿತಾಸಕ್ತಿ ಸಂಘಟನೆಗಳು, ಅಸಾಮಾಜಿಕ ತತ್ವಗಳು, ಮೀಡಿಯಾ ಹಾಗೂ ಸೋಷಿಯಲ್ ಮೀಡಿಯಾಗಳು ಎಲ್ಲ ಸೇರಿ ಅತ್ಯಂತ ಅಗತ್ಯದ ಸಂಪನ್ಮೂಲಗಳಲ್ಲಿ ಒಂದಾದ ನದಿ ನೀರಿನಂತಹ ಒಂದು ಬಹು ಗಂಭೀರವಾದ ವಿಚಾರವನ್ನು ಇಂದು ಬಿಡಿಸಲಾಗದ ಕಗ್ಗಂಟನ್ನಾಗಿ ಮಾಡಿವೆ.

ಜಗತ್ತಿನಾದ್ಯಂತ ದಿನದಿಂದ ದಿನಕ್ಕೆ ಹೊಸ ಹೊಸ ಅವಿಷ್ಕಾರಗಳು ನಡೆಯುತ್ತಲೇ ಇವೆ. ತಂತ್ರಜ್ಞಾನ, ಜ್ಞಾನ, ವಿಜ್ಞಾನ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಸೋಷಿಯಲ್ ಮೀಡಿಯಾಗಳಲ್ಲಿ ಹಿಂದೆಂದೂ ಕಾಣದಂತಹ ಮಹತ್ವಪೂರ್ಣ ಮತ್ತು ಬಹುವೇಗಿ ಬದಲಾವಣೆಗಳು ನಡೆಯುತ್ತಿದ್ದಾಗ್ಯೂ, ಕಾವೇರಿ ನೀರಿನ ಹಂಚಿಕೆಯ ವಿಚಾರದಲ್ಲಿ ಯಾವುದೇ ಬದಲಾವಣೆ ಆದಂತೆ ಕಾಣುತ್ತಿಲ್ಲ. ಇಂದೂ ಕೂಡ ನಾವೆಲ್ಲರೂ ವೈಜ್ಞಾನಿಕವಾಗಿ ಯಾಕೆ ಯೋಚಿಸುತ್ತಿಲ್ಲ? ಈ ವಿಚಾರದಲ್ಲಿ ಹಿಂದಿನಿಂದ ನಡೆಯುತ್ತಲೇ ಬಂದಿರುವ ಹಲವಾರು ವಿಧಿವಿಧಾನಗಳನ್ನು ಕಿಂಚಿತ್ತೂ ಪ್ರಶ್ನಿಸದೆ ನಾವು ಕಣ್ಣುಮುಚ್ಚಿ ಪಾಲಿಸಿಕೊಂಡು ಹೋಗುತ್ತಿರುವುದು ಎಷ್ಟು ಸರಿ? ಈಗಾಗಲೇ ನಮ್ಮೆಲ್ಲರ ಅರಿವಿಗೆ ಬಂದಿರುವಂತೆ ದೇಶ ಅಥವಾ ರಾಜ್ಯಗಳ ರಾಜಕೀಯ ಮುಖಂಡರೇ ಆಗಲಿ, ಮಂತ್ರಿ ಮಹೋದಯರೇ ಆಗಲಿ, ಅಥವಾ ಸಾಹಿತಿಗಳೇ ಆಗಲಿ, ವಿಜ್ಞಾನಿಗಳೇ ಆಗಲಿ, ನ್ಯಾಯಮೂರ್ತಿಗಳೇ ಆಗಲಿ ಯಾರೊಬ್ಬರು ಇಂದು ಈ ಜಟಿಲ ಸಮಸ್ಯೆಗೆ ಒಂದು ಮೂಲಭೂತ ಪರಿಹಾರವನ್ನು ಸೂಚಿಸುವ ಸಾಮರ್ಥ್ಯವನ್ನಾಗಲಿ, ಧೈರ್ಯವನ್ನಾಗಲಿ ಅಥವಾ ಇಚ್ಛೆಯನ್ನಾಗಲಿ ಹೊಂದಿರುವಂತೆ ಕಾಣುವುದಿಲ್ಲ. ಹೀಗಿರುವಾಗ ಈ ಎಲ್ಲ ವರ್ಗದ ನಾಯಕರುಗಳನ್ನು ಬದಿಗಿಟ್ಟು, ಎರಡೂ ರಾಜ್ಯಗಳ, ಕಷ್ಟ ಅನುಭವಿಸುತ್ತಿರುವ, ಜನಸಾಮಾನ್ಯರು ಒಗ್ಗೂಡಿ ಮಾತುಕತೆಗಳನ್ನು ನಡೆಸಿ, ಕೂಲಂಕುಷವಾಗಿ ಚರ್ಚಿಸಿ ಎರಡೂ ರಾಜ್ಯದ ಜನತೆಗೆ ಅನ್ಯಾಯವಾಗದ ರೀತಿಯಲ್ಲಿ ಈ ಪ್ರಕೃತಿದತ್ತವಾದ ಕಾವೇರಿ ನದಿ ನೀರನ್ನು ಹಂಚಿಕೊಳ್ಳುವ ಒಂದು ಸಾಮಾನ್ಯ ವ್ಯವಸ್ಥೆಯನ್ನು, ಅಥವಾ ಒಪ್ಪಂದವನ್ನು ಮಾಡಿಕೊಳ್ಳುವುದು ಈಗ ಅನಿವಾರ್ಯವಾಗಿದೆ.

ಕರ್ನಾಟಕ-ತಮಿಳುನಾಡು ರಾಜ್ಯಗಳು ಭಾರತ-ಪಾಕಿಸ್ತಾನಗಳಲ್ಲ. ಈ ಎರಡೂ ರಾಜ್ಯಗಳು ಭಾರತ ದೇಶದ ಅವಿಭಾಜ್ಯ ಅಂಗವಾಗಿದ್ದು, ನಮ್ಮ ಸಂವಿಧಾನದ ಅಡಿಯಲ್ಲಿ ಸೇರಿಕೊಂಡಿವೆ. ಚೆನ್ನೈನಲ್ಲಿ ಇತ್ತೀಚೆಗೆ ಬಂದ ಭಾರೀ ಪ್ರವಾಹ, ಅತಿಯಾದ ನೀರಿನಿಂದಾಗಿ ಉಂಟಾದ ಕಷ್ಟ-ನಷ್ಟಗಳು, ಅದೇ ರೀತಿ ಬೆಂಗಳೂರಿನಲ್ಲಿ ಮೊನ್ನೆಮೊನ್ನೆಯಷ್ಟೆ ನಗರಾದ್ಯಂತ ನೀರು ನುಗ್ಗಿ ಬಂದದ್ದು ಹಾಗೂ ವಿಶ್ವದಾದ್ಯಂತ ಕೇಳಿ ಬರುತ್ತಿರುವ ಜಾಗತಿಕ ಹವಾಮಾನದಲ್ಲಿ ಉಂಟಾಗಿರುವ ಏರುಪೇರುಗಳ ಕೂಗು ಹೀಗೆ ಪ್ರಕೃತಿಯ ವಿಕೋಪಕ್ಕೆ ಒಂದಿಲ್ಲ ಒಂದು ರೀತಿಯಲ್ಲಿ ಇಡೀ ವಿಶ್ವವೇ ಇಂದು ಬಲಿಯಾಗುತ್ತಿರುವಂತಹ ಸಂದರ್ಭದಲ್ಲಿ ಈ ಎರಡೂ ರಾಜ್ಯಗಳ ನಡುವಿನ ಈ ಶತಮಾನಗಳ ಹಿಂದಿನ ಒಂದು ನದಿ ನೀರಿನ ಹಂಚಿಕೆಯ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಾಗದ ನಾವು ಯಾವ ಬುದ್ಧಿವಂತರು.

ಇಂದು ಕರ್ನಾಟಕವೇ ಆಗಲಿ ಅಥವಾ ತಮಿಳುನಾಡೇ ಆಗಲಿ ಪರಸ್ಪರರ ಸಹಾಯ, ಸಹಕಾರ ಇಲ್ಲದೆ ಬದುಕುವುದು ಅಸಾಧ್ಯ. ಬೆಂಗಳೂರಿನ ಒಟ್ಟು ಜನ ಸಂಖ್ಯೆಯಲ್ಲಿ ನೆರೆಯ ರಾಜ್ಯ ತಮಿಳುನಾಡಿನ ಸುಮಾರು 40 ಪ್ರತಿಶತ ಜನ ವಾಸಿಸುತ್ತಿದ್ದರೆ, ಕರ್ನಾಟಕದ ಲಕ್ಷಾಂತರ ಮಂದಿ ತಮಿಳುನಾಡಿನಲ್ಲಿ ವಾಸವಾಗಿದ್ದಾರೆ. ಎರಡೂ ರಾಜ್ಯಗಳಲ್ಲಿ ಇವರುಗಳು ಬಹುದೊಡ್ಡ ವ್ಯಾಪಾರ-ವ್ಯವಹಾರ ಮತ್ತು ವೈಹಿವಾಟುಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಎರಡೂ ರಾಜ್ಯಗಳಲ್ಲಿ ಎಲ್ಲಿಯೂ ಕೂಡಾ ಯಾವುದೇ ರೀತಿಯ ಹಾನಿಯಾದಲ್ಲಿ, ಎರಡೂ ರಾಜ್ಯದ ಜನತೆಗೆ ನಷ್ಟವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಹೀಗಿರುವಾಗ ಪ್ರತ್ಯೇಕ ದೇಶದ ಕೂಗಾಗಲಿ, ಪರಸ್ಪರರನ್ನು ಹೊಡೆಯುವ-ಬಡಿಯುವ ಕುಚೇಷ್ಟೆಗಳಾಗಲಿ, ಯಾವುದೇ ರಾಜ್ಯದ ಜನತೆಯ ಹಿತದೃಷ್ಟಿಯಿಂದಂತೂ ಅಲ್ಲವೇ ಅಲ್ಲ, ದೇಶದ ಒಟ್ಟಾರೆ ಶಾಂತಿ ಮತ್ತು ಸುರಕ್ಷತೆಯ ದೃಷ್ಟಿಯಿಂದ

ಕೂಡಾ ಈ ಎರಡೂ ರಾಜ್ಯಗಳಲ್ಲಿ ಶಾಂತಿ ನೆಮ್ಮದಿ ಕಾಪಾಡುವುದು ಅಷ್ಟೇ ಮುಖ್ಯವಾಗಿರುತ್ತದೆ. ಏಕೆಂದರೆ ಈಗಾಗಲೇ ಜಮ್ಮು-ಕಾಶ್ಮೀರದಲ್ಲಿ ನಡೆಯುತ್ತಿರುವ ಘಟನೆಗಳು ದೇಶವನ್ನು ಅತ್ಯಂತ ಕಠಿಣ ಪರಿಸ್ಥಿತಿಗೆ ಒಡ್ಡಿರುವುದು ನಮ್ಮ ಮುಂದೆ ನಡೆದಿರುವಾಗ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ಪರಸ್ಪರ ಹೊಡೆದಾಡಿಕೊಂಡು ಇನ್ನೊಂದು ಸಮಸ್ಯೆಯನ್ನು ದೇಶದ ಮುಂದೊಡ್ಡುವುದು ನಮ್ಮ ದೇಶದ ಸ್ವಾತಂತ್ರ್ಯ ಮತ್ತು ಅಖಂಡತೆಯ ದೃಷ್ಟಿಯಿಂದ ಖಂಡಿತವಾಗಿಯೂ ಯೋಚನೆಗೆ ದೂರವಾದ ವಿಚಾರ. ಹಾಗಾಗಿ ಎಲ್ಲಾ ರಾಜಕೀಯ ಪಕ್ಷಗಳನ್ನು, ಮುಖಂಡರನ್ನು ಹಾಗೂ ಈ ಸಮಸ್ಯೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಸಂಬಂಧವೇ ಇಲ್ಲದ ವ್ಯಕ್ತಿಗಳನ್ನು ಮುಂದಿಟ್ಟುಕೊಂಡು ಈ ಸಮಸ್ಯೆಗೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳುತ್ತೇವೆ ಎಂದು ಮೈ ಪರಚಿಕೊಳ್ಳುವ ಒದ್ದಾಟವನ್ನು ಬದಿಗಿಟ್ಟು ಈ ನೀರಿನ ಸಮಸ್ಯೆಯಿಂದ ನಿಜವಾಗಿ ತೊಂದರೆಗೀಡಾಗಿರುವ ಎರಡೂ ರಾಜ್ಯಗಳ ಜನಸಾಮಾನ್ಯರು ಮತ್ತು ರೈತಾಪಿ ಜನರನ್ನು ಒಗ್ಗೂಡಿಸಿ ಸಮಸ್ಯೆಯ ಮೂಲಭೂತ ಕಾರಣಗಳನ್ನು ಮತ್ತು ಹಿಂದಿನಿಂದ ಇಂದಿನವರೆಗೆ ನಡೆದು ಬಂದ ದಾರಿಯನ್ನು ಪರಿಶೀಲಿಸಿ, (ಚಾರಿತ್ರಿಕ ಹಿನ್ನಲೆ) ನಿಜಸ್ಥಿತಿಯನ್ನು ಎಳೆಎಳೆಯಾಗಿ ಬಿಡಿಸಿ, ವಿವರವಾಗಿ ಚರ್ಚಿಸಿ, ಪುನರ್‌ವಿಮರ್ಶಿಸಿ ಒಂದು ಪ್ರಾಮಾಣಿಕವಾದ ಮತ್ತು ಪರಿಣಾಮಕಾರಿಯಾದ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕಾದ ಅನಿವಾರ್ಯ ಈಗ ಬಂದೊದಗಿದೆ. ಈ ನಿಟ್ಟಿನಲ್ಲಿ ಎರಡೂ ರಾಜ್ಯದ ಸಾಮಾಜಿಕ ಮುಖಂಡರುಗಳು ಮುಂದೆ ಬಂದು, ರಾಜಕೀಯವನ್ನು ಹಿಂದಿಟ್ಟು, ಸಮಕಾಲೀನ ಸತ್ಯಾಂಶಗಳ ಆಧಾರದ ಮೇಲೆ ಒಂದು ಸರ್ವಸಮ್ಮತವಾದ ಹಾಗೂ ನ್ಯಾಯಬದ್ಧವಾದ ತೀರ್ಮಾನಕ್ಕೆ ನಾಂದಿ ಹಾಡಬೇಕಾಗಿದೆ. ಅ

***ಸಖಾರಾಮ ಉಪ್ಪೂರು***

# ಸಾಮಾಜಿಕ ನೆಲೆಯ ಶರಣ ಸಾಹಿತ್ಯ

## ಕರ್ನಾಟಕದಲ್ಲಿ ಮೈದಳೆದ ವಿಚಾರ ಕ್ರಾಂತಿ ಯೋಚನಾಲಹರಿ ಪ್ರಬೇಧ



ಹಲವು ಶತಮಾನಗಳಿಂದ ಇತ್ತೀಚಿನವರೆಗೆ ಪುರಾಣ, ಕಾವ್ಯ, ದಂತ ಕಥೆಗಳನ್ನೊಳಗೊಂಡು ಎಲ್ಲಾ ಕಾಲ್ಪನಿಕ ಕಪೋಲ ಕಲ್ಪಿತ ಅಸಂಗತ ಸತ್ಯಗಳು ಬಹಳಷ್ಟು ಮಟ್ಟಿಗೆ ಎಲ್ಲಾ ಜನಾಂಗಕ್ಕೂ ಮಾರ್ಗದರ್ಶಕವೆನಿಸುತ್ತಿದ್ದವು. ಹಾಗೆಯೇ ಅವುಗಳು ಹಾಕಿಕೊಟ್ಟ ದಿವ್ಯದರ್ಶನಗಳು ದಿಗ್ದರ್ಶನಗಳಾಗಿ ಮಾರ್ಪಡುತ್ತಾ, ಆಳಲನುವಾದವು.

ತದನಂತರದಲ್ಲಿ ಕೆಲವು ಸ್ವಾರ್ಥ ಪ್ರಲೋಭಿಗಳು ಪರಿಸ್ಥಿತಿಯ ಲಾಭ ಪಡೆದ ಕೆಲ ವರ್ಗಗಳಿಂದ ವರ್ಗ ವರ್ಣಬೇಧಗಳನ್ನು ಸೃಷ್ಟಿಸಿದರು. ಮಾನವ ಮತ್ತು ಮಾನವತೆಯ ಸಂಬಂಧಗಳಲ್ಲಿ ಕಂದಕವೇರ್ಪಟ್ಟು, ಶಾಂತಿ ಸೌಹಾರ್ದ ಕದಡಿತ್ತು; ಆಧಾರರಹಿತ ಆಚರಣೆಗಳು, ವಿಚಾರರಹಿತ ಕರ್ಮ ಸಿದ್ಧಾಂತಗಳು, ಅಮಾನವೀಯ ಪದ್ಧತಿಗಳು ಜನ್ಮ ತಳೆದವು. ಆದರೆ ನಿಜ ಸಿದ್ಧಾಂತಗಳು ಕೇವಲಾಗಿ ದಿಕ್ಕೆಟ್ಟ ಹಾದಿಯಲಿ ನಾವಿಕನಿಲ್ಲದ ನಾವೆಯಂತೆ ಚಲಿಸತೊಡಗಿದವು. ನಿಜ ಕಲಿಕೆ, ನೈಜ ಗಳಿಕೆ, ಪ್ರಾಮಾಣಿಕ ಜೀವಿಸುವಿಕೆ, ಹಂಚಿ ಉಣ್ಣುವಿಕೆ, ನಿತ್ಯ ಸತ್ಯ ಬೆಳವಣಿಗೆ ಎಲ್ಲವೂ ಈ ಅಘೋಷಿತ, ಆಧಾರ ರಹಿತ ವಿಚಾರಗಳಲ್ಲಿ ಕಮರಿದವು; ಕನಗಿದವು. ಮನ-ಮನಗಳ ಮಧ್ಯೆ ಅನರ್ಥಗಳು ಹೆಚ್ಚಿ ದೆವ್ವ ದೇವರುಗಳು ಆವಿಷ್ಕಾರಗೊಳ್ಳ ತೊಡಗಿದವು. ಹಾಗೆ ಪ್ರಾರಂಭವಾಗಿ ಅಸಹಜತೆ, ಅಸಮಾನತೆ, ಅನಾಚಾರ, ಅನೀತಿ ಮತ್ತು ಅಪ್ರಬುದ್ಧತೆ ತಾಂಡವಾಡ ತೊಡಗಿದವು.

ಅಸಮಾನತೆಯೆಂಬುದು ಕೇವಲ ಸಮಾಜದಲ್ಲದೆ, ಸ್ತ್ರೀ-ಪುರುಷರ ಲಿಂಗಭೇಧವೆಂಬ ಕೀಳು ಪದ್ಧತಿ ಬೇರೂರಿಬಿಟ್ಟಿತು. ಆಲೋಚಿಸುವ ಮನಗಳು ಕ್ಷೀಣಿಸಿ, ದುಡಿಯುವ ಕೈಗಳು ಕ್ಷಯಿಸಿ, ಅಷ್ಟಮದಗಳು ಮೇಳೈಸಿ, ಕ್ರಮೇಣ ಸಮಾಜ ಉಳ್ಳವರ ಉಪಟಳದಲ್ಲಿ ಉಯಿಲಾಡತೊಡಗಿತು. ನೈಸರ್ಗಿಕವಾಗಿ ಸಂಪದ್ಭರಿತ ಭರತಖಂಡ, ವ್ಯಕ್ತಿಗತ ಕ್ಷೋಭೆಗೊಳಗಾಗಿ, ದಿಕ್ಕು ದೆಸೆ ಕಾಣದೆ ಸೂತ್ರ ಹರಿದ (ಗಾಳಿ) ಪಟ ದಂತಾಗಿತ್ತು. ಇಂತಹ ಅನೇಕ ಸಮಯಗಳಲ್ಲಿ ಸಮಾಜದ ಸುಧಾರಣೆಗೆ, ಉನ್ನತಿಗೆ ಅನೇಕಾನೇಕ ದಾರ್ಶನಿಕರು, ಸಾಧು, ಸಂತ, ಋಷಿ, ಮುನಿಶ್ರೇಷ್ಠರು ದಾಸವರೇಣ್ಯರು ಜನ್ಮತಳೆದು, ವಿವಿಧ ಸಿದ್ಧಾಂತಗಳ ಮೂಲಕ ಶ್ರಮಿಸಿದರು.

ತಾವು ಸಾಧಿಸಿದ ಸಾಧನೆಗಳನ್ನು ಕಂಡುಕೊಂಡ ಸತ್ಯಗಳನ್ನು ಪುರಾಣ ಪುಣ್ಯಕಥೆಗಳ ಮೂಲಕ ವೇದ ಆಗಮ ಉಪನಿಷತ್ತು ಇತ್ಯಾದಿಗಳಲ್ಲಿ ಕಂಡು ಬಂದ ಅರ್ಥವಾಗದ ಉತ್ತಮ ಅಂಶಗಳನ್ನು ಸರಳೀಕರಿಸಿ ಬೋಧಿಸಿದರು; ಹೀಗೆ ಸಾಗಿದ ಭೋಧನಾ ಪ್ರಕಾರದ ಚಿಂತನೆಗಳು ಬಹುಮಟ್ಟಿನ ಬದಲಾವಣೆ ತಂದರೂ, ಅವುಗಳ ಪರಿಣಾಮ ದೂರಗಾಮಿಯಾಗಿರುತ್ತಿರಲಿಲ್ಲ. ಎಲ್ಲಾ ಸ್ತರದ ಸಮಾಜಕ್ಕೆ ತಲುಪುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಸರಿಸುಮಾರು ಹನ್ನೆರಡನೇ ಶತಮಾನದ ಪೂರ್ವೋತ್ತರ, ಒಂದು ವಿಚಾರ ಕ್ರಾಂತಿ ಯೋಚನಾಲಹರಿ ಪ್ರಬೇಧ ಕರ್ನಾಟಕದಲ್ಲಿ ಮೈದಳೆಯಿತು. ಅದುವೇ 'ವಚನ ಸಾಹಿತ್ಯ' ಅಥವಾ 'ಶರಣ ಸಾಹಿತ್ಯ'.

ಶರಣ ಶ್ರೇಷ್ಠ ಬಸವೇಶ್ವರರ ನೇತೃತ್ವದಲ್ಲಿ ನೂರಾರು ಶರಣರು ಕೂಡಿಕೊಂಡು, ಸಾಹಿತ್ಯದ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿವರೆಗೂ ಕೊಂಡೊಯ್ದು ವಿಚಾರ ಕ್ರಾಂತಿ ವಚನ ಸಾಹಿತ್ಯ; ಇದರ ಮೂಲ ಉದ್ದೇಶ ತನ್ನ ತಾ ಅರಿದು, ತನ್ನರಿವನ್ನೇ ತನಗೆ ಗುರುವಾಗಿಸಿ, ಮಾನವ ಸಹಜವಾದ ಕ್ರಿಯಾ ಕಾರ್ಯಗಳ ಸರಿದಾರಿಯಲ್ಲಿ, ಉತ್ತಮ ಜ್ಞಾನದಲ್ಲಿ ನಡೆದು, ಉತ್ತಮ ರೀತಿಯಲಿ ಗಳಿಸಿ, ಪ್ರಾಮಾಣಿಕವಾಗಿ ಜೀವಿಸಿ, ಇತರ ಎಲ್ಲಾ ಸಕಲ ಜೀವರಾಶಿಗಳನ್ನು ಜೀವಿಸಲು ಅನುವು ಮಾಡಿಕೊಡುವುದು. ಸ್ವಇಷ್ಟೆಯ ಚಿಂತನೆಯಲ್ಲಿ ಸಮಷ್ಠಿಹಿತ ಚಿಂತನೆ ಸಮೀಕರಿಸಿ ವಿವೇಕಯುಕ್ತ ಸಮಾನತೆಯ ಜ್ಞಾನಾಧಾರಿತ ಸಂತೃಪ್ತ ಜೀವನ ನಡೆಸುವುದು.

ಇದಕ್ಕಾಗಿ ಸಹಜವಾದ ಅವಶ್ಯಕವಾದ ಸ್ವಸಂವಿಧಾನಾತ್ಮಕ ಕಟ್ಟಲೆಗಳನ್ನು ಸಹಜ ರೀತಿಯಲಿ ಆವಿಷ್ಕರಿಸಿದರು; ತ್ರಿಕರಣ ಶುದ್ಧಿ, ತ್ರಿವಿಧ ಮಲತ್ರ್ಯಾಜ್ಯಗೊಳಿಸಲು ತ್ರಿವಿಧ ವಿಚಾರಧಾರೆಗಳನ್ನು ಜನರಾಡುವ ಭಾಷೆಯಲಿ, ಜನಮನಕರ್ಥವಾಗುವ ರೀತಿಯಲಿ, ಜನರಿಂದಲೇ ಅಭಿವೃದ್ಧಿಪಡಿಸಿದರು. ಪರಿಪೂರ್ಣ ವ್ಯಕ್ತಿತ್ವ, ತನ್ಮೂಲಕ ಸಮೃದ್ಧ ಸಮಾಜ ನಿರ್ಮಾಣಗೊಳಿಸಲು ವಿಶೇಷವಾದ ಮಾರ್ಗಗಳನ್ನು ವಿಚಾರಕ್ರಾಂತಿ ಮೂಲಕ ಸೃಷ್ಟಿಸಿದರು. ಅದುವೆ (ಅ) ಕಾಯಕ (ಆ) ದಾಸೋಹ (ಇ) ಜಂಗಮ ಮತ್ತು (ಈ) ಅನುಭಾವ;

**ಕಾಯಕ :** ಸ್ವಕಾಯ ಶಕ್ತಿ ವ್ಯಯಿಸಿ, ಪರಕಾಯ ಪೀಡನೆರಹಿತ, ಯಾವುದೇ ಸರಿ ಕೆಲಸವನ್ನು ನೀಚ / ಉತ್ತಮವೆನ್ನದೆ, ಪ್ರಾಮಾಣಿಕ ಮಾರ್ಗದಲ್ಲಿ ಮನಃಪೂರ್ವಕ ಸಾಕ್ಷಾತ್ಕರಿಸಗೊಳಿಸುವುದೇ 'ಕಾಯಕ' ಈ ಮೂಲಕ ಕಾಯಕದಿಂದ ಬಂದ ಪರಿಣಾಮ ಉತ್ತಮವೇ ಆಗಿರುತ್ತದೆ.

**ದಾಸೋಹ :** ಗಳಿಸಿದ ಉತ್ತಮ ಪರಿಣಾಮವನ್ನು ತಾವುಂಡು ವಿಣೀತಭಾವದಿಂದ ಸಮಾಜದ ಉನ್ನತಿಗೆ ವ್ಯಯಿಸುವುದು; ಅದು ಭೌತಿಕ ವಸ್ತು ಧಾನ್ಯ ವಿತರಣೆಯಾಗಿರದೆ; ಸುಜ್ಞಾನ ವಿತರಣೆ ಅಥವಾ 'ಜ್ಞಾನದಾಸೋಹ'

**ಜಂಗಮ :** ಚಲನಶೀಲತೆ, ಉನ್ನತೋನ್ನತಿ ವಿಚಾರಧಾರೆಗಳು, ಉತ್ಕೃಷ್ಟ ಚಿಂತನೆಗಳು ಜ್ಞಾನ ದೀವಿಗೆಗಳನ್ನು ಮನದಿಂದ ಮನಕ್ಕೆ ಪ್ರಸರಿಸುವ ಒಂದು ಪ್ರಭೇಧ.

**ಅನುಭಾವ :** ಉತ್ತಮೋತ್ತಮ ಅನುಭವಿಕ ವಿಚಾರಧಾರೆಗಳನ್ನು ಸರಿ ಮಾರ್ಗದಲಿ ಸಂಪನ್ನಕರಿಸಿ, ಹಂಚಿಕೊಂಡು ಆಚರಿಸಲ್ಪಡುವುದು ಹಾಗೂ ವಿನಿಮಯ ಮಾಡಿಕೊಳ್ಳುವುದು ಅನುಭಾವವೆನಿಸಿದೆ.

ಒಟ್ಟಾರೆ ಒಂದು ಶಿಷ್ಠ ನಿಷ್ಠ ವಿಶಿಷ್ಠರೂಪವಾದ ವಿಚಾರ ಸಾಹಿತ್ಯ ಪ್ರಭೇಧ ಜನಮಗಳಿಂದ ಅನುಭವ ರೂಪದಲ್ಲಿ ರೂಪುಗೊಂಡಿತು.

ಅದುವೇ 'ವಚನ' ಭೋಧನಾ ಸಾಹಿತ್ಯವನ್ನು ಆಚರಣಾ ಸಾಹಿತ್ಯವಾಗಿ, ಕೆಲಸವನ್ನು ಕಾಯಕವಾಗಿ ನೀತಿಯನ್ನು ನಡತೆಯನ್ನಾಗಿ, ಜಿಜ್ಞಾನವನ್ನು ದಾಸೋಹವಾಗಿ, ಭವವನ್ನು ಅನುಭಾವವಾಗಿ, ಚಿಂತನೆಯನ್ನು ಚಲನಶೀಲವಾಗಿ ಸರಳೀಕರಣಗೊಳಿಸುವ ಬದುಕಿನ ಸಾಹಿತ್ಯ. ಇದರ ಫಲವಾಗಿ ಜಗತ್ತಿನ ಪ್ರಪ್ರಥಮ ಸಾಮಾನ್ಯ ಜನ ಸಭೆ ಅಥವಾ ಸಂಸತ್ತು ಕಲ್ಯಾಣ ರಾಜ್ಯದಲ್ಲಿ ಮೈದಳೆಯಿತು.

ಅದುವೇ 'ಅನುಭವ ಮಂಟಪ' ವರ್ಗ, ವರ್ಣ, ಲಿಂಗಭೇದ ರಹಿತ, ವಯೋಭೇಧವಿಲ್ಲದೆ, ಸ್ವಾನುಭಾವ ಸುವಿಚಾರ ಚಿಂತನ-ಮಂಥನ ಚಾವಡಿ; ಇದರ ಮೂಲಕ ಸಮಾನತೆಯನ್ನು ಸಾಧಿಸಿ ಮನ ಮನಗಳನ್ನು ಬೆಸೆದರು. ಸರಿದಾಯಲ್ಲಿ ಕಲಿತು, ಸರಿಮಾರ್ಗದಲಿ ಕಲೆತು, ಪ್ರಾಮಾಣಿಕವಾಗಿ ಗಳಿಸಿ ಉತ್ತಮವಾಗಿ ಜೀವಿಸಿ, ಹಂಚುಂಡು ಬಾಳುವ, ಬೆಳಗುವ, ಅಭಿವೃದ್ಧಿ ಹೊಂದು ಜೀವನ ಮಾರ್ಗೋಪಾಯ ಸಾಹಿತ್ಯ 'ವಚನ ಸಾಹಿತ್ಯ'.

ಅಂಗ-ಲಿಂಗ-ಜಂಗಮ ಅರ್ಥಾತ್ ದೇಹ-ವ್ಯಕ್ತಿತ್ವ-ಶೀಲತ್ವಗಳ ತ್ರಿವಿಧ ಸೂತ್ರಗಳನ್ನು ಸರಳೀಕರಿಸಿ ಸಮೀಕರಿಸಿದ ವಚನಸಾಹಿತ್ಯ; ಜಾತಿಯನ್ನು ಧರ್ಮವಾಗಿಸದೇ, ಉದ್ಯೋಗವನ್ನೇ ಧರ್ಮವಾಗಿಸಿತು. ತನ್ನ ತಾನರಿದು, ಪರಿಪೂರ್ಣದೆಡೆಗೆ ಸಾಗಿಸುವುದು ಜಂಗಮತ್ತು 'ಇಲ್ಲಿ ಬಹುಶಃ ಕೆಲವು ವಿಚಾರಧಾರೆಗಳು, ವ್ಯಕ್ತಿಗತವಾಗಿ ಬರುವ ಅನೇಕ ಅನರ್ಥಗಳಿಗೆ ಸುಲಭ ಸರಳೀಕೃತ ರೀತಿಯಿಂದ ತನಗೆ ತನ್ನಲ್ಲೇ ಪ್ರಶ್ನೆ ಹಾಕಿ ಅಲ್ಲಲ್ಲೇ ಉತ್ತರವೀಯುತ್ತದೆ; ಆಚಾರಯುಕ್ತವಾಗಿದೆ. ಅ

***ಕಲಾ ಮಂಜುನಾಥ್***

# ಎತ್ತಿನಹೊಳೆ ಯೋಜನೆ ಅವೈಜ್ಞಾನಿಕ

## ದೆಹಲಿಯಲ್ಲಿ ನಡೆದ ಉಪನ್ಯಾಸದಲ್ಲಿ ಪರಿಸರವಾದಿ ಕೆ.ಎನ್. ಸೋಮಶೇಖರ್ ವಿವರಣೆ




ಕೋಲಾರ, ದೊಡ್ಡ ಬಳ್ಳಾಪುರ, ಬೆಂಗಳೂರು ಗ್ರಾಮೀಣ, ತುಮಕೂರು ಮತ್ತು ರಾಮನಗರ ಜಿಲ್ಲೆಗಳಿಗೆ ಸುಮಾರು 12912 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಸಕಲೇಶಪುರದ ಬಳಿಯ ಎತ್ತಿನಹೊಳೆಯಿಂದ 24 ಟಿಎಂಸಿ ನೀರನ್ನು ಉಕ್ಕಿನ ಕೊಳವೆಗಳ ಮತ್ತು ನಾಲೆಗಳ ಮೂಲಕ ಹರಿಸುವ ಕರ್ನಾಟಕ ನೀರಾವರಿ ನಿಗಮದ ಯೋಜನೆಯು ಅವೈಜ್ಞಾನಿಕ ಎಂದು ಮೈಸೂರಿನ ಸಮಾಜ ಸೇವಕ ಮತ್ತು ಪರಿಸರವಾದಿ ಶ್ರೀ ಕೆ.ಎನ್. ಸೋಮಶೇಖರ್ ಅವರು ವಿವರಿಸಿದರು.

ಅವರು ಎತ್ತಿನಹೊಳೆ ನದಿ ತಿರುವು ಯೋಜನೆಯ ಕುರಿತು ದೆಹಲಿ ತುಳುಸಿರಿಯ ಆಶ್ರಯದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಸೆಪ್ಟಂಬರ್ 24ರಂದು ನಡೆದ ಉಪನ್ಯಾಸವೊಂದರಲ್ಲಿ ಮಾತಾಡುತ್ತಾ ಈ ವಿಷಯವನ್ನು ವಿವರಿಸಿದರು. ಎತ್ತಿನಹೊಳೆ ಯೋಜನೆಯ ಕುರಿತು ಕರ್ನಾಟಕ ನೀರಾವರಿ ನಿಗಮದಿಂದ ಯಾವುದೇ ಸ್ಪಷ್ಟ ವಿವರಗಳು ದೊರೆಯುತ್ತಿಲ್ಲ. ಯೋಜನೆಯು ಹೇಗೆ ಕೆಲಸ ಮಾಡುತ್ತದೆ ಮತ್ತು ಇದರ ತಾಂತ್ರಿಕ ವಿವರಗಳೇನು ಎಂಬುದರ ಕುರಿತು ನಿಗಮವಾಗಲೀ, ಯೋಜನೆಗೆ ಸಲಹೆ ನೀಡುತ್ತಿರುವ ಖಾಸಗೀ ಕಂಪನಿಯಾಗಲೀ ಯಾವುದೇ ಮಾಹಿತಿಯನ್ನು ನೀಡದಿರುವುದರಿಂದ ತಾನು ಕೋರ್ಟಿನ ಮೆಟ್ಟಲೇರಿ ಕಾನೂನು ಸಮರ ನಡೆಸುವಂತಾಗಿದೆ ಎಂದು ಅವರು ಹೇಳಿದರು.

"ಎತ್ತಿನಹೊಳೆ ಯೋಜನೆ ತೀರಾ ಅವೈಜ್ಞಾನಿಕ. ಬರದ ಪ್ರದೇಶಗಳ ಜನರಿಗೆ ನೀರು ಕೊಡುತ್ತೇವೆ ಎಂದು ಮೋಸ ಮಾಡುತ್ತಿದ್ದಾರೆ. ಜೀವಜಲವನ್ನು ನಂಬಿಸಿ ಮೋಸ ಮಾಡುವುದು ಘೋರ ಅಪರಾಧ" ಎಂದು ಶ್ರೀ ಸೋಮಶೇಖರ್ ಅವರು ಹೇಳಿದರು. "ಒಂದು ಸಾರಿ 10 ಟಿಎಂಸಿ ಮತ್ತೊಂದು ಸಾರಿ 24 ಟಿಎಂಸಿ ಅಂತಾರೆ. ಪ್ರಾಜೆಕ್ಟ್ ಇಷ್ಟು ಸಾವಿರ ಕೋಟಿ ಅಂತಾರೆ. ಇದು ಹೇಗೆ ಕೆಲಸ ಮಾಡುತ್ತದೆ. ಇಷ್ಟು ಬೃಹತ್ ಪ್ರಮಾಣದ ನೀರನ್ನು ಹೇಗೆ ಮೇಲೆ ಎತ್ತಿ ಕೋಲಾರ, ಚಿಕ್ಕಬಳ್ಳಾಪುರ ಮೊದಲಾದೆಡೆ ಬರಪೀಡಿತ ಪ್ರದೇಶಗಳಿಗೆ ಸಾಗಿಸುತ್ತಾರೆ ಎಂಬುದೇ ತಿಳಿದಿಲ್ಲ" ಎಂದರು. "ಸಮಗ್ರ ಕರ್ನಾಟಕದಲ್ಲಿ ಸಾಧಾರಣ 3450 ಟಿಎಂಸಿ ಮಳೆಯ ಪ್ರಮಾಣವಿದೆ. ಅದರಲ್ಲಿ 2000 ಟಿಎಂಸಿಗಿಂತ ಹೆಚ್ಚು ನೀರು ಪಶ್ಚಿಮಘಟ್ಟದಲ್ಲಿದೆ. 1500 ಟಿಎಂಸಿ ನೀರು ಇತರ ಕಡೆಗಳಲ್ಲಿ ಮಳೆಬೀಳುವುದರಿಂದ ಸಿಗುತ್ತದೆ. ಪಶ್ಚಿಮಘಟ್ಟದ ಪರ್ವತ ಶ್ರೇಣಿಗಳಲ್ಲಿ ಹರಿದು ಬರುವ ನೀರು ಬಹಳಷ್ಟು ರಭಸದಿಂದ ಇರುತ್ತದೆ. ಆ ರಭಸ ಯಾವ ಮಟ್ಟದಲ್ಲಿ ಇರುತ್ತದೆ ಎಂದರೆ ವಜ್ರವನ್ನೂ ತುಂಡರಿಸಬಹುದು. ಅಂತಹ ರಭಸಕ್ಕೆ ಹರಿದು ಬರುವ ನೀರನ್ನು ತಡೆಗೋಡೆಗಳನ್ನು ನಿರ್ಮಿಸಿ ಅದರಿಂದ ನೀರನ್ನು ಎತ್ತಿ ಬಿಡುತ್ತೇವೆ ಎನ್ನುತಾರೆ. ನೀರನ್ನು ಮೇಲೆತ್ತುವ ಯೋಜನೆಗಳನ್ನು ನೋಡಿದ್ದೇವೆ. ಆದರೆ 24 ಟಿಎಂಸಿ ನೀರನ್ನು ಎಲ್ಲಿಂದ ಹೇಗೆ ಎತ್ತುವುದು ಇದಕ್ಕೆ ಒಂದು ಮಾದರಿ ಅಧ್ಯಯನ ಆಗಬೇಕಾಗಿದೆ. 250 ಕಿ.ಮೀ. ಪೈಪ್ ಅಳವಡಿಸಿದರೂ ನೀರು ಹೇಗೆ ಎತ್ತುತ್ತೀರಿ ಎನ್ನುವ ಬಗ್ಗೆ ವಿವರವಿಲ್ಲ" ಎಂದು ಶ್ರೀ ಸೋಮಶೇಖರ್ ಅವರು ನುಡಿದರು.

"ಮಳೆಗಾಲವಿರುವುದು ಮೂರು ಅಥವಾ ನಾಲ್ಕು ತಿಂಗಳಷ್ಟೇ. ಈ ಮೂರು ತಿಂಗಳಲ್ಲಿ ಅಂದರೆ ತೊಂಭತ್ತು ದಿನಗಳಲ್ಲಿ ಮಳೆ ಬೀಳುವ ಸಮಯ ಎಷ್ಟು? ಎಲ್ಲಾ ತೊಂಭತ್ತು ದಿನಗಳಲ್ಲಿ ಸುರಿದ ನೀರನ್ನು ಒಮ್ಮೆಲೇ ಹೇಗೆ ಎತ್ತಲಾಗುವುದು? ನೀರನ್ನು ಎತ್ತಲು ವಿದ್ಯುಚ್ಛಕ್ತಿ ಎಲ್ಲಿಂದ ಬರುತ್ತದೆ? 24 ಟಿಎಂಸಿ ನೀರನ್ನು ಎತ್ತಲು ಎಷ್ಟು ವಿದ್ಯುತ್ ಬೇಕಾಗಬಹುದು ಎಂದು ಇನ್ನೂ ನಿರ್ಧರಿಸಿಲ್ಲ. ಶಾಸಕಾಂಗವನ್ನು ಕೇಳಿದ್ದೇನೆ, ಅಧಿಕಾರಿಗಳನ್ನು ಕೇಳಿದ್ದೇನೆ ಉತ್ತರ ಸಿಗಲಿಲ್ಲ. ದಕ್ಷಿಣ ಕನ್ನಡದಲ್ಲಿಯೂ ಜನ ವಿಲಿವಿಲಿ ಒದ್ದಾಡುತ್ತಿದ್ದಾರೆ. ಎತ್ತಿನಹೊಳೆಯಿಂದ ರೈತರಿಗೆ ಅಥವಾ ಕುಡಿಯುವ ನೀರಿಗೆ ಯಾರಿಗಾದರೂ ಪ್ರಯೋಜನವಾಗುತ್ತದೆಯೇ? ಎತ್ತಿನಹೊಳೆಯಲ್ಲಿರುವುದು ಕೇವಲ ಐದಾರು ಟಿಎಂಸಿ ನೀರು. ಅದನ್ನು ಡೈವರ್ಟ್ ಮಾಡುವಂತೆ ಇಲ್ಲ" ಎಂದು ಶ್ರೀ ಸೋಮಶೇಖರ್ ಅವರು ವಿವರಿಸಿದರು.

ಎತ್ತಿನಹೊಳೆ ಯೋಜನೆಯ ಕುರಿತು ಶ್ರೀ ಸೋಮಶೇಖರ್ ಅವರು ಹಸಿರು ಪೀಠದಲ್ಲಿ ಹಾಕಿದ ಕೇಸನ್ನು ವಾದಿಸುತ್ತಿರುವ ಹೈಕೋರ್ಟ್ ವಕೀಲ ಶ್ರೀ ಪ್ರಿನ್ಸ್ ಐಸಾಕ್ ಅವರು ಮಾತನಾಡಿ "ಕಾನೂನಿನ ವಿಚಾರದಲ್ಲಿ ನೋಡಿದರೆ ಎತ್ತಿನಹೊಳೆ ಯೋಜನೆಯ ಕುರಿತಾದ ವಿವಾದವು ಪರಸರ ಸಂರಕ್ಷಣೆ, ಅರಣ್ಯ ರಕ್ಷಣೆ, ಜೀವವೈವಿಧ್ಯಕ್ಕೆ ಸಂಬಂಧ ಪಟ್ಟ ಕಾನೂನು, ರಾಷ್ಟ್ರೀಯ ಜಲನೀತಿ ಹೀಗೆ ಬಹಳಷ್ಟು ವಿಸ್ತಾರವಾದ ವಿಷಯಗಳಿವೆ" ಎಂದರು. "ಕಳೆದ ಶತಮಾನದ ಅರುವತ್ತು, ಎಪ್ಪತ್ತು, ಎಂಬತ್ತರ ದಶಕಗಳಲ್ಲಿ ಸುಮಾರು ಮೂವತ್ತು ಪ್ರತಿಶತಗಳಿಗಿಂತಲೂ ಹೆಚ್ಚು ಅರಣ್ಯದ ನಾಶವುಂಟಾಯಿತು. ನಮ್ಮ ದಟ್ಟ ಅರಣ್ಯಗಳಲ್ಲಿದ್ದ ಮರಮಟ್ಟುಗಳನ್ನು ವಿದೇಶಗಳಿಗೆ ರಫ್ತು ಮಾಡಲಾಯಿತು. ನಮ್ಮ ಮಳೆಕಾಡುಗಳಿಂದ ಲಕ್ಷಾಂತರ ಮರಗಳನ್ನು ಕಡಿದುದರಿಂದ ನೀರಿನ ಕೊರತೆಯಾಗಿದೆ. ಎತ್ತಿನಹೊಳೆಯ ವಿಷಯವೇ ಆಗಲೀ, ಕಾವೇರಿ ನದೀನೀರಿನ ಹಂಚಿಕೆಯ ವಿಷಯವಾಗಲೀ ಮುಖ್ಯವಾಗಿ ಇರುವ ಸಮಸ್ಯೆ ಎಂದರೆ ನೀರೇ ಇಲ್ಲದಿರುವುದು ಆಗಿದೆ. ಮಳೆಕೊಯ್ಲು ಆಗುವ ಪಶ್ಚಿಮ ಘಟ್ಟಗಳಲ್ಲಿ ಕಾಡುಗಳ ನಾಶವಾಗಿರುವುದರಿಂದ ಮಳೆಬೀಳುವ ಪ್ರಮಾಣವೂ ಕಡಿಮೆಯಾಗಿದೆ ಅಲ್ಲದೇ ಮಳೆಬೀಳುವ ಪ್ರದೇಶಗಳೂ ಬದಲಾಗುತ್ತಿವೆ" ಎಂದು ಶ್ರೀ ಐಸಾಕ್ ಅವರು ವಿವರಿಸಿದರು.

"ಪಶ್ಚಿಮಘಟ್ಟದ ಸಾವಿರಾರು ಹಳ್ಳಿಗಳು ನೈಸರ್ಗಿಕವಾಗಿ ಬಹಳಷ್ಟು ಸೂಕ್ಷ್ಮ ಪ್ರದೇಶವೆಂದು ಸರಕಾರವೇ ಈಗಾಗಲೇ ಘೋಷಿಸಿದೆ. ಕಾನೂನು ಪ್ರಕಾರ ಅಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಅವಕಾಶವಿಲ್ಲ. ಆದರೆ ನಮ್ಮ ಸರಕಾರವೇ ಕಾನೂನನ್ನು ಮುರಿದು ಇಂತಹ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಅದರ ವಿರುದ್ಧ ಹೋರಾಡಲು ನಮಗೂ ಬಹಳ ಕಷ್ಟವಾಗುತ್ತದೆ. ಸರಕಾರವನ್ನೇ ಕಾನೂನಿನ ಕಟಕಟೆಗೆ ತೆಗೆದುಕೊಂಡು ಹೋದಾಗ ಬಹಳ ಕಠಿಣವಾದ ಕಾನೂನು ಸಮರವನ್ನು ನಾವು ಮಾಡಬೇಕಾಗುತ್ತದೆ. ಈಗಲೂ ಪಶ್ಚಿಮ ಘಟ್ಟದಲ್ಲಿ ಎತ್ತಿನಹೊಳೆ ಯೋಜನೆಗೆ ಬಹಳಷ್ಟು ಮರಗಳನ್ನು ಕಡಿಯಲಾಗಿದೆ" ಎಂದರು.

"ಯೋಜನೆಯ ವಿಸ್ತೃತ ವರದಿಯಲ್ಲಿ ನದಿಯ ದಂಡೆಯ ಎತ್ತರಕ್ಕಷ್ಟೇ ತಡೆಗೋಡೆಗಳನ್ನು ನಿರ್ಮಿಸಲಾಗುವುದು ಎಂದಿದೆ. ಆದರೆ ಇಂದು ಯೋಜನೆಯ ಸ್ಥಳಕ್ಕೆ ಹೋಗಿ ನೋಡಿದರೆ ಅವರು ಕಟ್ಟಿರುವ ತಡೆಗೋಡೆ ನದಿಯ ಸುಮಾರು 200 ಮೀಟರ್ ಉದ್ದಕ್ಕೆ 30 ಅಡಿ ಎತ್ತರಕ್ಕೆ ಇದೆ. ಸಪ್ಟಂಬರ್ 16ಕ್ಕೆ ನಾವು ಯೋಜನಾ ಸ್ಥಳಕ್ಕೆ ಭೇಟಿ ನೀಡಿದಾಗ ಕೇವಲ ಎರಡು ಅಡಿಯಷ್ಟು ಮಾತ್ರವೇ ನೀರು ಹರಿದು ಹೋಗುತ್ತಿತ್ತು, ಹೀಗಿರುವಾಗ ಅಲ್ಲಿಂದ 24 ಟಿಎಂಸಿ ನೀರನ್ನು ಹೇಗೆ ಎತ್ತಬಹುದು ಎಂಬುದೇ ಪ್ರಶ್ನೆ. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸಯನ್ಸ್‌ನವರ ಅಧ್ಯಯನದ ಪ್ರಕಾರ

ಎತ್ತಿನಹೊಳೆ ಯೋಜನೆಯ ಸುಮಾರು 176 ಚದರ ಕಿಲೋಮೀಟರ್ ವಿಸ್ತಾರದಲ್ಲಿ ಬೀಳುವ ಒಟ್ಟು ಮಳೆಯ ಪ್ರಮಾಣ ಸರಿಸುಮಾರು 9.55 ಟಿಎಂಸಿ. ಆದರೆ ಅಷ್ಟೂ ನೀರು ಹೊಳೆಗೆ ಹರಿದು ಬರುವುದಿಲ್ಲ. ಪಶ್ಚಿಮಘಟ್ಟದಲ್ಲಿ ಬೀಳುವ ಮಳೆ ಭೂಮಿಯ ಒಳಗಡೆ ಹರಿದು ಇಂಗುತ್ತದೆ. ಮಳೆಗಾಲದಲ್ಲಿ ಬಿದ್ದ ನೀರು ಭೂಮಿಯ ಒಳಗಡೆ ಸಂಗ್ರಹಗೊಂಡು ಬೇಸಿಗೆಯಲ್ಲಿ ನದಿಯಲ್ಲಿ ಹರಿಯುತ್ತದೆ. ಹೀಗೆ ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣ ಸುಮಾರು ಮೂರರಿಂದ ನಾಲ್ಕು ಟಿಎಂಸಿ ಆಗಿರುತ್ತದೆ. ಉಳಿದ ನೀರು ಹೊಳೆಯಲ್ಲಿ ಹರಿದು ಬರುತ್ತದೆ. ಎತ್ತಿನಹೊಳೆ, ಕಾಡಮನೆ ಹೊಳೆ, ಕಾರಿಹೊಳೆ ಮತ್ತು ಹೊಂಗದಹಳ್ಳ ಹೀಗೆ ಈ ನಾಲ್ಕು ತೊರೆಗಳನ್ನು ಉಳಿಸಿಕೊಳ್ಳಬೇಕಾದರೆ ಅದರಲ್ಲಿ ಸುಮಾರು ಒಂದು ಟಿಎಂಸಿ ನೀರು ಹರಿದು ಹೋಗಲೇ ಬೇಕು. ಇಲ್ಲವಾದರೆ ಇವರು ಕಟ್ಟಿರುವ ಅಣೆಕಟ್ಟಿನ ಕೆಳಗಡೆ ನದಿ ಸತ್ತು ಹೋಗಬಹುದು. ಆದರೆ ನದಿಯನ್ನು ಸಾಯಿಸಲಾಗುವುದಿಲ್ಲ. ಅಲ್ಲಿರುವ ಪಕ್ಷಿ, ಮೃಗ ಮರಗಳಿಗೆ ಸುಮಾರು ಐದು ಟಿಎಂಸಿ ನೀರು ಬೇಕಾಗುತ್ತದೆ. ಎತ್ತಿನಹೊಳೆಯ ಸುತ್ತ ಮುತ್ತ ವಾಸಿಸುವ ಜನರಿಗೆ ಸುಮಾರು ಎರಡು ಟಿಎಂಸಿ ನೀರು ಬೇಕಾಗುತ್ತದೆ. ಹೀಗಾಗಿ ತಿರುಗಿಸಬಹುದಾದ ನೀರು ಇರುವುದು ಕೇವಲ ಒಂದು ಟಿಎಂಸಿ ಮಾತ್ರ. ಐಐಟಿ ರೂರ್ಕಿಯ ವಿದ್ವಾಂಸರಲ್ಲದೇ ಹಲವಾರು ಜಲತಜ್ಞರ ಅಭಿಪ್ರಾಯದ ಪ್ರಕಾರ ತಿರುಗಿಸಲು ಅಲ್ಲಿ ನೀರೇ ಇಲ್ಲ. ಕರ್ನಾಟಕ ನೀರಾವರಿ ನಿಗಮದವರ ಪ್ರಕಾರ ಅವರ ನಿರ್ದೇಶಕ ಮಂಡಳಿಯು 2012ರ ಜೂನ್ 23ರಂದು 10 ಟಿಎಂಸಿ ನೀರನ್ನು ತಿರುಗಿಸಲು 8323.5 ಕೋಟಿ ರೂಪಾಯಿಯಲ್ಲಿ ಯೋಜನೆಯನ್ನು ಸರಕಾರಕ್ಕೆ ಶಿಫಾರಸು ಮಾಡಿತ್ತು. ಆದರೆ ಅದೇ ವರ್ಷ ಜುಲೈ ತಿಂಗಳ 23ರಂದು ಸರಕಾರವು 24 ಟಿಎಂಸಿ ನೀರನ್ನು ಎತ್ತಿನಹೊಳೆ ಯೋಜನೆಯ ಮೂಲಕ ತಿರುಗಿಸಲು ಆಡಳಿತಾತ್ಮಕ ಅನುಮತಿಯನ್ನು ನೀಡಿತು. ಕೇವಲ ಒಂದು ತಿಂಗಳೊಳಗೆ ನೀರಿನ ಪ್ರಮಾಣವನ್ನು ಅಷ್ಟೊಂದು ಹೆಚ್ಚಿಸುವ ನಿರ್ಧಾರಕ್ಕೆ ಯಾರು, ಯಾವಾಗ, ಹೇಗೆ ಮತ್ತು ಎಲ್ಲಿ ಅಧ್ಯಯನವನ್ನು ಮಾಡಿ ವರದಿಯನ್ನು ನೀಡಿದ್ದಾರೆ ಎಂದು ಗೊತ್ತಿಲ್ಲ. ಈ 24 ಟಿಎಂಸಿ ನೀರಿನ ಕುರಿತು ಯಾವುದೇ ಅಧ್ಯಯನವಾಗಿರುವ ಪುರಾವೆ ಸಿಗುತ್ತಿಲ್ಲ" ಎಂದು ಶ್ರೀ ಐಸಾಕ್ ಅವರು ವಿವರವಾಗಿ ತಿಳಿಸಿದರು.

ದೆಹಲಿ ತುಳುಸಿರಿಯ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು ವಿಷಯದ ಕುರಿತು ಮಾತಾಡಿ ತಾನು ಇತ್ತೀಚೆಗೆ ಎತ್ತಿನಹೊಳೆಯ ಪ್ರದೇಶಕ್ಕೆ ಭೇಟಿ ನೀಡಿದಾಗ ಅಲ್ಲಿ ಕೈಬೆರಳಷ್ಟು ದೊಡ್ಡ ನೀರಿನ ಹರಿವು ಇಲ್ಲದನ್ನು ಕಂಡು ಈ ಯೋಜನೆಯ ಕುರಿತು ಚಿಂತಿತನಾದುದನ್ನು ತಿಳಿಸಿದರು. ಈ ಯೋಜನೆಯ ಕುರಿತು ವಿವಿಧ ವಿಚಾರಗಳನ್ನು ಅರಿಯುವ ನಿಟ್ಟಿನಲ್ಲಿ ಶ್ರೀ ಸೋಮಶೇಖರ್ ಅವರನ್ನು ಕರೆಸಲಾಗಿದೆ ಎಂದರು.

ದೆಹಲಿ ತುಳುಸಿರಿಯ ಕಾರ್ಯದರ್ಶಿ ಶ್ರೀ ಬಾಲಕೃಷ್ಣ ನಾಯ್ಕ್ ಡಿ ನಿರ್ವಹಿಸಿದರು. ಜತೆ ಕಾರ್ಯದರ್ಶಿ ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿ ಪರಿಚಯ ಮಾಡಿದರು. ಕೋಶಾಧಿಕಾರಿ ಶ್ರೀ ಕೆ.ಎಸ್.ಜಿ. ಶೆಟ್ಟಿ ಅವರು ಪುಸ್ತಕವನ್ನು ನೀಡಿ ಗೌರವಿಸಿದರು. ಉಪಾಧ್ಯಕ್ಷರಾದ ಶ್ರೀ ಕೆ. ರಾಮಮೂರ್ತಿ ಮತ್ತು ಡಾ. ಸಾಯಿಪ್ರಶಾಂತಿ ಶೆಟ್ಟಿ, ಸಮಿತಿ ಸದಸ್ಯೆಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್ ಮತ್ತು ಶ್ರೀಮತಿ ಪೃಥ್ವಿ ಕಾರಿಂಜೆ ಉಪಸ್ಥಿತರಿದ್ದರು. ಜತೆ ಕಾರ್ಯದರ್ಶಿ ಶ್ರೀ ಪ್ರದೀಪ್ ಕುಮಾರ್ ವಂದಿಸಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್, ದೆಹಲಿಯ ಕನ್ನಡ ಪತ್ರಕರ್ತರು ಮತ್ತು ಇನ್ನಿತರರು ಉಪನ್ಯಾಸದಲ್ಲಿ ಭಾಗವಹಿಸಿದರಲ್ಲದೇ ಮೌಲಿಕ ಚರ್ಚೆಯನ್ನೂ ನಡೆಸಿದರು. ಅ

*ಬಾಲಕೃಷ್ಣ ನಾಯ್ಕ್ ಡಿ.*




# ರಕ್ತದಾನ ಶಿಬಿರ

## ದೆಹಲಿ ತುಳುಸಿರಿ ನಡೆಸಿದ ಶಿಬಿರಕ್ಕೆ ಉತ್ತಮ ಪ್ರತಿಕ್ರಿಯೆ

ದೆಹಲಿ ತುಳುಸಿರಿಯು ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ಸಹಯೋಗದೊಂದಿಗೆ ದೆಹಲಿ ಕರ್ನಾಟಕ ಸಂಘದ ಸಹಕಾರದೊಂದಿಗೆ ಸಂಘದ ಆವರಣದಲ್ಲಿ ಇದೇ ಸಪ್ಟಂಬರ್ 11ರಂದು ರಕ್ತದಾನ ಶಿಬಿರವೊಂದನ್ನು ಏರ್ಪಡಿಸಿತ್ತು.

ದೆಹಲಿ ತುಳುಸಿರಿಯ ಉಪಾಧ್ಯಕ್ಷೆ ಡಾ. ಸಾಯಿಪ್ರಶಾಂತಿ ಶೆಟ್ಟಿ, ಜತೆ ಕಾರ್ಯದರ್ಶಿ ಶ್ರೀ ಪ್ರದೀಪ್ ಕುಮಾರ್, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್ ಸೇರಿದಂತೆ ಸುಮಾರು 40ಕ್ಕಿಂತಲೂ ಹೆಚ್ಚು ಜನರು ರಕ್ತದಾನ ಮಾಡಿದರು. ರೆಡ್‌ಕ್ರಾಸ್ ಸೊಸೈಟಿಯ ಕಾರ್ಯಕರ್ತರು ಇದೊಂದು ಒಳ್ಳೆಯ ಕೆಲಸವಾಗಿದ್ದು ಅತ್ಯಂತ ಉತ್ತಮ ಪ್ರತಿಕ್ರಿಯೆ ದೊರಕಿದೆ ಎಂದು ಹೇಳಿ ಈ ರಕ್ತದಾನ ಶಿಬಿರವನ್ನು ಆಯೋಜಿಸಿದ ದೆಹಲಿ ತುಳುಸಿರಿಯನ್ನು ಅಭಿನಂದಿಸಿದರು. ಹಲವಾರು ಮಹಿಳೆಯರು ರಕ್ತದಾನಕ್ಕೆ ಹೆಸರು ನೋಂದಾಯಿಸಿದರೂ, ಅವರಲ್ಲಿ ಹೆಮೋಗ್ಲೋಬಿನ್ ಕೊರತೆಯಿಂದ ಅವರೆಲ್ಲರೂ ರಕ್ತದಾನ ಮಾಡಲಾಗಿಲ್ಲ. ಈ ನಿಟ್ಟಿನಲ್ಲಿ ಮಹಿಳೆಯರು ತಮ್ಮ ಆರೋಗ್ಯದ ಕುರಿತು ಹೆಚ್ಚಿನ ನಿಗಾ ವಹಿಸಬೇಕು ಎಂದು ಶಿಬಿರದ ವೈದ್ಯರು ತಿಳಿಸಿದರು. ಬಹಳಷ್ಟು ಯುವಕರು ಸೇರಿದಂತೆ ರಕ್ತದಾನ ಮಾಡಿದ ಎಲ್ಲರಿಗೂ ಶ್ರೀ ಪ್ರದೀಪ್ ಕುಮಾರ್ ಅವರು ಅಭಿನಂದನೆ ಸಲ್ಲಿಸಿ ಅವರ ಮಹಾದಾನವನ್ನು ಕೊಂಡಾಡಿದರು. ರಕ್ತದಾನ ಮಾಡಿದವರಿಗೆ ಮುಂದೆ ಒಂದು ವರ್ಷದೊಳಗೆ ಎಂದಾದರೂ ರಕ್ತದ ಅವಶ್ಯಕತೆ ಇದ್ದರೆ ದೆಹಲಿ ತುಳುಸಿರಿಯು ರೆಡ್‌ಕ್ರಾಸ್ ಸೊಸೈಟಿಯ ಮೂಲಕ ರಕ್ತದ ವ್ಯವಸ್ಥೆ ಮಾಡುವುದು ಎಂದು ಅವರು ತಿಳಿಸಿದರು.

ದೆಹಲಿ ತುಳುಸಿರಿಯ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ, ಕಾರ್ಯದರ್ಶಿ ಶ್ರೀ ಬಾಲಕೃಷ್ಣ ನಾಯ್ಕ್ ಡಿ., ಕೋಶಾಧಿಕಾರಿ ಶ್ರೀ ಕೆ.ಎಸ್.ಜಿ. ಶೆಟ್ಟಿ, ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮೊದಲಾದವರು ರಕ್ತದಾನ ಶಿಬಿರವನ್ನು ನಡೆಸುವಲ್ಲಿ ಸಹಕರಿಸಿದರು. ಶಿಬಿರದ ಆರ್ಥಿಕ ಉಸ್ತುವಾರಿಯನ್ನು ಕೆಕೆ ಫ್ರೆಂಡ್ಸ್‌ನ ಡಾ. ಸಚೇತ್ ಶೆಟ್ಟಿ ಅವರು ವಹಿಸಿದ್ದರು. ಅ

*ಬಾಲಕೃಷ್ಣ ನಾಯ್ಕ್ ಡಿ.*



# ಒಡೆದ ದನಿಗಳ ನಾಡು

## ಕರ್ನಾಟಕದ ಒಡಕಲು ಧ್ವನಿಗಳನ್ನು ಒಂದುಗೂಡಿಸಲು ಇದೀಗ ಎಲ್ಲರೂ ಕೆಲಸಮಾಡಬೇಕಾಗಿದೆ.

ಕಾವೇರಿಯ ಬಗ್ಗೆ ನಾಡಿನ ಬಯಲು ಸೀಮೆಯವರು ದನಿ ಎತ್ತಬೇಕು, ನೇತ್ರಾವತಿಯ ಬಗ್ಗೆ ಕರಾವಳಿಯವರು ಮಾತನಾಡಬೇಕು, ಮಹದಾಯಿಯ ಬಗ್ಗೆ ಉತ್ತರ ಕರ್ನಾಟಕದವರು ಪ್ರತಿಭಟಿಸಬೇಕು. 'ನಿಮ್ಮ ನಿಮ್ಮ ಸಮಸ್ಯೆ ನೀವು ನೋಡಿಕೊಳ್ಳಿ' ಎಂಬಂಥ ಒಡೆದ ದನಿಗಳು ಕರ್ನಾಟಕದಲ್ಲಿವೆ. ಒಂದು ವಿಷಯದ ಬಗ್ಗೆ ಎಲ್ಲರೂ ಜೊತೆಯಾಗಿ ದನಿ ಎತ್ತುವುದಿಲ್ಲ, ಕರ್ನಾಟಕದ ಯಾವುದೇ ಭಾಗದ ಸಮಸ್ಯೆಯ ಬಗ್ಗೆ ಮಾತನಾಡುವಾಗ ಕರ್ನಾಟಕದ ಎಲ್ಲ ಸಂಸದರು ಪಾರ್ಲಿಮೆಂಟಿನಲ್ಲಿ ಜೊತೆಯಾಗುವುದಿಲ್ಲ , ನಾಡಿನ ಜನ ಪಕ್ಷಬೇಧ ಮರೆತು ಒಂದು ವಿಷಯದ ಬಗ್ಗೆ ಧರಣಿ ನಡೆಸುವುದಿಲ್ಲ . ಭಾವನಾತ್ಮಕವಾಗಿ ಒಡೆದ ಇಂಥ ದನಿಗಳನ್ನು ಒಂದಾಗಿಸುವುದಾದರೂ ಹೇಗೆ? ಕರ್ನಾಟಕದ ರಾಜಕೀಯದಲ್ಲಿ ಪ್ರತೀಬಾರಿ ಯಾವುದಾದರೂ ಒಂದು ಪಕ್ಷ ಗೆಲ್ಲುತ್ತದೆ, ಆದರೆ ರಾಜ್ಯ ಮಾತ್ರ ಸೋಲುತ್ತಲೇ ಇರುತ್ತದೆ !

ರಾಜ್ಯದ ಸಮಸ್ಯೆಗಳನ್ನು ಯಾವ ಪಕ್ಷ ಅಧಿಕಾರದಲ್ಲಿದೆ ಎಂಬ ಚೌಕಟ್ಟಿನಲ್ಲಿ ವಿಶ್ಲೇಷಿಸಿ ನಾವು ತೀರ್ಮಾನ ತೆಗೆದುಕೊಂಡರೆ, ಪಕ್ಷಗಳು ಗೆಲ್ಲಬಹುದು, ಆದರೆ ರಾಜ್ಯ ಸೋಲುತ್ತದೆ. ಅದು ಜನ ತಂತ್ರದ ಸೋಲು ಕೂಡಾ ಹೌದು. ಕಾವೇರಿ ವಿವಾದ ಎಚ್ಚರಿಕೆಯ ಗಂಟೆ ಬಾರಿಸಿದೆ. ಅದನ್ನು ಸರಿಯಾಗಿ ಕೇಳಿಸಿಕೊಳ್ಳಬೇಕಾದ ಅಗತ್ಯ ನಮ್ಮೆಲ್ಲರದು. ಮನೆಗೆ ಬೆಂಕಿ ಬಿಬವ?ಗ ಬೀಡಿ ಉರಿಸಿಕೊಳ್ಳುವ ಪ್ರವೃತ್ತಿ ಕೊನೆಯಾಗಬೇಕಿದೆ.

ಈಚೆಗೆ ನಡೆದ ಕಾವೇರಿ ನದಿ ನೀರಿನ ವಿವಾದ ಮತ್ತು ಅದನ್ನು ನೆವವಾಗಿಸಿಕೊಂಡು ನಡೆದ ಹಿಂಸಾಚಾರಗಳು ಕರ್ನಾಟಕದ ಇತಿಹಾಸ, ವರ್ತಮಾನ ಮತ್ತು ಭವಿಷ್ಯದ ಬಗ್ಗೆ ಗಂಭೀರವಾಗಿ ಯೋಚಿಸುವಂತೆ ಮಾಡಿದೆ. ನಿಜವಾಗಿ ಕರ್ನಾಟಕ ಅಂತ ಒಂದಿದೆಯಾ, ಅದಕ್ಕೊಂದು ಸಾಮಾನ್ಯ ಇತಿಹಾಸ ಇದೆಯಾ, ಕರ್ನಾಟಕದ ಧ್ವನಿಯೊಂದು ಎಂದಾದರೂ ಗಟ್ಟಿಯಾಗಿ ಕೇಳಿಬರುವ ಸಾಧ್ಯತೆಯಿದೆಯಾ ಅಥವಾ ಕೇಳಬೇಕಾದ ಆವಶ್ಯಕತೆ ಇದೆಯಾ ಎಂಬಂಥ ಪ್ರಶ್ನೆಗಳು ಈಗ ಹುಟ್ಟಿಕೊಳ್ಳುತ್ತಿವೆ.

ಬಹುಶಃ ಕರ್ನಾಟಕದ ಒಡಕಲು ಇತಿಹಾಸವೇ ಅದನ್ನು ದುರ್ಬಲಗೊಳಿಸಿರುವಂತೆ ತೋರುತ್ತದೆ. ಕವಿರಾಜ ಮಾರ್ಗಕಾರನೇನೋ ಕಾವೇರಿಯಿಂದ ಆ ಗೋದಾವರಿಮಿರ್ದಾ ನಾಡದಾ ಕನ್ನಡದೊಳ್ ಎಂದು ಹೇಳಿದ ನಿಜ. ಆದರೆ ಆ ಕರ್ನಾಟಕ ಭೌಗೋಳಿಕವಾಗಿ ಇತ್ತೀಚಿನವರೆಗೂ ಒಂದಾಗಿರಲಿಲ್ಲ. ಸಾಂಸ್ಕೃತಿಕವಾಗಿಯೂ ಎಲ್ಲ ಕನ್ನಡಿಗರೂ ಹಂಚಿಕೊಳ್ಳುವಂಥ (ಇಂದಿನ ರಾಜ್ಯೋತ್ಸವದ ಹಾಗೆ) ಒಂದಾದರೂ ಘಟಕ ನಮ್ಮಲ್ಲಿರಲಿಲ್ಲ. ಹೀಗಾಗಿ "ಸಾವಿರಾರು ವರ್ಷಗಳಿಂದಲೇ ನಮ್ಮ ನಾಡು ಅಸ್ತಿತ್ವದಲ್ಲಿತ್ತು' ಎಂದು ಭಾಷಣ ಬಿಗಿಯುವವರು, ಜನರ ಅಂದಿನ ಭೌಗೋಳಿಕ ಪ್ರಜ್ಞೆಗೆ ಆಗಿನ ರಾಜಕೀಯ ರಚನೆಗಳೊಂದಿಗೆ ತಾಳೆ ಇರಲಿಲ್ಲವೆಂಬುದನ್ನು ಮರೆಯಬಾರದು. ಕರ್ನಾಟಕವನ್ನಾಳಿದ ಕನ್ನಡದ ಅರಸರಾಗಿದ್ದ ಕದಂಬರು, ಗಂಗರು, ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಳುಕ್ಯರು, ವಿಜಯನಗರದ ಅರಸರು, ಬಹಮನಿ ಸುಲ್ತಾನರು, ಮೈಸೂರರಸರು–ಇವರೆಲ್ಲ ಕರ್ನಾಟಕದ ಬೇರೆ ಬೇರೆ ಭಾಗಗಳನ್ನು ಆಳಿದವರು.

ಆಡಳಿತಕ್ಕೆ ಸಂಬಂಧಿಸಿದಂತೆ ಇವರ ಯೋಚನೆಗಳೂ–ಯೋಜನೆಗಳೂ ಬೇರೆ ಬೇರೆಯೇ

**ನಮ್ಮಲ್ಲಿ 'ನಾವೆಲ್ಲ ಒಂದು, ನಮ್ಮ ರಾಜ್ಯಕ್ಕಾಗಿ, ಭಾಷೆಗಾಗಿ ನಾವೆಲ್ಲ ಒಟ್ಟಾಗಿ ಹೋರಾಡಬೇಕು' ಎಂಬ ಪ್ರಜ್ಞೆ ಮೂಡುವುದಾದರೂ ಹೇಗೆ? ಪ್ರಾದೇಶಿಕತೆ, ಅಧಿಕಾರ, ರಾಜಕಾರಣ ಮತ್ತು ಜಾತೀಯ ಪ್ರಜ್ಞೆಗಳನ್ನು ಮೀರಿ ಕನ್ನಡ ರಾಷ್ಟ್ರೀಯತೆ ಮುನ್ನೆಲೆಗೆ ಬರುವುದು ಸಾಧ್ಯವೇ ಎಂಬ ವಿಚಾರ ಮತ್ತು ಅದಕ್ಕೆ ಸಿಗಬಹುದಾದ ಉತ್ತರ ಸದ್ಯದ ಪರಿಸ್ಥಿತಿಯಲ್ಲಿ ನಮ್ಮಲ್ಲಿ ದಿಗಿಲು ಹುಟ್ಟಿಸುತ್ತಿದೆ.**

ಆಗಿತ್ತು. ಬ್ರಿಟಿಷರ ಕಾಲದಲ್ಲಿಯೂ ನಮ್ಮ ನಾಡು ಮುಂಬಯಿ ಕರ್ನಾಟಕ, ಮದ್ರಾಸ್ ಕರ್ನಾಟಕ, ಹೈದರಾಬಾದ್ ಕರ್ನಾಟಕ ಎಂದೆಲ್ಲ ಒಡೆದಿತ್ತು. ಟಿಪ್ಪುವಿನ ಪತನದ ಆನಂತರ ತುಂಗಭದ್ರೆಯ ಉತ್ತರ ಭಾಗಗಳು, ಪೂರ್ವದ ಕೆಲವು ಪ್ರದೇಶಗಳು ಮತ್ತು ಪಶ್ಚಿಮ ಘಟ್ಟದ ಕೆಳಗಿನ ಜಾಗಗಳನ್ನು ಮೈಸೂರಿನಿಂದ ಬೇರ್ಪಡಿಸಲಾಯಿತು. ಕರ್ನಾಟವನ್ನು ಒಂದುಗೂಡಿಸಲು ಪ್ರಯತ್ನಿಸಿದ್ದ ಟಿಪ್ಪುವನ್ನು ಸೋಲಿಸಿದ ಮಿತ್ರಪಕ್ಷಗಳು ಕರ್ನಾಟಕವನ್ನು ಚೂರು ಚೂರಾಗಿಸುವಲ್ಲಿ ಯಶಸ್ವಿಯಾದರು.

ಕರಾವಳಿ ಬ್ರಿಟಿಷರಿಗೆ, ಕೊಡಗು ಒಡೆಯರಿಗೆ, ಚಿತ್ರದುರ್ಗ ನಿಜಾಮನಿಗೆ, ಉತ್ತರಕನ್ನಡ ಮನ್ರೋನಿಗೆ–ಇದು ಕನ್ನಡಿಗರ ಕರ್ಮಕತೆ. ಭಾರತದ ಯಾವ ಭಾಷೆಗೂ ಇಂಥ ದುರ್ಗತಿ ಇಷ್ಟೊಂದು ತೀವ್ರವಾಗಿ ಕಾಡಿರಲಿಲ್ಲ. ಇದರ ಜೊತೆಗೆ ಇತರ ಭಾಷೆಗಳ ಆಕ್ರಮಣ. ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟ ಕೊಡಗಿನಲ್ಲಿ ಇಂಗ್ಲಿಷಿನ ಮೋಹ, ಮೈಸೂರು ಯುದ್ಧಗಳಲ್ಲಿ ಬ್ರಿಟಿಷರ ಪರ ನಿಂತಿದ್ದ ಮರಾಠಿಗರಿಗೆ ಅವರ ಭಾಷೆಯನ್ನು ಮುಂಬಯಿ ಕರ್ನಾಟಕದಲ್ಲಿ ಪ್ರಚುರಪಡಿಸಲು ಸಿಕ್ಕಿದ ಅವಕಾಶ, ನಿಜಾಮನ ದರಬಾರಿನಲ್ಲಿ ಪಾರ್ಸಿ–ಉರ್ದುಗಳಿಗೆ ಸಿಕ್ಕ ಪ್ರಾಶಸ್ತ್ಯ, ಕರಾವಳಿಯಲ್ಲಿದ್ದ ತುಳು, ಈ ನಡುವೆ ಕರ್ನಾಟಕದಲ್ಲಿದ್ದ ಹಲವು ಸಮುದಾಯಗಳು ತಮಗೆ ಗೊತ್ತಿಲ್ಲದೇನೇ ಒಂದು ಬಗೆಯ ಕರ್ನಾಟಕತ್ವವನ್ನು ಸ್ಥೂಲವಾಗಿ ರೂಪಿಸಿರುವುದು ಹೌದಾದರೂ, ಅವು ಒಂದರೊಡನೊಂದು ಬೆಸೆದುಕೊಂಡು ಕೆಲಸ ಮಾಡಿದ್ದು ಕಡಿಮೆಯೇ.

ಲಿಂಗಾಯತರದು ಒಂದು ಬಗೆಯಾದರೆ, ಗೌಡರದು ಇನ್ನೊಂದು, ಬ್ರಾಹ್ಮಣರದು ಮಗದೊಂದು– ಹೀಗೆ ಇದೊಂದು ಮುಕ್ತಾಯವಿಲ್ಲದ ಕತೆ. ಎಲ್ಲರಿಗೂ ಅವರವರದೇ ಆದ ಮಠಗಳು, ಆಚಾರ–ವಿಚಾರಗಳು, ಜೊತೆಗೆ ತಮಗೆ ಬೇಕಾದಂತೆ ರೂಪುಗೊಂಡ 'ಕನ್ನಡಂಗಳು'. ರಾಷ್ಟ್ರೀಯತೆ ಮುನ್ನೆಲೆಗೆ ಬರುವುದು ಯಾವಾಗ?

ಇಂಥ ಚರಿತ್ರೆಯನ್ನು ಕಟ್ಟಿಕೊಂಡಿರುವ ನಮ್ಮಲ್ಲಿ 'ನಾವೆಲ್ಲ ಒಂದು, ನಮ್ಮ ರಾಜ್ಯಕ್ಕಾಗಿ, ಭಾಷೆಗಾಗಿ ನಾವೆಲ್ಲ ಒಟ್ಟಾಗಿ ಹೋರಾಡಬೇಕು' ಎಂಬ ಪ್ರಜ್ಞೆ ಮೂಡುವುದಾದರೂ ಹೇಗೆ? ಪ್ರಾದೇಶಿಕತೆ, ಅಧಿಕಾರ, ರಾಜಕಾರಣ ಮತ್ತು ಜಾತೀಯ ಪ್ರಜ್ಞೆಗಳನ್ನು ಮೀರಿ ಕನ್ನಡ ರಾಷ್ಟ್ರೀಯತೆ ಮುನ್ನೆಲೆಗೆ ಬರುವುದು ಸಾಧ್ಯವೇ ಎಂಬ ವಿಚಾರ ಮತ್ತು ಅದಕ್ಕೆ ಸಿಗಬಹುದಾದ ಉತ್ತರ ಸದ್ಯದ ಪರಿಸ್ಥಿತಿಯಲ್ಲಿ ನಮ್ಮಲ್ಲಿ ದಿಗಿಲು ಹುಟ್ಟಿಸುತ್ತಿದೆ.

ಕಾವೇರಿ, ಮಹದಾಯಿ, ಕೃಷ್ಣಾ, ನೇತ್ರಾವತಿ ನದಿ ನೀರುಗಳ ವಿಚಾರಗಳಲ್ಲಿ ನಡೆದ ವಿವಾದಗಳು, ತುಳು ಹಾಗೂ ಕೊಡವ ಭಾಷೆಗಳನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸುವ ಕೆಲಸದಲ್ಲಿ ಹಿನ್ನಡೆಯೇ ಮೊದಲಾದ ಹತ್ತು ಹಲವು ವಿಚಾರಗಳಲ್ಲಿ ಕರ್ನಾಟಕ ಸರಕಾರ ಮತ್ತು ಕನ್ನಡಿಗರು ನಡೆದುಕೊಂಡ ರೀತಿ ಒಮ್ಮತದ್ದಲ್ಲ.

ಭಿನ್ನಾಭಿಪ್ರಾಯಗಳನ್ನು ಗೌರವಿಸುತ್ತಲೇ ರಾಜ್ಯದ ಹಿತಾಸಕ್ತಿಯ ವಿಷಯ ಬಂದಾಗ ಒಂದು ಧ್ವನಿಯಾಗಿ ಹೊಮ್ಮಬೇಕಾಗಿದ್ದ ನಾವು ಒಡಕಲು ಧ್ವನಿಗಳಾಗಿದ್ದೇವೆ. ಬೌದ್ಧಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಭಾವೈಕ್ಯವನ್ನು ಸಾಧಿಸುವಲ್ಲಿ ಕರ್ನಾಟಕ ವಿಫಲವಾಗಿದೆ. ಅದರ ಹಿಂದಿನ ಚರಿತ್ರೆ ಮತ್ತೆ ಹೊಸರೂಪದಲ್ಲಿ ಪ್ರತ್ಯಕ್ಷವಾಗುತ್ತಿದೆ. ಒಂದು ಸತ್ವಯುತವಾದ, ಬಲಿಷ್ಠ ಸೈದ್ಧಾಂತಿಕ ನೆಲೆಯುಳ್ಳ ರಾಜ್ಯವಾಗಿ ಬೆಳೆಯಬೇಕಾಗಿದ್ದ ಕರ್ನಾಟಕವು ಇಂದು ಭಾರತದ ಗಣತಂತ್ರ ವ್ಯವಸ್ಥೆಯ ದುರ್ಬಲ ರಾಜ್ಯವಾಗಿ ಹೊರಹೊಮ್ಮುತ್ತಿದೆ. ಮೊನ್ನೆ ಕಾವೇರಿ ನದಿ ನೀರಿನ ಗಲಾಟೆಯ ಸಂದರ್ಭದಲ್ಲಿ ರಾಷ್ಟ್ರೀಯ ಮಾಧ್ಯಮಗಳು ಬಹುತೇಕವಾಗಿ ಕರ್ನಾಟಕವನ್ನು ಖಳನಾಯಕನನ್ನಾಗಿ ನಿಲ್ಲಿಸಿದಾಗ ನಮ್ಮ ಪರವಾಗಿ ಮಾತಾಡಲು ಯಾವ ವಕೀಲರೂ ಇರಲಿಲ್ಲ.

ಇರದಿದ್ದರೆ ಬೇಡ. ಅದರಿಂದ ಕರ್ನಾಟಕದ ಸ್ವಾಯತ್ತೆಗೆ ಭಂಗವೇನೂ ಆಗುವುದಿಲ್ಲ. ಭಯಾನಕ ವಿಚಾರವೆಂದರೆ, ಆ ಇಡೀ ಗಲಾಟೆಯನ್ನು ಕೆಲವು ರಾಜಕೀಯ ಪಕ್ಷಗಳು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳಲು ಆರಂಭಿಸಿದ್ದು. "ತಮಿಳುನಾಡಿಗೆ ನೀರು ಬಿಡಬಾರದಿತ್ತು' ಎಂದು ಹೇಳಿದ ಕೆಲವು ಪ್ರಭಾವೀ ಮುಖಂಡರು ಕೊನೆಗೆ ಕರ್ನಾಟಕ ಸರಕಾರವನ್ನು ರೈತ ವಿರೋಧಿ ಎಂದು ಕರೆಯಲು ಆರಂಭಿಸಿದರು. ಸಾಮಾಜಿಕ ಜಾಲತಾಣಗಳಲ್ಲಿ ಸರಕಾರದ ವಿರುದ್ಧ ಅನೇಕ ಬಗೆಯ ಹೇಳಿಕೆಗಳು ಹರಿದಾಡಿದುವು. ಇನ್ನು

ಕೆಲವರು "ರಾಜ್ಯ ಸರಕಾರದ ರೈತವಿರೋಧಿ ನೀತಿ'ಯ ವಿರುದ್ಧ ಜಿ?ಧಿಕಾರಿಗಳಿಗೆ ಮನವಿ ನೀಡಲು ಹೊರಟರು. "ತಮ್ಮ ಪತ್ರಗಳಿಗೆ ಪ್ರಧಾನಿ ಕಚೇರಿಯಿಂದ ಉತ್ತರವೇ ಬಂದಿಲ್ಲ' ಎಂದು ಸರಕಾರ ಗೊಣಗುಟ್ಟುತ್ತಿರುವಾಗ "ಪ್ರಧಾನಿಯ ಮಧ್ಯಸ್ಥಿಕೆ ಬೇಡ' ಎಂಬ ಹೇಳಿಕೆಯೂ ಹೊರಟಿತು. ಈ ನಡುವೆ "ಕರ್ನಾಟಕದಂಥ ಒಂದು ರಾಜ್ಯ ಸುಪ್ರೀಂ ಕೋರ್ಟಿನ ಆದೇಶವನ್ನು ಪಾಲಿಸಬೇಕೋ, ಬೇಡವೋ?' ಎಂಬ ಬಗ್ಗೆ ದೊಡ್ಡ ಮಟ್ಟದ ಚರ್ಚೆಯೇ ನಡೆಯಲಿಲ್ಲ. ರಾಮರಥ ಯಾತ್ರೆಯ ಸಂದರ್ಭದಲ್ಲಿ ಶ್ರೀ ಅಡ್ವಾಣಿಯವರು "ಜನಾದೇಶದ ಮುಂದೆ ಯಾವ ನ್ಯಾಯಾದೇಶವೂ ಇಲ್ಲ' ಎಂಬರ್ಥ ಕೊಡುವ ಮಾತನ್ನಾಡಿದ್ದರು. ಆ ಧೈರ್ಯವನ್ನು ಯಾರೂ ತೋರಿಸಲಿಲ್ಲ.

ರಾಜ್ಯದ ಪರವಾಗಿ ರಾಜೀನಾಮೆ ನೀಡುತ್ತೇವೆ ಎಂದು ಹೇಳಿದವರೇ ಇಲ್ಲ. ತಮಿಳುನಾಡಿಗೆ ನೀರು ಬಿಡಲು ಆರಂಭಿಸಿದ ಮೇಲೆ ಹಿರಿಯ ವಕೀಲರೋರ್ವರು "ಸುಪ್ರಿಂ ಕೋರ್ಟಿಗೆ ನೀರಿನ ವಿಷಯದಲ್ಲಿ ಪ್ರವೇಶ ಮಾಡುವ ಅಧಿಕಾರವೇ ಇಲ್ಲ' ಎಂದು ಹೇಳಿದರು. ಇದು ಹೌದಾದರೆ ಇದನ್ನೇ ಆಧರಿಸಿ ನ್ಯಾಯಾಲಯದ ಮೆಟ್ಟಲೇರಲು ಯಾರಿಗೇನು ಅಡ್ಡಿ? ತಾಯ್ನಾಡಿಗೆ ಅಷ್ಟಾದರೂ ಸೇವೆ ಮಾಡಬಹುದಲ್ಲ? ಇನ್ನು ಕೆಲವರು ಸುಪ್ರೀಂ ಕೋರ್ಟಿನ ನ್ಯಾಯಾಧೀಶರು ಜಯಲಲಿತಾರಿಗೆ ವಕೀಲರಾಗಿದ್ದರು ಎಂದು ಹೇಳತೊಡಗಿದರು. ಇದು ಹೌದಾದರೆ, ಅದನ್ನೇ ಆಧರಿಸಿ ಬೇರೆ ಪೀಠಕ್ಕೆ ವರ್ಗಾಯಿಸಲು ಮನವಿ ಸಲ್ಲಿಸಬಹುದಿತ್ತಲ್ಲ? ಎಲ್ಲ ಮುಗಿದು ಹೋದ ಮೇಲೆ ನಮ್ಮ ವ್ಯರ್ಥ ಪ್ರಲಾಪಗಳು ಹೊರಹೊಮ್ಮುತ್ತವೆ. ನಮ್ಮ ಇಂಥ ಒಡಕಲು ಧ್ವನಿಗಳ ನಡುವೆ ಕಾವೇರಿ ಮೆಲ್ಲನೆ ಕಾಣೆಯಾಗಿಬಿಟ್ಟಳು.

ಮೊನ್ನಿನ ಹೋರಾಟದ ಒಳದನಿ ಜಲಚಳುವಳಿಯ ಪರವಾಗಿರಬಹುದು, ಆದರೆ, ಅದು ಹಿಂಸೆಗೆ ತಿರುಗುವಲ್ಲಿ ಭಾಷೆಯ ಹೆಸರಿನಲ್ಲಿ ದಂಧೆ ನಡೆಸುವ ಕೆಲವು ಸಂಘಟನೆಗಳು ಕಾರಣವಾಗಿರಬಹುದು. ಇವರ ವಾಹನಗಳು ಗಲಾಟೆಯ ಹಿಂದಿನ ದಿನವೇ ಎ?ಂದರಲ್ಲಿ ಓಡಾಡಿ ಹೋರಾಟಕ್ಕೆ ತಂತ್ರವನ್ನು ರೂಪಿಸುತ್ತವೆ. ಇವುಗಳ ಇತಿಹಾಸ ಗೊತ್ತಿರುವ ಪೊಲೀಸರಾಗಲಿ, ಗೃಹ ಇಲಾಖೆಯಾಗಲೆ, ಬಹಳ ಚಾಣಾಕ್ಷ ಚಾನಲ್‌ಗಳ ವರದಿಗಾರರಾಗಲಿ ಈ ಚಟುವಟಿಕೆಗಳ ಬಗ್ಗೆ ಯಾವುದೇ ಎಚ್ಚರಿಕೆ ವಹಿಸುವುದಿಲ್ಲ. ಹೋರಾಟಗಾರರಿಂದ ಕನ್ನಡಕ್ಕೇನು ಲಾಭವಾಗಿದೆ? ಹೋರಾಟಗಾರರಿಗೇನು ಲಾಭವಾಗಿದೆ ಎಂಬ ಕುರಿತು ನಮ್ಮಲ್ಲಿ ದಿಟ್ಟವಾದ ಚರ್ಚೆಗಳೇ ನಡೆದಿಲ್ಲ. ಈಗಣ ಪರಿಸ್ಥಿತಿಯಲ್ಲಿ ಅದು ನಡೆಯುವುದೂ ಸಾಧ್ಯವಿಲ್ಲ. ಹೀಗಾಗಿ, ಸಮಸ್ಯೆ ಹಾಗೆಯೇ ಮುಂದುವರಿಯುತ್ತಿರುತ್ತದೆ. ಕಾವೇರಿ ಗಲಭೆಯ ಆನಂತರ ಕೆಲವು ಬೇಜವಾಬ್ದಾರಿ ಮಾಧ್ಯಮಗಳು ನಡೆದುಕೊಂಡ ರೀತಿಯ ಬಗ್ಗೆ ತೀವ್ರ ಆಕ್ರೋಶ ಸಹಜವಾಗಿಯೇ ಪ್ರಕಟವಾಯಿತು.

ಆದರೆ, ಜವಾಬ್ದಾರಿಯುತ ಸ್ಥಾನದಲ್ಲಿರುವ ಯಾವ ರಾಜಕಾರಣಿಗಳೂ ಈ ಬಗ್ಗೆ ತಮ್ಮ ಅಸಮ್ಮತಿಯನ್ನು ಬಹಿರಂಗವಾಗಿ ಪ್ರಕಟಿಸಲಾರದೇ ಹೋದರು. ಕೇಂದ್ರ ಗೃಹ ಇಲಾಖೆಗೆ ತಲುಪಿದ ವಿಷಯಗಳು ರಾಜ್ಯ ಗೃಹ ಇಲಾಖೆಗೆ ತಲುಪದೇ ಇರುವುದು ತಮಾಷೆಯಾಗಿದೆ. ನಾಳೆ ಅವರಿಗೆ ಇವೇ ಮಾಧ್ಯಮಗಳ ಮೂಲಕ ಪ್ರಚಾರ ಬೇಕಲ್ಲ? ಕರ್ನಾಟಕ ಯಾರಿಗೆ ಬೇಕು? ಕಾವೇರಿಯಿಂದ ನಮಗೇನಾಗಬೇಕಿದೆ?

ಹೀಗೇ ನಮ್ಮ ರಾಜಕೀಯ ಆಶೋತ್ತರಗಳು, ಜಾತಿಯ ಪ್ರೇಮ ಮತ್ತು ಪ್ರಾದೇಶಿಕ ಭಾವನೆಗಳು ಕರ್ನಾಟದಿಂದ ಒಂದು ಧ್ವನಿ ಗಟ್ಟಿಯಾಗಿ ಹೊಮ್ಮದಂತೆ ಮಾಡಿವೆ. ಕೆಲವು ವಿಷಯಗಳಿಗೆ ಉತ್ತರ ಕರ್ನಾಟಕದವರು ಮಾತ್ರ ಹೋರಾಡಬೇಕು, ಕೆಲವಕ್ಕೆ ಮಂಡ್ಯದವರು ಮಾತ್ರ ತಲೆಕೊಡಬೇಕು, ಮತ್ತೆ ಕೆಲವಕ್ಕೆ ತುಳುವರು ಮಾತ್ರ ಧ್ವನಿ ಎತ್ತಬೇಕು. ಕೆಲವು ಸಮಸ್ಯೆಗಳು ಗೌಡರದು, ಕೆಲವು ಲಿಂಗಾಯತರದು, ಹಲವು ಹಿಂದುಳಿದವರದು. ಅವು ಕರ್ನಾಟಕದ ಸಮಸ್ಯೆ ಅಂತ ಯಾರಿಗೂ ಅನ್ನಿಸುವುದಿಲ್ಲ. ಈ ಒಡಕಲು ಭಾವನೆಗಳು ರಾಷ್ಟ್ರ ಮಟ್ಟದಲ್ಲೂ ಸಕ್ರಿಯವಾಗಿರುವುದು ಆತಂಕಕಾರಿ ವಿಷಯವಾಗಿದೆ.

ಉದಾಹರಣೆಗೆ, ಭಾರತೀಯ ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ತುಳುಭಾಷೆಯನ್ನು ಸೇರಿಸಿ, ಆ ಭಾಷೆಗೊಂದು ಅಧಿಕೃತ ಮಾನ್ಯತೆಯನ್ನು ತಂದುಕೊಳ್ಳಲು ತುಳುವರು ನಿರಂತರವಾಗಿ ಪ್ರಯತ್ನಿಸುತ್ತಲೇ ಇದ್ದಾರೆ. ಈ ಪ್ರಯತ್ನಗಳ ನಡುವೆಯೇ ತುಳುವನ್ನು ಹೊರತುಪಡಿಸಿ ಬೋಡೋ, ಡೋಗ್ರಿ, ಮೈಥಿಲಿ ಮತ್ತು ಸಂತಾಲಿ ಭಾಷೆಗಳನ್ನು ಸಂವಿಧಾನದಲ್ಲಿ ಸೇರಿಸಲಾಯಿತು. ಲಾಲ್‌ಕೃಷ್ಣ ಆಡ್ವಾಣಿ ಅವರು ಮೈಥಿಲಿ ಭಾಷೆಯ ಬಗ್ಗೆ, ಕರಣ್ ಸಿಂಗ್ ಅವರು ಡೋಗ್ರಿ ಭಾಷೆಯ ಬಗ್ಗೆ, ಅಟಲ್ ಬಿಹಾರಿ ವಾಜಪೇಯಿ ಅವರು ಬೋಡೋ ಭಾಷೆಯ ಬಗ್ಗೆ ಮತ್ತು ಬಸುದೇವ ಆಚಾರ್ಯರು ಸಂತಾಲಿ ಭಾಷೆಯ ಬಗ್ಗೆ ಲೋಕಸಭೆಯಲ್ಲಿ ಮಾತಾಡುವಾಗ ತುಳುವಿಗಾಗಿ ಹಠ ಹಿಡಿಯಬಲ್ಲ ಯಾವೊಬ್ಬ ರಾಜಕಾರಣಿಯೂ ಅಲ್ಲಿರಲಿಲ್ಲ. ಅನೇಕರಿಗೆ ಅದರ ಬಗ್ಗೆ ಕಾಳಜಿಯೂ ಇಲ್ಲ. ಹಿಂದೊಮ್ಮೆ ದೆಹಲಿ ಕರ್ನಾಟಕ ಸಂಘದ ಚುನಾವಣೆಯ ಸಂದರ್ಭದಲ್ಲಿ ತುಳುವರು ಕರ್ನಾಟಕ ಸಂಘವನ್ನು ಹೈಜಾಕ್ ಮಾಡ್ತಾರೆ ಎಂದು ಅಪಪ್ರಚಾರ ನಡೆದದ್ದಿದೆ. ಇದೀಗ ನೇತ್ರಾವತಿ ನದಿ ತಿರುವಿನ ಯೋಜನೆಯಲ್ಲಿ ತುಳುವರಿಗೆ ಅನ್ಯಾಯವಾಗುತ್ತಿದೆ ಎಂಬ ಭಾವ ಅಲ್ಲಿಯೂ ಮೂಡುತ್ತಿದೆ. ಈ ಬಗೆಯ ಕೆಲಸಗಳೇ ಒಂದಾಗಿ ಕೊನೆಗೆ ಪ್ರತ್ಯೇಕ ತುಳುನಾಡಿಗಾಗಿ ಬೇಡಿಕೆ ಇಡುವಂತೆ ಮಾಡಿದರೆ ಅಚ್ಚರಿಯಿಲ್ಲ. ಕೊಡಗಿನಲ್ಲೂ ಅಂಥದ್ದೊಂದು ಧ್ವನಿ ಆಗಾಗ ಕೇಳಿಸುತ್ತದೆ.

ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳ ವಿಷಯದಲ್ಲಿ ದಕ್ಷಿಣ ಕರ್ನಾಟಕ ಮತ್ತು ಕರಾವಳಿ ಕರ್ನಾಟಕದ ಅನೇಕರು ಸದಾ ದಿವ್ಯ ನಿರ್ಲಕ್ಷವನ್ನೇ ತೋರಿಸಿದರು. ಉತ್ತರ ಕರ್ನಾಟಕದ ದೊಡ್ಡಾಟ ನೋಡಲು ಕರಾವಳಿಯವರು ಬರುವುದಿಲ್ಲ, ಕರಾವಳಿಯ ಯಕ್ಷಗಾನ ಘಟ್ಟದ ಮೇಲಿನವರಿಗೆ ಇಷ್ಟವಾಗುವುದಿಲ್ಲ. ಬೆಂಗಳೂರು ಕೇಂದ್ರಿತ ಕನ್ನಡಿಗರಿಗೆ ಕರ್ನಾಟಕವೆಂದರೆ ಬೆಂಗಳೂರು ನಗರವೇ ಸರಿ. ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಕೆಲಸ ಮಾಡುವ ಹೊಸ ತಲೆಮಾರಿನ ಕನ್ನಡಿಗರನೇಕರಿಗೆ ಕೈಯಲ್ಲಿರುವ ಮೊಬೈಲ್ ಮಾತ್ರ ಕರ್ನಾಟಕ. ತಮ್ಮ ಮೊಬೈಲ್‌ಗೆ ಬರುವ ಸಂದೇಶಗಳಲ್ಲಿ ಸತ್ಯ ಎಷ್ಟು ಸುಳ್ಳು ಎಷ್ಟು ಎಂದು ತಿಳಿದುಕೊಳ್ಳಲು ಬೇಕಾದ ಜ್ಞಾನವೂ ಇವರಲ್ಲಿ ಇರುವುದು ಕಡಿಮೆ. ಇಂಥ ಬೆಳವಣಿಗೆಗಳು ಕರ್ನಾಟಕದ ಧ್ವನಿಯನ್ನು ಒಡೆಯುತ್ತವೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಕರ್ನಾಟಕದ ಒಡಕಲು ಧ್ವನಿಗಳನ್ನು ಒಂದುಗೂಡಿಸಲು ಇದೀಗ ಎಲ್ಲರೂ ಕೆಲಸಮಾಡಬೇಕಾಗಿದೆ. ಕರ್ನಾಟಕದ ಎಲ್ಲ ವೈವಿಧ್ಯಗಳ ನಡುವೆಯೂ ಭಾವನಾತ್ಮಕವಾದ ಒಂದು ಬೆಸುಗೆ ಇಲ್ಲದೇ ಹೋದರೆ, ಒಂದು ರಾಜ್ಯವಾಗಿ ಅದು ಸೋಲುತ್ತದೆ. ರಾಜ್ಯದ ಸಮಸ್ಯೆಗಳನ್ನು ಯಾವ ಪಕ್ಷ ಅಧಿಕಾರದಲ್ಲಿದೆ ಎಂಬ ಚೌಕಟ್ಟಿನಲ್ಲಿ ವಿಶ್ಲೇಷಿಸಿ ನಾವು ತೀರ್ಮಾನ ತೆಗೆದುಕೊಂಡರೆ, ಪಕ್ಷಗಳು ಗೆಲ್ಲಬಹುದು, ಆದರೆ, ರಾಜ್ಯ ಸೋಲುತ್ತದೆ. ಅದು ಜನತಂತ್ರದ ಸೋಲು ಕೂಡಾ ಹೌದು. ಕಾವೇರಿ ವಿವಾದ ಎಚ್ಚರಿಕೆಯ ಗಂಟೆ ಬಾರಿಸಿದೆ. ಅದನ್ನು ಸರಿಯಾಗಿ ಕೇಳಿಸಿಕೊಳ್ಳಬೇಕಾದ ಅಗತ್ಯ ನಮ್ಮೆಲ್ಲರದು. ಮನೆಗೆ ಬೆಂಕಿ ಬಿದ್ದಾಗ ಬೀಡಿ ಉರಿಸಿಕೊಳ್ಳುವ ಪ್ರವೃತ್ತಿ ಕೊನೆಯಾಗಬೇಕಿದೆ. ಅ

***ಡಾ. ಪುರುಷೋತ್ತಮ ಬಿಳಿಮಲೆ***
***ಕೃಪೆ : ಉದಯವಾಣಿ***





# ಗುರುಗಾಂವ್ ಕನ್ನಡ ಸಂಘದಲ್ಲಿ ಸಾಮೂಹಿಕ ಗಣೇಶೋತ್ಸವ

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಗುರುಗಾಂವ್ ಕನ್ನಡ ಸಂಘವು, ಸಾಮೂಹಿಕ ಶ್ರೀ ಗಣೇಶೋತ್ಸವವನ್ನು ಇದೇ ಸೆಪ್ಟೆಂಬರ್ 5 ರಿಂದ 11ರವರೆಗೆ ಗುರ್‌ಗಾಂವ್‌ನ ಶ್ರೀ ರಾಧಾಕೃಷ್ಣ ಮಂದಿರದಲ್ಲಿ ಅತ್ಯಂತ ಶ್ರದ್ದೆ ಮತ್ತು ಭಕ್ತಿಯಿಂದ ನಡೆಸಲಾಯಿತು.

ಶ್ರೀ ಗಣೇಶ ಪ್ರತಿಷ್ಠಾಪನೆಯನ್ನು ಸೋಮವಾರ ಬೆಳಿಗ್ಗೆ 11 ಗಂಟೆಗೆ ಮಾಡಲಾಯಿತು ಮತ್ತು ಅದರಂತೆಯೇ ಪ್ರತಿ ದಿನದ ಬೆಳಿಗ್ಗೆ ಹಾಗು ಸಂಜೆಯ ಪೂಜೆ ನಡೆಯಿತು. ಸಂಜೆಯ ಪೂಜೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಉಪಸ್ಥಿತರಿದ್ದು ಶ್ರೀಗಣೇಶನ ಕೃಪೆಗೆ ಪಾತ್ರರಾದರು. ಗುರ್‌ಗಾಂವ್ ಕನ್ನಡಿಗರು ತಮ್ಮ ಪರಿವಾರ ಸಮೇತ ಒಂದು ವಾರ ಕಾರ್ಯಕ್ರಮಕ್ಕೋಸ್ಕರ ಮೀಸಲಾಗಿರಿಸಿಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ. ಈ ಭಾರಿ ಪ್ರತಿ ದಿನ ರಾತ್ರಿ ಪೂಜೆಯ ನಂತರ ಪ್ರಸಾದ ಮತ್ತು ಭೋಜನದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಿದ್ದು ವಿಶೇಷವಾಗಿತ್ತು. ಪಕ್ಕದ ರಾಜ್ಯದ ಕನ್ನಡೇತರ ಸ್ನೇಹಿತರು ಮತ್ತು ಅದರ ಜೊತೆಗೆ ಕನ್ನಡೇತರ ಸ್ಥಳೀಯರ ಉಪಸ್ಥಿತಿ ಮತ್ತು ಅವರ ತನು ಮನ ಧನದ ಸಹಕಾರ ನಮ್ಮ ಶಕ್ತಿಯನ್ನು ಹಿಮ್ಮಡಿಯಾಗಿಸಿದೆ.

ಸ್ಥಳೀಯ ಕನ್ನಡಿಗರಿಗಾಗಿ ಶುಕ್ರವಾರ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು, ಕನ್ನಡಿಗರಿಂದ "ಸಾಂಸ್ಕೃತಿಕ ಕಾರ್ಯಕ್ರಮ"ಗಳು ಸುಂದರವಾಗಿ ಮೂಡಿ ಬಂದವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಹಯೋಗದೊಂದಿಗೆ, ಮಳವಳ್ಳಿ ಮಹದೇವಸ್ವಾಮಿ ಮತ್ತು ಸಂಗಡಿಗರಿಂದ 'ಭಕ್ತಿ ಲಹರಿ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮಳವಳ್ಳಿ ಮಹದೇವ ಸ್ವಾಮಿಯವರು 'ಮಹದೇಶ್ವರಾ, ದಯಬಾರದೇ ಬರಿದಾದ ಬಾಳಲ್ಲಿ ಬರಬಾರದೆ' ಈ ಹಾಡನ್ನು ಸ್ವತಃ ಹಾಡಿರುವುದು, ಈ ಹಾಡಿಗೆ ರಾಜ್ಯ ಪ್ರಶಸ್ತಿ ಸಹ ಸಿಕ್ಕಿದೆ ಹಾಗೂ ಹೊರದೇಶಗಳಲ್ಲಿ ಈ ಹಾಡನ್ನು ಹಾಡಿ ಹೆಸರುಗಳಿಸಿರುತ್ತಾರೆ. ಇಂತಹ ಹಾಡನ್ನು ಸ್ವತಃ ಅವರೇ ಗುರ್‌ಗಾಂವ್‌ನಲ್ಲಿ ಹಾಡಿದ್ದಾರೆ. ಮಳವಳ್ಳಿ ಮಹದೇವ ಸ್ವಾಮಿ ಮತ್ತು ಸಂಗಡಿಗರ ಹಾಡುಗಳನ್ನು ಕೇಳಿ ಆನಂದಿಸಿದೆವು.

ಮಂಟಪ ಮತ್ತು ವೇದಿಕೆಯ ಅಲಂಕಾರವನ್ನು ಹೀರೋ ಮತ್ತು ಹೋಂಡಾ ಹಾಗೂ ಇತರೆ ಸ್ನೇಹಿತರು ಸೇರಿ ಸುಂದರವಾಗಿ ಮಾಡಿದ್ದರು. ಸಂತೋಷ್ ಕೆ.ಕೆ. ಮತ್ತು ಕುಮಾರ ಸಿ. ನೇತೃತ್ವದಲ್ಲಿ ಹೀರೋ ಮತ್ತು ಹೋಂಡಾ ಕನ್ನಡಿಗರು ಸೇರಿ ಮಾಡಿದ ರುಚಿ ರುಚಿಯಾದ ಅಡುಗೆ, ರಾತ್ರಿ ಭೋಜನ, "ಶ್ರೀಗಣೇಶನ" ವಿಸರ್ಜನೆಯ ನಂತರದ ಭೋಜನದ ಸವಿಯನ್ನು ಎರಡೂ ದಿನ, ಸುಮಾರು 350 ರಿಂದ 400 ಜನ ಸವಿದರು.

ಶ್ರೀ ಗಣೇಶ ಮೂರ್ತಿ ವಿಸರ್ಜನೆಗೆ ಈ ಬಾರಿ ಡಮ್ ಡಮಾ ಕೆರೆಯಲ್ಲಿ ಅವಕಾಶ ಕೊಡದ ಕಾರಣ, ಭಸಾಯಿ ಗಾಂವ್, ಸೆಕ್ಟರ್–9 ಪಕ್ಕದ ಕೆರೆಯಲ್ಲಿ ವಿಸರ್ಜನೆ ಮಾಡಲಾಯಿತು. ವಿಸರ್ಜನೆ ಮಾಡಿ ಬಂದ ನಂತರ ಎಲ್ಲರಿಗೂ ಶ್ರೀ ರಾಧಾ ಕೃಷ್ಣ ಮಂದಿರದಲ್ಲಿಯೇ ಭೋಜನದ ವ್ಯವಸ್ಥೆ ಮಾಡಲಾಯಿತು.

*ಕೃಷ್ಣಪ್ಪ .ಎಂ*

# ಜನಕಪುರಿ ಕನ್ನಡ ಕೂಟದಲ್ಲಿ ಗಣೇಶೋತ್ಸವ

## ವಕ್ರತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭ, ನಿರ್ವಿಘ್ನಂ ಕುರುಮೇ ದೇವ ಸರ್ವಕಾರ್ಯೇಶು ಸರ್ವಧಾ!

ವಿಘ್ನೇಶ್ವರನನ್ನು ಸ್ತುತಿಸುವುದೇ ಆನಂದ ಆಹ್ಲಾದ ಸಂತಸ ಉಂಟಾಗುತ್ತದೆ, ಕೋಟಿ ಗಣಪನ ದರ್ಶನ ಒಂದೇ ಗಣಪನಲ್ಲಿ ಕಂಡರೆ ಜೀವನ ಧನ್ಯವಾಯಿತು ತಂದೆ ಎಲ್ಲರನ್ನು ಕಾಪಾಡು ಭಗವಂತ ಎಂದು ಕೈಮುಗಿಯುವುದು, ಅಂತಹ ಒಂದು ಸುಯೋಗ ನಮ್ಮ ಜನಕಪುರಿ ಕೂಟದ ವತಿಯಿಂದ ನಮ್ಮೆಲ್ಲರಿಗೂ ಬಂದೊದಗಿತು. ಇದೇ ಸೆಪ್ಟೆಂಬರ್ 11ನೇ ಭಾನುವಾರದಂದು ಜನಕಪುರಿ ಕನ್ನಡ ಕೂಟವು ಗಣೇಶೋತ್ಸವವನ್ನು ಆಚರಿಸಿತು. ಬಹಳ ಸಂಪ್ರದಾಯ ಬದ್ಧವಾಗಿ ತಳಿರು ತೋರಣಗಳಿಂದ ಗರಿಕೆ, ತಾವರೆಗಳ ಪರಿಮಳ ಪುಷ್ಪಗಳಿಂದ ದೀಪಾಲಂಕೃತದಿಂದ ವಿರಾಜಮಾನವಾಗಿದ್ದ ಜನಕಪುರಿಯ ಗಣೇಶನನ್ನು ನೋಡಲು ಎರಡು ಕಣ್ಣು ಸಾಲದಾಗಿತ್ತು.

ಜನಕಪುರಿಯ ಹೊಸ ಕಾರ್ಯಕಾರಿ ಸಮಿತಿಯ ವತಿಯಿಂದ ಆಚರಿಸುತ್ತಿರುವ ಮೊದಲ ಸಮಾರಂಭ ಗಣೇಶನ ಪೂಜೆಯಿಂದ ಆರಂಭವಾಯಿತು. ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಶ್ರೀನಾಥ ಅವರ ಮುಖಂಡತ್ವದಲ್ಲಿ ಶೇಷಗಿರಿ ನಾಯಕ್, ಗಂಗಾಧರ್ ಹಾಗು ಕಾರ್ಯಕಾರಿ ಸಮಿತಿಯ ಎಲ್ಲಾ ಪದಾಧಿಕಾರಿಗಳ ಸಹಯೋಗದೊಂದಿಗೆ ಗಣೇಶೋತ್ಸವ ಬಹಳ ವಿಜೃಂಭಣೆಯಿಂದ ಆಚರಿಸಿ ಸಂಭ್ರಮಿಸಲಾಯಿತು. ಜನಕಪುರಿ ಕನ್ನಡ ಕೂಟಕ್ಕೆ ಮೆರುಗನ್ನು ತಂದುಕೊಡುವುದು ಜನಕಪುರಿ ಮಹಿಳಾ ಮಂಡಳಿಯ ಮಹಿಳೆಯರು. ಅಂದು ಎಲ್ಲಾ ಮಹಿಳೆಯರು ಜರತಾರಿ ಸೀರೆಯನ್ನುಟ್ಟು ಶೃಂಗರಿಸಿಕೊಂಡು ದೇವಾಲಯದ ಒಳಹೊರಗೆ ಓಡಾಡಿಕೊಂಡು ಗಣೇಶನನ್ನೂ ಶೃಂಗರಿಸಿ, ಪೂಜೆಗೆ ಅಣಿಮಾಡುತ್ತಿದ್ದರು.

ಪ್ರಥಮವಾಗಿ ಗಣೇಶನನ್ನು ಪೀಠದಲ್ಲಿ ಪ್ರತಿಷ್ಠಾಪಿಸುವುದರ ಮೂಲಕ ಆರಂಭವಾದ ಪೂಜಾ ಕೈಂಕರ್ಯ ಶ್ರೀ ಹನುಮಂತಾ ಚಾರ್ಯರ ಪೌರೋಹಿತ್ಯದಲ್ಲಿ ಡಾ. ಅಶೋಕ ಇಟಿ ದಂಪತಿಗಳು ಜನಕಪುರಿಯ ಎಲ್ಲಾ ಸದಸ್ಯರುಗಳ ಪರವಾಗಿ ಪೂಜೆಗೆ ಕುಳಿತು ಪೂಜೆ ಫಲಪ್ರದ ಗೊಳಿಸಿದರು. ಮಂತ್ರ ಘೋಷಣೆ, ಹೋಮ ಹವನದ ದೂಪ, ದೀಪಗಳ ಘೋಷಣೆ ಮುಗಿಲು ಮುಟ್ಟಿತ್ತು. ನಂತರ ಮಹಿಳಾ ಮಂಡಳಿಯ ಸದಸ್ಯರಿಂದ ಭಜನೆ ಹಾಡಲಾಯಿತು. ಭಕ್ತಿ ಪ್ರಧಾನವಾದ ಹಾಡು ಹಾಡಲಾಯಿತು. ನಂತರ ಕರ್ನಾಟಕದಿಂದ ಆಗಮಿಸಿದ್ದ ಮುದ್ದು ಮೋಹನರು ಭಕಿಗೀತೆಗಳನ್ನು ಶುಶ್ರಾವ್ಯವಾಗಿ ಹಾಡಿದರು. ಭಕ್ತಿ, ಶ್ರದ್ದೆಯಿಂದ ಎಲ್ಲರು ನಮನ ಸಲ್ಲಿಸಿದರು. ನಂತರ ಮಹಾಮಂಗಳಾರತಿ ಮೊಳಗಿತು. ಪಂಚಕಜ್ಜಾಯ ಸುಸಜ್ಜಿತ ರೀತಿಯಲ್ಲಿ ಭಕಾದಿಗಳಿಗೆ ವಿತರಿಸಲಾಯಿತು. ಪೂಜೆಗೆ ಆಗಮಿಸಿದ್ದ ಎಲ್ಲಾ ಭಕ್ತಾದಿಗಳನ್ನು ಸಾಲಾಗಿ ಪಂಕ್ತಿಯಲ್ಲಿ ಕೂರಿಸಿ ಬಾಳೆ ಎಲೆಯನ್ನು ಹಾಕಿ ಊಟ ಬಡಿಸಿದರು. ಎಲ್ಲಾ ಕಡೆ ಕರ್ನಾಟಕದ ಸೊಗಡು, ಸಂಪ್ರದಾಯ, ಸಂಸ್ಕೃತಿ ರಾರಾಜಿಸುತಿತ್ತು, ಒಂದು ಕ್ಷಣ ನಾವು ದೆಹಲಿಯಲ್ಲಿದ್ದೆವೊ ಅಥವಾ ಕರ್ನಾಟಕದಲ್ಲಿದ್ದೆವೊ ಮರೆತು ಹೋಯಿತು. ಮಲ್ಲಿಗೆ ಹೂ, ತಾವರೆ, ಸೇವಂತಿಗೆಯ ಪರಿಮಳದಿಂದ ಆವೃತವಾಗಿದ್ದ ರಾಮಮಂದಿರ ರಾಜ ಮಂದಿರವಾಗಿತ್ತು. ನಾವು ನಮ್ಮತನವನ್ನು ಮರೆತಿಲ್ಲ, ನೀವು ನಿಮ್ಮತನ ಮರೆಯಬೇಡಿರಿ ಎಂಬುದನ್ನು ನೆನಪಿಸುತ್ತಿತ್ತು. ಪುಷ್ಕಳವಾದ ಭೋಜನಮಾಡಿ, ಪ್ರಸಾದ ಸ್ವೀಕರಿಸಿದೆವು. ಸಂಜೆ ಗಣೇಶನನ್ನು ರೋಹಿಣಿಯ ಬಳಿ ಇರುವ ಹೊಳೆಯಲ್ಲಿ ವಿಸರ್ಜನೆ ಮಾಡಿ ಮುಂದಿನ ವರ್ಷ ನಮ್ಮ ಮನೆ ಮಂದಿರಗಳಿಗೆ ಮರಳಿ ಬಾ ಗಣೇಶ ಎಂದು ಒಂದಿಸುತ್ತಾ ಸಂತೊಷದಿಂದ ಮನೆಗೆ ಹಿಂತಿರುಗಿದೆವು. ಗಣೇಶೋತ್ಸವದ ಸವಿನೆನಪನ್ನು ಸವಿಯುತ್ತಾ ಒಂದು ವರ್ಷದ ತನಕ ಮನದಲ್ಲಿ ಗಣೇಶನನ್ನು ಪೂಜಿಸೋಣ.

*ಲಾವಣ್ಯ ಬಸವರಾಜು*

# ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಷನ್‌ನಲ್ಲಿ ಗಣೇಶೋತ್ಸವ

ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಷನ್ ಇದೇ ಸೆಪ್ಟೆಂಬರ್ 7, 2016ರಂದು ಸಂಘದಲ್ಲಿ ಗಣೇಶ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿತು. ಸದಸ್ಯೆಯರು ಭಜನೆ, ಭಕ್ತಿಗೀತೆಗಳನ್ನು ಹಾಡಿ ಭಗವಂತನಿಗೆ ಭಕ್ತಿಮಾಲೆಯನ್ನು ಸಮರ್ಪಿಸಿದರು. ಹಬ್ಬದ ಪ್ರಯುಕ್ತ ಸದಸ್ಯೆಯರು ಮನೆಯಿಂದ ವಿಶೇಷ ಖಾದ್ಯಗಳನ್ನು ತಯಾರಿಸಿ ತಂದಿದ್ದನ್ನು ಶ್ರೀಗಣೇಶನಿಗೆ ಅರ್ಪಿಸಿ, ಬಂದಿದ್ದವರಿಗೆ ಪ್ರಸಾದ ಹಂಚಲಾಯಿತು. ಭೋಜನದ ಸವಿರುಚಿಯನ್ನು ಸವಿದ ಸದಸ್ಯೆಯರು ಹೊರಡುವ ಮುನ್ನ ಎಲ್ಲರಿಗೂ ಒಳ್ಳೆಯದಾಗಲಿ ಎಂದು ಮತ್ತೊಮ್ಮೆ ಗಣಪನಲ್ಲಿ ಪ್ರಾರ್ಥಿಸಿದರು.

*ಎಸ್ ಸಿ ಹೇಮಲತ*

# ಗಣೇಶ ಮಿತ್ರ ಮಂಡಳಿಯಲ್ಲಿ ಗಣೇಶೋತ್ಸವ



ಗಣೇಶ ಮಿತ್ರ ಮಂಡಳಿಯು ಸೆಪ್ಟೆಂಬರ್ 5ರ ಸೋಮವಾರ ಗಣೇಶ ಚತುರ್ಥಿಯಂದು ತನ್ನ 28ನೇ ವರ್ಷದ ಗಣೇಶೋತ್ಸವ ಆಚರಣೆಯನ್ನು ವಿಜೃಂಭಣೆಯಿಂದ ಆಚರಿಸಿತು. ಬೆಳಿಗ್ಗೆ 10.00 ಗಂಟೆಗೆ ಮೂರ್ತಿ ಪ್ರತಿಷ್ಟಾಪನೆಯೊಂದಿಗೆ ಪ್ರಾರಂಭವಾದ ಪೂಜಾ ಕಾರ್ಯವು ಮಂತ್ರ-ಘೋಷಾದಿ ಕೈಂಕರ್ಯಗಳೊಂದಿಗೆ ಯಶಸ್ವಿಯಾಗಿ ನೆರವೇರಿತು. ಮಂಡಳಿಯ ಪರವಾಗಿ ಮಿತ್ರ ಮಂಡಳಿಯ ಕಾರ್ಯದರ್ಶಿ ಶಶಿಕಾಂತ್ ಪಾಟೀಲ್ ದಂಪತಿ ಸಂಕಲ್ಪ ಪೂಜೆಯನ್ನು ಮಾಡಿದರು.

ಇದೇ ಸಂದರ್ಭದಲ್ಲಿ ಖ್ಯಾತ ಕಲಾವಿದರಾದ ಶ್ರೀ ಸುಧೀರ್ ಫಡ್ನೀಸ್‌ರವರ ಕಲಾ ನೈಪುಣ್ಯತೆಯಿಂದ ಅಲಂಕೃತಗೊಂಡಿದ್ದ ವೇದಿಕೆ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಗಣೇಶ ಮಂಡಳಿಯ ಸ್ಥಾಪಕ ಅಧ್ಯಕ್ಷರಾದ ಶ್ರೀಯುತ ಯು.ಎ. ಷರೀಫ, ಹಾಲಿ ಅಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು ಮತ್ತು ಮಿತ್ರಮಂಡಳಿಯ ಎಲ್ಲಾ ಸದಸ್ಯರುಗಳು ಅತ್ಯುತ್ಸಾಹದಿಂದ ಭಾಗವಹಿಸಿದರು. ನಂತರ ಅದೇ ದಿನ ಸಂಜೆ ಗಣೇಶ ವಿಗ್ರಹವನ್ನು ವಿಸರ್ಜಿಸಲಾಯಿತು. ಅ

*ಶಶಿಕಾಂತ ಪಾಟಿಲ್*

# ದೆಹಲಿ ಕನ್ನಡ ವಿದ್ಯಾ ಸಂಸ್ಥೆಯಲ್ಲಿ ಗಣೇಶೋತ್ಸವ



ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ, ಲೋಧಿ ಎಸ್ಟೇಟ್‌ನಲ್ಲಿ ಇದೇ ಸೆಪ್ಟೆಂಬರ್ 5ರಂದು 'ಗಣೇಶ ಚತುರ್ಥಿ' ಹಬ್ಬವನ್ನು ಭಕ್ತಿ ಪೂರ್ವಕವಾಗಿ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಸಂಸ್ಥೆಯ ಸಂಸ್ಕೃತ ಶಿಕ್ಷಕರು ಹಾಗೂ ಪಂಡಿತರಾದ ಶ್ರೀ ಗಣೇಶ ಹೆಗಡೆ ಅವರ ಪೌರೋಹಿತ್ಯದಲ್ಲಿ ಸಂಸ್ಥೆಯ ಮಾನ್ಯ ಪ್ರಾಂಶುಪಾಲರಾದ ಶ್ರೀ ಕೆ. ಟಿ. ಗಣೇಶ್ ಅವರು ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು.

ಈ ಸುಸಂದರ್ಭ ದಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೆ.ಆರ್. ರಾಮಮೂರ್ತಿ, ಗೌರವ ಕಾರ್ಯದರ್ಶಿ ಶ್ರೀ ಸಿ. ಆರ್. ಶ್ರೀನಿವಾಸ್ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎಸ್.ಡಿ. ಶ್ರೀನಿವಾಸ್ ಉಪಸ್ಥಿತರಿದ್ದರು. ಯಾವುದೇ ಜಾತಿ-ಧರ್ಮದ ಭೇದವಿಲ್ಲದೆ ಎಲ್ಲರನ್ನು ಒಂದುಗೂಡಿಸುವ ಈ ಆಚರಣೆಯಲ್ಲಿ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು, ಎಲ್ಲಾ ಶಿಕ್ಷಕ, ಶಿಕ್ಷಕೇತರ ವೃಂದದವರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಅ

*ಅರವಿಂದ ಬಿಜ್ಜೈ*



# ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯಲ್ಲಿ ಗಣೇಶೋತ್ಸವ

ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ವತಿಯಿಂದ ಪ್ರತಿವರ್ಷದಂತೆ ಈ ವರ್ಷದ ಗಣೇಶೋತ್ಸವ ಹಾಗೂ ವಾರ್ಷಿಕೋತ್ಸವವನ್ನು ಅದ್ದೂರಿಯಿಂದ ಅಶೋಕ ವಿಹಾರದ ಸಮುದಾಯ ಭವನ, ನವದೆಹಲಿಯಲ್ಲಿ ಇದೇ ಸೆಪ್ಟೆಂಬರ್ 5ರಂದು ಆಚರಿಸಲಾಯಿತು. ಬೆಳಿಗ್ಗೆಯಿಂದಲೇ ಸಮಿತಿಯ ಎಲ್ಲಾ ಸದಸ್ಯರುಗಳು ಹಾಗೂ ಕುಟುಂಬದವರು ಸೇರಿ ಗಣೇಶ ಮೂರ್ತಿ ಪ್ರತಿಷ್ಟಾಪನೆ, ಪ್ರಸಾದ ವಿನಿಯೋಗ ಹಾಗೂ ಭೋಜನದ ನಂತರ ಸಜ್ಜಾಗಿದ್ದ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ನಂತರ ವಾಡಿಕೆಯಂತೆ ಶ್ರೀವಿನಾಯಕನ ಮೂರ್ತಿಯ ವಿಸರ್ಜನೆ ರೋಹಿಣಿಯ ದೊಡ್ಡ ಕಾಲುವೆಯಲ್ಲಿ ಮಾಡಲಾಯಿತು. ಅ

*ಎ.ಟಿ. ಶ್ರೀನಿವಾಸ*

# ಖೋಖೋ ಪಂದ್ಯಾಟದಲ್ಲಿ ಕನ್ನಡ ಶಾಲೆಯ ವಿದ್ಯಾರ್ಥಿಗಳ ಸಾಧನೆ



ದೆಹಲಿ ಶಿಕ್ಷಣ ಇಲಾಖೆಯ ವತಿಯಿಂದ ಇತ್ತೀಚೆಗೆ ನಡೆದ ವಲಯ ಮಟ್ಟದ ಖೋ ಖೋ ಪಂದ್ಯಾಟದಲ್ಲಿ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯು ಬಾಲಕರ ವಿಭಾಗದ ಸಬ್ ಜೂನಿಯರ್, ಜೂನಿಯರ್ ಹಾಗೂ ಸೀನಿಯರ್ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದೆ. ಅದಲ್ಲದೆ ಬಾಲಕಿಯರ ಸಬ್ ಜೂನಿಯರ್, ಜೂನಿಯರ್ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಮತ್ತು ಸೀನಿಯರ್ ವಿಭಾಗದಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿದೆ. ವಲಯ ಮಟ್ಟದಲ್ಲಿ ಭಾಗವಹಿಸಿದ ಸುಮಾರು ಎಂಟು ಶಾಲೆಯ ಬಲಿಷ್ಠ ತಂಡಗಳನ್ನು ಸೋಲಿಸಿ ಈ ಅಮೋಘ ಸಾಧನೆ ಮಾಡಿದೆ. ಈ ಮಕ್ಕಳಿಗೆ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಶಿವರಾಮ್ ಮಣಿಯಾಣಿ ಮತ್ತು ಕುಮಾರಿ ಡೆರಿಲ್ ಜೆಸಿಕಾ ಫೆರ್ನಾಂಡಿಸ್ ಅವರು ತರಬೇತಿ ನೀಡಿರುತ್ತಾರೆ. ಅ

*ಅರವಿಂದ ಬಿಜ್ಜೈ*

# ರಾಷ್ಟ್ರ ನಿರ್ಮಾಣದಲ್ಲಿ ನಮ್ಮ ಪಾತ್ರ

## ಗುರ್‌ಗಾಂವ್ ಕನ್ನಡ ಸಂಘದಿಂದ ವಿಚಾರ ಸಂಕಿರಣ

ಗುರ್‌ಗಾಂವ್ ಕನ್ನಡ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ 'ರಾಷ್ಟ್ರ ನಿರ್ಮಾಣದಲ್ಲಿ ನಮ್ಮ ಪಾತ್ರ ಒಂದು ವಿಚಾರ ಸಂಕಿರಣ' ಕಾರ್ಯಕ್ರಮವನ್ನು ಗುರ್‌ಗಾಂವ್‌ನಲ್ಲಿ ಇದೇ ಸೆಪ್ಟೆಂಬರ್ 18ರಂದು ನಡೆಸಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ರಾಜ್ಯಸಭೆ ಸದಸ್ಯ, ಶಿಕ್ಷಣ ತಜ್ಞ ಹಾಗೂ ಸಮಾಜ ಸುಧಾರಕರಾದ ಡಾ. ಬಸವರಾಜ



ಪಾಟೀಲ ಸೇಡಂ ಅವರು ಮಾತಾಡುತ್ತಾ ದೇಶದಲ್ಲಿ ರಾಜಕೀಯ ನಾಯಕರು ಸರಿಯಾಗಿ ಇದ್ದಾರೆ, ಆದರೆ ಸರಿ ಇಲ್ಲದವರು ಅಂದರೆ ಪ್ರಜೆಗಳು. ಯಾಕೆಂದರೆ ಪ್ರಜೆಗಳು ಒಬ್ಬ ಒಳ್ಳೆಯ ವ್ಯಕ್ತಿಯನ್ನು ಚುನಾಯಿಸಿ ಕಳುಹಿಸುವುದರಲ್ಲಿ ಯಾವಾಗಲೂ ಎಡವುತ್ತಾರೆ. ಯಾಕೆಂದರೆ ಅವರಿಗೆ ಜಾತಿ, ಪಂಗಡ ಮತ್ತು ತಮ್ಮ ಊರು ಎಂದು ಮುಖ್ಯ ಆಗಿರುತ್ತದೆ. ಯಾವುದೇ ಸರಕಾರಿ ಕಾಯ್ದೆ ಮತ್ತು ಕಾನೂನುಗಳನ್ನು ಸರಿಯಾಗಿ ಪಾಲಿಸುವುದಿಲ್ಲ ಎಂದರು. ಭಾರತ ದೇಶದಲ್ಲಿ ಅದರಲ್ಲಿ ಮುಖ್ಯವಾಗಿ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯದಲ್ಲಿ ಒಂದೇ ಸಲ ಶ್ರೀಮಂತ ಆಗಬೇಕು ಎಂದು ರೈತರು ಜೂಜಿನ ರೀತಿಯಲ್ಲಿ ಕೃಷಿ ಮಾಡುವವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅವರಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಆ ಪ್ರಮಾಣ ಬಹಳ ಕಡಿಮೆ ಇರುತ್ತದೆ. ಸಮಗ್ರ ಕೃಷಿ ಪದ್ಧತಿಯನ್ನು ಅಳವಡಸಿಕೊಂಡು, ಯಾರ ಮನೆಯ ಮುಂದೆ ಹಸು, ಕುರಿ, ಕೋಳಿ ಸಾಕುವ ಮೂಲಕ ಆರ್ಥಿಕ ಸ್ಥಿರತೆ ಕಾಪಾಡಿ ಕೊಳ್ಳುವವರು ಎಂದೆಂದಿಗೂ ಆತ್ಮಹತ್ಯೆಮಾಡಿಕೊಳ್ಳುವುದಿಲ್ಲ ಎಂದರು.

ವಿಶ್ವದಲ್ಲೇ ಶೇಕಡಾ 30ರಷ್ಟು ಕೃಷಿ ಭೂಮಿಯನ್ನು ಹೊಂದಿದ ಏಕೈಕ ದೇಶ ಅಂದರೆ ಭಾರತ. ನಾವು ಮನಸ್ಸು ಮಾಡಿದರೆ ವಿಶ್ವದ 400 ಕೋಟಿ ಜನಸಂಖ್ಯೆಗೆ ಆಹಾರ ಒದಗಿಸಬಹುದು. ಯುರೋಪಿಯನ್ ದೇಶಗಳಲ್ಲಿ ಮಕ್ಕಳನ್ನು ಮನೆಯ ಪರಿಸರ ಮತ್ತು ಸುತ್ತಮುತ್ತಲಿನ ಪರಿಸರ ಅಲೆಯಲು ಏಳು ವರ್ಷಗಳ ಕಾಲ ಮುಕ್ತವಾಗಿ ಬಿಟ್ಟಿರುತ್ತಾರೆ. ಎಂಟನೆಯ ವರ್ಷಕ್ಕೆ ಅವರಲ್ಲಿ ಶಿಕ್ಷಣ ಶುರುವಾಗುತ್ತದೆ. ಅದರೆ ನಮ್ಮಲ್ಲಿ ಎಲ್.ಕೆ.ಜಿ.ಯಲ್ಲಿ ಐ.ಎ.ಎಸ್. ಪಾಸ್ ಮಾಡಬೇಕೆಂದು ನಮ್ಮ ಪೋಷಕರ ಅಭಿಲಾಷೆ. ದೇಶದಲ್ಲಿ ಪ್ರತಿ ನೂರು ಜನರಲ್ಲಿ ಎಂಟು ಜನರಿಗೆ ಮಾತ್ರ ಉದ್ಯೋಗ ಸಿಗುವ ಅವಕಾಶ ಇದೆ. ಮೊದಲು ಪ್ರಜೆಗಳು ಸರಕಾರ ನೌಕರಿ ಕೊಡುತ್ತದೆ ಅನ್ನುವ ಯೋಚನೆಯಿಂದ ಹೊರಗೆ ಬರಬೇಕು, ಯಾಕೆಂದರೆ ಸರಕಾರ ಇರುವುದು ಕೇವಲ ಉತ್ತಮ ಆಡಳಿತ ಕೊಡುವುದಕ್ಕೆ ಎಂದು ಡಾ. ಬಸವರಾಜ ಪಾಟೀಲ ಸೇಡಂ ಅವರು ವಿವರಿಸಿದರು. ದೇಶದ 700 ಸಂಸದರಲ್ಲಿ ಎಲ್ಲವರು ಕೆಟ್ಟ ಜನಗಳು ಅಲ್ಲ, ಕೆಟ್ಟ ಸಂಸದರಲ್ಲಿ ಕೇವಲ 40 ರಿಂದ 50 ಜನ ಇದ್ದಾರೆ. ವ್ಯವಸಾಯ ರಂಗವು ದೇಶಕ್ಕೆ 30% ಉದ್ಯೋಗ ಅವಕಾಶಗಳನ್ನು ಕಲ್ಪಿಸಿ ಕೊಡುತ್ತದೆ ಅದರೆ ಆ ರಂಗವನ್ನು ನಾವು ಕಡೆಗಣಿಸುತ್ತೇವೆ. ಕಾವೇರಿ ವಿವಾದ ಬಗೆಹರಿಸಲು ಮತ್ತೊಂದು ಸಲ ನೀರಾವರಿ ಯೋಜನೆ ನೀತಿಯನ್ನು ಬದಲಿಸಿದರೆ ಮಾತ್ರ ಅದಕ್ಕೆ ಪರಿಹಾರ ಸಿಗಬಹುದು ಎಂದು ಹೇಳಿದರು.

**ದೇಶದಲ್ಲಿ ರಾಜಕೀಯ ನಾಯಕರು ಸರಿಯಾಗಿ ಇದ್ದಾರೆ, ಆದರೆ ಸರಿ ಇಲ್ಲದವರು ಅಂದರೆ ಪ್ರಜೆಗಳು. ಯಾಕೆಂದರೆ ಪ್ರಜೆಗಳು ಒಬ್ಬ ಒಳ್ಳೆಯ ವ್ಯಕ್ತಿಯನ್ನು ಚುನಾಯಿಸಿ ಕಳುಹಿಸುವುದರಲ್ಲಿ ಯಾವಾಗಲೂ ಎಡವುತ್ತಾರೆ. ಯಾಕೆಂದರೆ ಅವರಿಗೆ ಜಾತಿ, ಪಂಗಡ ಮತ್ತು ತಮ್ಮ ಊರು ಎಂದು ಮುಖ್ಯ ಆಗಿರುತ್ತದೆ. ಯಾವುದೇ ಸರಕಾರಿ ಕಾಯ್ದೆ ಮತ್ತು ಕಾನೂನುಗಳನ್ನು ಸರಿಯಾಗಿ ಪಾಲಿಸುವುದಿಲ್ಲ**

ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ವಹಿಸಿದ್ದ ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತಾಡುತ್ತಾ ಹೊರನಾಡಿನಲ್ಲಿರುವ ನಮಗೆ ಒಳನಾಡಿನಲ್ಲಿ ಏನಾಗುತ್ತದೆ ಅನ್ನುವ ಅರಿವು ಕಡಿಮೆ ಇರುತ್ತದೆ. ಆದ್ದರಿಂದ ರಾಜ್ಯದ ಬಗ್ಗೆ ನಾವು ಹೆಚ್ಚು ತಿಳಿದುಕೊಳ್ಳುವ ಕೆಲಸ ಮಾಡಬೇಕು ಎಂದರು. ಭಾರತ ದೇಶ ವಿಶಾಲವಾದ ದೇಶ ಅಫಘಾನಿಸ್ಥಾನದಿಂದ ಹಿಡಿದು ಬಾಂಗ್ಲಾ ದೇಶ, ಶ್ರೀಲಂಕಾ, ಪಾಕಿಸ್ತಾನ, ನೇಪಾಳ ಮತ್ತು ಇಂಡೊನೇಷ್ಯಾವರೆಗೆ ಹರಡಿತ್ತು. ಕರ್ನಾಟಕದ ಬಗ್ಗೆ ತಿಳಿಯಬೇಕೆಂದರೆ ನಮ್ಮ ಶಾಸನಗಳು ವಾರಣಾಸಿಯಲ್ಲಿ ಸಿಗುತ್ತವೆ. ಅಂದರೆ ಕರ್ನಾಟಕ ಎಷ್ಟು ವಿಶಾಲವಾಗಿತ್ತು ಎಂದು ಅರ್ಥವಾಗುತ್ತದೆ ಎಂದರು. ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ 23 ಕೋಟಿ ಜನಸಂಖ್ಯೆ ಅಭ್ಯಾಸ ಮಾಡಿದರೆ ಉನ್ನತ ಶಿಕ್ಷಣಕ್ಕೆ ಬರುವ ಸಮಯಕ್ಕೆ 20 ಕೋಟಿ ಜನ ಕಾಣೆಯಾಗುತ್ತಾರೆ. ಅಂದರೆ ಅವರು ಎಲ್ಲಿಗೆ ಹೋದರೂ ಯಾರಿಗೆ ಗೊತ್ತಾಗುತ್ತಿಲ್ಲ ಎಂದು ಡಾ. ಬಿಳಿಮಲೆ ನುಡಿದರು. ಭಾರತ ಇತಿಹಾಸವನ್ನು ಎತ್ತಿ ಹಿಡಿದಾಗ ಭಾರತದ ಅತ್ಯಂತ ಸುಂದರವಾದ ಚರಿತ್ರೆಯಲ್ಲಿ ತಾಜ್‌ಮಹಲ್ ಕಟ್ಟಿದ ಷಾಹಜಹಾನ್‌ಗೆ ಜಾಗವಿರಬೇಕು ಎಂದರು. ಭಾರತವನ್ನು ಆಳುತ್ತಿದ್ದ ವಿದೇಶಿಯರ ಕೈಕೆಳಗೆ ಕೆಲಸ ಮಾಡಿದ ಪಾರ್ಸಿಗಳು ಪಾರ್ಸಿ ಸಾಹಿತ್ಯಕ್ಕೆ ಕೊಟ್ಟ ಕೊಡುಗೆಯನ್ನು ನಾವು ಕಾಪಾಡಬೇಕು ಎಂದು ಅವರು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತ ಪ್ರಬುದ್ಧ ನಾಯಕರು ಹೇಳಿದ ಮಾತುಗಳಂತೆ ದೇಶ ಕಟ್ಟುವುದು ಸುಲಭದ ಕೆಲಸ. ದ್ವೇಷ ಕಟ್ಟುವುದು ಬಿಟ್ಟುಬಿಡಿ ಎಂದು ಹೇಳಿದರು.

ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಡಿ.ವಿ.ಎಸ್ ಮೂರ್ತಿಯವರು ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಉಗ್ರಗಾಮಿಗಳ ಮೋಸದ ಕೃತ್ಯಕ್ಕೆ ಬಲಿಯಾಗಿ ವೀರ ಮರಣ ಹೊಂದಿದ 20 ಸೈನಿಕರಿಗೆ ಮೌನ ಸಂತರ್ಪಣೆ ಅರ್ಪಿಸಿದರು. ಗಡಿಯಲ್ಲಿ ಸೈನಿಕ ವ್ಯವಸ್ಥೆಯಲ್ಲಿ ಪಟ್ಟಣದಲ್ಲಿ ಸ್ಥಳೀಯ ಪೊಲೀಸ್ ವ್ಯವಸ್ಥೆಯಲ್ಲಿ ಏರುಪೇರು ಅದರೆ ದೇಶದಲ್ಲಿ ಮತ್ತು ಪಟ್ಟಣದಲ್ಲಿ ಶಾಂತಿ ಭದ್ರತೆಗೆ ಭಂಗ ಉಂಟಾಗುತ್ತದೆ ಎಂದು ಅವರು ಹೇಳಿದರು.

ಹಚ್ಚೇವು ಕನ್ನಡದ ದೀಪ ಕಾರ್ಯಕ್ರಮದಿಂದ ವಿಚಾರ ಸಂಕಿರಣ ಆರಂಭವಾಯಿತು. ವಿಚಾರಣ ಸಂಕಿರಣದಲ್ಲಿ ಸುಮಾರು 150 ಜನರು ಭಾಗವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಶ್ರೀ ಕೃಷ್ಣಪ್ಪ ಎಂ. ಅವರು ಧನ್ಯವಾದಗಳನ್ನು ಅರ್ಪಿಸಿದರು. ಅ

*ಚಂದ್ರಶೇಖರ್ ಜೋಳದರಾಶಿ*

**ಅಭಿಮಾನದ ಅಭಿನಂದನೆಗಳು**

**ಅ**ಕ್ಕರೆಯಿಂದ ಆಸ್ತೆಯಿಂದ ಜನ್ಮತಾಳಿದ
'ಅಭಿಮತ'ಳು
**ಭಿ**ನ್ನ ಭಿನ್ನ ರುಚಿಗಳೊಂದಿಗೆ ಬೆಳೆದು
**ಮ**ಮತೆಯ ಮಗಳಾಗಿ ದೆಹಲಿ
ಕರ್ನಾಟಕ ಸಂಘದ ಒಲವಿನ
ಕನ್ನಡಿಗರನ್ನು
**ತ**ನ್ನವರು, ನನ್ನವರು ಎಂದು ಎಲ್ಲರನ್ನು
ಸತ್ಕರಿಸುತ್ತಾ, ಆಚರಿಸುತ್ತಾ, ಇಪ್ಪತ್ತಾರರ
ಹರೆಯದ ದಿಟ್ಟ ಯುವತಿಯಾಗಿ
ಸುಂದರೀಮಣಿಯಾಗಿ ಘನವಾದ ವಿಷಯಗಳ
ಲೇಖನ ಸರಮಾಲೆ ಧರಿಸಿ ಅನೇಕ ಸುಂದರ
ದೃಶ್ಯಗಳನ್ನು ದರ್ಶಿಸುತ್ತಾ ಕರ್ನಾಡಿನ ನಡೆ,
ನುಡಿ, ಸಂಸ್ಕೃತಿ, ಸಂಪ್ರದಾಯಗಳ ಬಗ್ಗೆ
ವಿವರಿಸುತ್ತಾ ಭಾರತದ ಎಲ್ಲಾ ದಿಶೆಗಳಲ್ಲಿಯೂ
ಪ್ರಚಲಿತಳಾಗಿದ್ದಾಳೆ.

ಅವಳಿಗೆ ಜನ್ಮದಾತರಾದ ದೇಶದ ರಾಜಧಾನಿಯ ಕನ್ನಡಿಗರು ಈ ಮುದ್ದಿನ ಮಗಳು ನಲುಗದಂತೆ ಪೋಷಿಸುತ್ತಾ ಸದ್ಭಾವನಾ ಪೂರ್ವಕವಾಗಿ ಸಫಲಗೊಳ್ಳುತ್ತಿರುವುದು ಒಂದು ಮಹತ್ತರವಾದ ಮಹಾಸಾಧನೆ!

ಇತ್ತೀಚೆಗಂತೂ ಅತ್ಯಂತ ಸುಂದರ ಉಡುಗೆ, ತೊಡುಗೆಯೊಡನೆ ಕಂಗೊಳಿಸುತ್ತಾ ಎಲ್ಲರ ಮನಸ್ಸನ್ನು ಮುದಗೊಳಿಸಿದ್ದಾಳೆ. ಅವಳಿಗೆ ತನ್ನ ಬುದ್ಧಿ ತಿಳಿದಂದಿನಿಂದ ಜಾಗೃತೆಯಿಂದ ಏನೆಲ್ಲಾ ವಿಷಯಗಳನ್ನು ಸಂಗ್ರಹಿಸಿ, ಪ್ರಾಚೀನತೆ, ಆಧುನಿಕತೆ,




ಸಂಪ್ರದಾಯ, ಸಂಸ್ಕಾರ, ಸಂಸ್ಕೃತಿಗಳನ್ನು ಸಮತೋಲನದಿಂದ ತನ್ನ ಮಡಿಲಲ್ಲಿ ತುಂಬಿಕೊಂಡು ವರ್ಧಿಸುತ್ತಿದ್ದಾಳೆ.

ಈ ನಮ್ಮ ಅಭಿಮಾನದ ಯುವತಿಯು ಆರೋಗ್ಯವಾಗಿ ಬೆಳೆಯಲು ಅವಳ ಜನ್ಮದಾತೆಯ ಪೋಷಕರು ಸಹಕರಿಸಿ, ಅವಳ ಪ್ರಗತಿಗಾಗಿ ತನುಮನದಿಂದ, ಜತನದಿಂದ ಅವಳು ಭಾರತದಲ್ಲೇ ಒಬ್ಬ ಶ್ರೇಷ್ಠ ತ್ರಕ್ಷರಿ ಕನ್ನಡ ವಾಹಕಳಾಗಿ, ಹೆಮ್ಮೆಯ ಒಡತಿಯಾಗಿ ಬಾಳಲು ಹಾರೈಸಲಿ. ಈ ಅಭಿಮತಳನ್ನು ಮೆಚ್ಚಿ ದೆಹಲಿ ಕರ್ನಾಟಕ ಸಂಘದ ಅಭಿಮತ ಸಂಪಾದಕ ಮಂಡಳಿಯನ್ನು ಅಭಿನಂದಿಸುವ. ಅ

***ಡಾ. ಅಹಲ್ಯಾಚಿಂತಾಮಣಿ***

**ಅ**ಖಂಡ ಕರ್ನಾಟಕದ–ಅದರಲ್ಲೂ ದಕ್ಷಿಣ ಕನ್ನಡದ ಕುಗ್ರಾಮ ಅನ್ನಿಸಿ ಹಿಂದುಳಿದ ಪ್ರದೇಶವೆಂದು ಸಾರಿದ ಸುಳ್ಯ ವಲಯದ ಎರಡು ಅಕ್ಷಿಗಳಂತಿರುವ ವಸಂತ ಶೆಟ್ಟಿ ಬೆಳ್ಳಾರೆ ಹಾಗೂ ಡಾ. ಪುರುಷೋತ್ತಮ ಬಿಳಿಮಲೆಯವರೆ ನಿಮಗಿದೋ ತುಂಬು ಹೃದಯದ ಅಭಿನಂದನೆಗಳು. ಭಾರತದ ಹೃದಯ ಅನ್ನಿಸಿದ ದೆಹಲಿಯ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಕಾರ್ಯ ನಿರ್ವಾಹಕರಾದ ನೀವುಗಳು ಅಭಿಮತದ ನೇರ ಮಾತು ಎಂಬ ಅಂಕಣದಲ್ಲಿ ವಿವರಿಸಿದ ಹಲವಾರು ಕಾರ್ಯಗತಗೊಳಿಸಲು ಸಿದ್ಧವಾದ ಯೋಜನೆಗಳ ಅನುಷ್ಠಾನಕ್ಕಾಗಿ ತಮಗೆ ಈ ಮೆಚ್ಚುಗೆಯ ನುಡಿಗಳು. ಅಕ್ಷರ ಮಾಧ್ಯಮದ ಉನ್ನತಿಗಾಗಿ ಇಂತಹ ಹಲವಾರು ಸೇವಾ ಕಾರ್ಯಗಳು ನಿಮ್ಮಿಂದ ಇನ್ನಷ್ಟು ಕೈಗೂಡುವಂತಾಗಲಿ ಎಂದು ತಮಗೆ ಶುಭ ಹಾರೈಸುತ್ತಿದ್ದೇನೆ. ಅ

***ಕೀರಿಕ್ಕಾಡು ವನಮಾಲ ಕೇಶವ ಭಟ್ಟ***

**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
Oct-2016, Vol. No.27, Issue No.1, Price Rs.1/- RNI Regn. No. 53405/91, DL-SW-1/4016/16-18
Printout Date : Oct 15th / 16th, Postal Date :17th / 18th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.



ಏಳು ದಿನಗಳ ಉತ್ಸವದ ನಂತರ ಮೆರವಣಿಗೆಯಲ್ಲಿ ತೆರಳಿದ ಗಣೇಶ



ಗಣೇಶನನ್ನು ಯಮುನಾ ನದಿಯ ದಂಡೆಯಲ್ಲಿ ಬೀಳ್ಕೊಡಲು ಬಂದ ಸಂಘದ ಸದಸ್ಯರು